
ತಿರುಮಲ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಜುಲೈ 2021, ಬೆಲೆ ರೂ. 5/-



ತಿರುಮಲ ಸ್ವಾಮಿಯವರ ಆಣಿವರ ಆಸ್ಥಾನ

16 ಜುಲೈ 2021

## ತಿರುಮಲೆ ಸ್ವಾಮಿಯವರ ಆಲಯದಲ್ಲಿ ನಡೆದ ಜ್ಯೇಷ್ಠಾಭಿಷೇಕದ ದೃಶ್ಯಮಾಲಿಕೆ (2021,ಜೂನ್ 22 ರಿಂದ 24 ರ ವರೆಗೆ)



# ಭಗವದ್ಗೀತೆ

**ತಾನ್ ಸಮೀಕ್ಷ್ಯಸ ಕೌಂತೇಯಃ**
**ಸರ್ವಾನ್ ಬಂಧೂನವಸ್ಥಿತಾನ್**
**ಕೃಪಯಾ ಪರಯೋಽವಿಷ್ಟಃ**
**ವಿಷೀದನ್ನಿದಮಬ್ರವೀತ್ ॥**

(ಶ್ರೀ ಮದ್ಭಗವದ್ಗೀತೆ ಅಧ್ಯಾಯ - 1, ಶ್ಲೋಕ - 27)

ಹೀಗೆ ಅಲ್ಲಿ ನೆರೆದಿರುವ ಬಂಧುಗಳನ್ನೆಲ್ಲ ನೋಡಿ ಅರ್ಜುನನು ತುಂಬ ಕನಿಕರಗೊಂಡು ವಿಷಾದದಿಂದ ಈ ಮಾತನ್ನು ಹೇಳಿದನು.





ಬಾರಯ್ಯ ವೆಂಕಟರಮಣ ಭಕ್ತರ ನಿಧಿಯೇ
ತೋರೋ ನಿನ್ನಯ ದಯೆ ತೋಯಜಾಂಬಕನೆ

ವೇದಗೋಚರ ಬಾರೋ ಆದಿಕಚ್ಛಪ ಬಾರೋ
ಮೋದಸೂಕರ ಬಾರೋ ಸದಯ ನರಸಿಂಹ ಬಾರೋ

ವಾಮನ ಭಾರ್ಗವ ಬಾರೋ ರಾಮಕೃಷ್ಣನೆ ಬಾರೋ
ಪ್ರೇಮದ ಬುದ್ಧನೆ ಬಾರೋ ಸ್ವಾಮಿ ಕಲ್ಕಿಯೆ ಬಾರೋ

ಅರವಿಂದನಾಭ ಬಾರೋ ಸುರರ ಪ್ರಭುವೆ ಬಾರೋ
ಪುರುಹೂತವಂದ್ಯ ಬಾರೋ ಪುರಂದರವಿಠಲ ಬಾರೋ.

- ಶ್ರೀಪುರಂದರದಾಸರು

(ಆರನೆಯ ದಶಕ)

# ದಯಾ ಶತಕಮ್



- ಎನ್. ನರಸಿಂಹಾಚಾರ್ಯ

**ವೃಷಗಿರಿಕೃಷ್ಣ ಮೇಘಜನಿತಾಂ ಜನಿತಾಪಹರಾಂ ತ್ವದಭಿಮತಿಂ ಸುವೃಷ್ಟಿಮುಪಜೀವ್ಯ ನಿವೃತ್ತತೃಷಃ।**

**ಬಹುಷು ಜಲಾಶಯೇಷು ಬಹುಮಾನ ಮಪೋಹ್ಯ ದಯೇ ನ ಜಹತಿ ಸತ್ಪಥಂ ಜಗತಿ ಚಾತಕವತ್ಕೃತಿನಃ ॥೫೮॥**

ಹಿಂದಿನ ಪದ್ಯದಲ್ಲಿ ಅನುಕೂಲ್ಯಸಂಕಲ್ಪವೇ ಮೊದಲಾದ ಪ್ರಪತ್ತಿಯ ಅನುಕೂಲಗಳನ್ನು ತಿಳಿಸಿರುವರು. ಪ್ರಕೃತ್ಯ ಭಗವಂತನ ದಯೆಯೇ ತನಗೆ ರಕ್ಷಕವೆಂದು ವರಿಸುವಾಗ ಪ್ರಪತ್ತಿಯ ಇತರ ಅಂಗಗಳು ಪ್ರಸ್ತಾಪಿಸಲ್ಪಡುತ್ತವೆ. ಆ ಅಂಗಗಳನ್ನು ಪ್ರಸ್ತಾಪಿಸುವ ವ್ಯಾಜದಿಂದ ಆಳ್ವಾರುಗಳಂತಹ ಹಿರಿಯರ ಅನುಷ್ಠಾನವನ್ನು ತಿಳಿಯಪಡಿಸಿ, ಆ ಮೂಲಕ ದಯೆಯನ್ನು ವರ್ಣಿಸುತ್ತಾರೆ.

ಜಾತಕಪಕ್ಷಿಗಳು ಲೋಕದಲ್ಲಿ ಕೆರೆಕಟ್ಟೆಯೇ ಮೊದಲಾದ ಅನೇಕ ಜಲಾಶಯಗಳಿದ್ದರೂ ಅವುಗಳನ್ನು ಬಿಟ್ಟ ಆಕಾಶದಲ್ಲಿ ಸುರಿಯುವ ಮಳೆಯ ನೀರನ್ನೇ ತನಗೆ ಆಧಾರವಾಗಿ ನಂಬಿ ತನ್ನ ದಾಹವನ್ನು ಅಡಗಿಸಿಕೊಳ್ಳುವುದು ಸ್ವಾಭಾವಿಕವಾದುದು ಹಾಗೆಯೇ ಆಳ್ವಾರುಗಳಂತಹ ಭಾಗ್ಯವಂತರು, ಎಷ್ಟೋ ದೇವತೆಗಳಿದ್ದರೂ ಅವರನ್ನು ಜಡಾಶಯರೆಂದು ಭಾವಿಸಿ, ಅವರಲ್ಲಿ ಆದರವಿಲ್ಲದೆ ವೇಂಕಟಾಚಲನಿವಾಸಿಯಾದ ಕೃಷ್ಣನಾದ ಶ್ರೀನಿವಾಸನೆಂಬ ಮೇಘದಿಂದುಂಟಾದ ದಯಾದೇವಿಯ ಅಭಿಮಾನವೆಂಬ ಮಳೆಯನ್ನೇ ತಮಗೆ ಅವಲಂಬನವನ್ನಾಗಿ ಭಾವಿಸಿ ಅದನ್ನೇ ಆಶ್ರಯಿಸಿ ಸಂಸಾರ ತಾಪವನ್ನು ಹೋಗಲಾಡಿಸಿಕೊಳ್ಳುವರು. ಇದೇ ವೇದವನ್ನು ಅನುಸರಿಸಿ ನಡೆದುಕೊಳ್ಳುವವರ ಮಾರ್ಗ.ಈ ರೀತಿಯಾಗಿ ಭಗವಂತನ ದಯೆಯನ್ನೇ ರಕ್ಷಕವನ್ನಾಗಿ ಆಶ್ರಯಿಸುವ ಪರಮೈ ಕಾಂತಿಗಳನ್ನು ಚಾತಕಪಕ್ಷಿಗಳಂತೆ ಆಚಾರ್ಯರು ಚಿತ್ರಿಸಿರುತ್ತಾರೆ.

ವೇಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋದೇವೋ ನ ಭೂತೋ ನ ಭವಿಷ್ಯತಿ


ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಶ್ರೀ ಪ್ಲವನಾಮ ಸಂವತ್ಸರ ಜ್ಯೇಷ್ಠ- ಆಷಾಢ ಮಾಸ ಸಂಚಿಕೆ

ಸಂಪುಟ - 52 ಜುಲೈ 2021 ಸಂಚಿಕೆ -02




## ವಿಷಯಸೂಚಿಕೆ


| | | |
|---|---|---|
| ಸಂಪಾದಕೀಯ | | 6 |
| ಅಕ್ಷಯ ತೃತೀಯ | -ಶ್ರೀಮತಿ. ಕೆ. ವಿ. ಪದ್ಮಾವತಿ | 7 |
| ಶ್ರೀಕೂರ್ಮ ಜಯಂತಿ | -ಎಸ್. ವೆಂಕಟರಾಘವನ್ | 10 |
| ಬೆಟ್ಟದೊಡೆಯನ ಭಕ್ತಾಗ್ರೇಸರ ತಾಳ್ಳಪಾಕ ಅನ್ನಮಯ್ಯ | - ಶ್ರೀಮತಿ ಕೆ.ವಿ. ಲತಾ | 12 |
| ಜ್ಯೋತಿಷ್ಯಶಾಸ್ತ್ರ ಒಂದು ವಿಜ್ಞಾನ | -ಡಾ॥ ರಾಮಚಂದ್ರ ದಾಸ್ ಸಿ.ಜೆ. | 15 |
| ಪಾಲಿಸೋ ನರಸಿಂಹ | -ಶ್ರೀಮತಿ. ಸುಮಾಚಂದ್ರಶೇಖರ್ | 17 |
| ಅಕ್ಕಿರಾಂಪುರದ ಶ್ರೀಲಕ್ಷ್ಮೀವೆಂಕಟೇಶ್ವರ ದೇವಾಲಯ | - ಕಂಗೇರಿ ಚಕ್ರಪಾಣಿ | 19 |
| ಕರೋನ ಮೇಲಿನ ಬ್ರಹ್ಮಾಸ್ತ್ರ | - ಶ್ರೀಮತಿ | 21 |
| ಶ್ರೀ ವೇಂಕಟೇಶ್ವರಸ್ವಾಮಿ ಆಲಯ | -ದಿ॥ ಬಿ.ಎಸ್.ಶ್ರೀನಿವಾಸನ್ | 23 |
| ಪುಸ್ತಕಾವಲೋಕನ | - | 26 |
| ವಿಜಯದಾಸರುಮಧ್ವತತ್ತ್ವ | - ಡಾ॥ ಆರ್.ಜಿ. ಗುಡಿ | 31 |
| ಸಂಸ್ಕೃತ ಕಲಿಯೋಣ...!! | - ಡಾ॥ ಸಮುದ್ರಾಲ ಲಕ್ಷ್ಮಣಯ್ಯ | 33 |
| ದೇವರ್ಷಿ ನಾರದರ ಮಹಿಮೆ | - ಡಾ ॥ ಗುರುರಾಜ ಪೋಶೆಟ್ಟಿ ಹಳ್ಳಿ | 34 |
| ಓಂಕಾರವು ವೈಜ್ಞಾನಿಕ ವಿಶ್ವದ ಮಾದರಿ | - ಹೇಮಂತ್ ಕುಮಾರ್ ಜಿ. | 37 |
| ಪರಶುರಾಮಾವತಾರದ ವೈಶಿಷ್ಟ್ಯ | - ಕೆ. ರಾಘವೇಂದ್ರ | 39 |
| ಕಣ್ವತೀರ್ಥ ಮಹಾಮುನಿಯ ಆರಾಧನೆ | - ಪ್ರಣವ | 40 |
| ವೇದಗಳಲ್ಲಿ ವಿಜ್ಞಾನ | - ಡಾ ॥ ಟಿ.ವಿ. ಸತ್ಯನಾರಾಯಣ | 42 |
| ಶ್ರೀಮದ್ಭಗವದ್ಗೀತೆ | - ಶ್ರೀಮತಿ ಬಿ. ಪದ್ಮಜ | 44 |
| ಆಳ್ವಾರುಗಳು ಕಂಡ ತಿರುವೇಂಗಡ | - ಎಂ. ಆರ್. ನರಸಿಂಹನ್ | 45 |
| ತಿರುಮಲೆ - ಕಾಲಮಾನಾಚರಣೆಗಳು | - ಶ್ರೀಮತಿ | 47 |
| ಮಹಾದಾರ್ಶನಿಕ ಶ್ರೀಶಂಕರಚಾರ್ಯರು | - ಡಾ ॥ ಲಕ್ಷ್ಮೀಕಾಂತ ವಿ. ಮೊಹರೀರ | 49 |
| ನೀತಿ ಕಥೆ - ನಿಜವಾದ ಭಕ್ತನಾರು | -ಶ್ರೀಮತಿ ಸುಧಾಮಧುಸೂದನ್ | 51 |
| ಚಿತ್ರಕಥೆ - ಜೀವನಸಾರ್ಥಕವಾಗಬೇಕೆಂದರೆ | -ಟಿ. ಶಿವಾಜಿ | 52 |
| ಕ್ವಿಜ್ | | 54 |


ಮುಖಚಿತ್ರ - ಶ್ರೀ ಗೋವಿಂದರಾಜ ಸ್ವಾಮಿಯವರು, ತಿರುಪತಿ
ಹಿಂಬದಿಚಿತ್ರ - ಸ್ವಾಮಿಯವರನ್ನು ಕೀರ್ತಿಸುತ್ತಿರುವ ಅನ್ನಮಾಚಾರ್ಯರು


**ಗೌರವ ಸಂಪಾದಕರು**
ಡಾ ॥ ಕೆ. ಎಸ್. ಜವಹರ್ ರೆಡ್ಡಿ , ಐ.ಎ.ಎಸ್
ಕಾರ್ಯನಿರ್ವಹಣಾಧಿಕಾರಿ,ತಿ.ತಿ.ದೇ.,ತಿರುಪತಿ.

**ಪ್ರಧಾನ-ಸಂಪಾದಕರು**
ಆಚಾರ್ಯ.ಕೆ.ರಾಜಗೋಪಾಲನ್, ಪಿ.ಎಚ್.ಡಿ.

**ಸಂಪಾದಕರು**
ಡಾ॥ ವಿ.ಜಿ.ಚೊಕ್ಕಲಿಂಗಂ, ಎಮ್.ಎ.ಪಿಎಚ್.ಡಿ.

**ಮುದ್ರಣ**
ಶ್ರೀ .ಪಿ. ರಾಮರಾಜು , ಎಮ್.ಎ.
ವಿಶೇಷಾಧಿಕಾರಿ,
(ಪ್ರಕಾಶನ ಮತ್ತು ಮುದ್ರಣಾಲಯ),
ತಿ.ತಿ.ದೇ.,ಮುದ್ರಣಾಲಯ,ತಿರುಪತಿ.

**ಡಿ.ಟಿ.ಪಿ.**
ಪ್ರಧಾನ ಸಂಪಾದಕರ -ಕಾರ್ಯಾಲಯ
ತಿ.ತಿ.ದೇ.ತಿರುಪತಿ.

**ಛಾಯಗ್ರಹಣ:**
ಶ್ರೀ ಪಿ.ಎನ್.ಶೇಖರ್,
ಛಾಯಗ್ರಹಣ,ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ,
ಸಹಾಯ ಛಾಯಗ್ರಹಣ ತಿ.ತಿ.ದೇ.



ಲೇಖನ / ಚಂದಾ ಮಿಕ್ಕ ವಿವರಗಳಿಗೆ
ಪ್ರಧಾನ ಸಂಪಾದಕರು
ತಿ.ತಿ.ದೇವಸ್ಥಾನಗಳು,
ಕೆ.ಟಿ.ರಸ್ತೆ. ತಿರುಪತಿ - 517 507

**ಇತರ ವಿವರಗಳಿಗೆ**
ಕಾರ್ಯಾಲಯ : 0877 - 2264543
ಡಿ.ಟಿ.ಪಿ. ವಿಭಾಗ : 0877 - 2264359
ಸಂಪಾದಕರು : 0877 - 2264360

24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ
0877 - 2277777, 2233333
ಸಲಹೆ/ದೂರುಗಳಿಗೆ ಟೋಲ್‌ಫ್ರೀ ಸಂಖ್ಯೆ:
1800-425-4141
ಸಲಹೆ/ಸೂಚನೆ/ದೂರುಗಳಿಗಾಗಿ
sapthagiri_helpdesk@tirumala.org
ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು
www.tirumala.org ಮೂಲಕ ವೀಕ್ಷಿಸಬಹುದು.



| | | |
|---|---|---|
| ಬಿಡಿ ಪ್ರತಿ | ರೂ. | 05/- |
| ವಾರ್ಷಿಕ ಚಂದಾ | ರೂ. | 60/- |
| ಆಜೀವ ಚಂದಾ | ರೂ. | 500/- |
| ವಿದೇಶಿ ವಾರ್ಷಿಕ ಚಂದಾ | ರೂ. | 850/- |



ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಸಂಪಾದಕ

ಸಂಪಾದಕೀಯ

# ಶ್ರೀ ಗುರುವೇ ನಮಃ

**ಗುರು ಬ್ರಹ್ಮ ಗುರುವಿಷ್ಣು ಗುರು ದೇವೋ ಮಹೇಶ್ವರಃ**
**ಗುರು ಸಾಕ್ಷಾತ್ ಪರ ಬ್ರಹ್ಮ ತಸ್ಮೈ ಶ್ರೀ ಗುರುವೇ ನಮಃ**

ಭಾರತೀಯ ತತ್ವಶಾಸ್ತ್ರ ಪರಂಪರೆಯಲ್ಲಿ ಗುರುಸ್ಥಾನಕ್ಕೆ ಮಹತ್ವದ ಸ್ಥಾನವಿದೆ. ಮಾತೃದೇವೋಭವ, ಪಿತೃದೇವೋಭವ, ಆಚಾರ್ಯದೇವೋಭವ ಎನ್ನುವುದಾಗಿ ಗುರುಗಳಿಗೆ ಪ್ರಮುಖಸ್ಥಾನ ನೀಡಲಾಗಿದೆ.ಹಿಂದೂ ಪಂಚಾಂಗದ ಪ್ರಕಾರ ಆಷಾಢಮಾಸದ ಹುಣ್ಣಿಮೆಯನ್ನು ಹಿಂದೂಗಳು ಸಾಂಪ್ರದಾಯಕವಾಗಿ 'ಗುರುಪೂರ್ಣಿಮೆ'ಎಂದು ಆಚರಿಸುತ್ತಾರೆ.ಈ ದಿನದಂದು ಗುರುವಿಗೆ ಪೂಜೆ ಸಲ್ಲಿಸುತ್ತಾರೆ.ಗುರು ಅನ್ನುವ ಶಬ್ದ 'ಗು' ಮತ್ತು 'ರು'ಅನ್ನುವ ಮೂಲ ಪದಗಳನ್ನು ಹೊಂದಿದೆ ಸಂಸ್ಕೃತ ಭಾಷೆಯಲ್ಲಿ 'ಗು' ಅಂದರೆ ಅಂಧಕಾರ ಅಥವಾ ಅಜ್ಞಾನ, 'ರು' ಅಂದರೆ ಕಳೆಯುವ ಅಥವಾ ದೂರಮಾಡುವ ಎಂದರ್ಥ ಅದಕ್ಕೆ ಗುರು ಅಂದರೆ, ಅಂಧಕಾರ ಅಥವಾ ಅಜ್ಞಾನವನ್ನು ದೂರ ಮಾಡುವವರು ಎಂದರ್ಥ.ಬಹುತೇಕ ಜನರು 'ಗುರುವನ್ನು' ತಮ್ಮ ಜೀವನದ ಅವಿಭಾಜ್ಯ ಅಂಗವಾಗಿ ಪರಿಗಣಿಸುತ್ತಾರೆ.

ಹಿಂದೂ ಸಂಸ್ಕೃತಿಯಲ್ಲಿ ಗುರುವಿಗೆ ಅತ್ಯಂತ ಮಹಿಮಾನ್ವಿತವಾದ ಹಾಗೂ ಅಷ್ಟೇ ಪವಿತ್ರವಾದ ಸ್ಥಾನವಿದೆ. ಲೌಕಿಕ ವಿದ್ಯೆಗಳಿಗಾಗಲೀ, ಪಾರಲೌಕಿಕ ವಿದ್ಯೆಗಳಿಗಾಗಲೀ 'ಗುರುವಿನ' ಅಗತ್ಯವಿದೆ.ಆದ್ದರಿಂದಲೇ ಗುರುವಿಲ್ಲದ ವಿದ್ಯೆ ಕುರುಡು ಎಂದಿದ್ದಾರೆ.

ಲೌಕಿಕ ಪರಿಜ್ಞಾನದೊಂದಿಗೆ ಹೋಲಿಸಿದರೆ ಅಕ್ಷರಗಳನ್ನು ತಿದ್ದಿಸುವವನೇ ನಿಜವಾದ ಗುರು. ಮನುಷ್ಯನಿಗೂ ಭಗವಂತನ ಸನ್ನಿಧಿಗೂ ಮಾರ್ಗವನ್ನು ತೋರಿಸುವವನೇ ಗುರು! ಅಕ್ಷರಗಳನ್ನು ಕಲಿತವರು ಯಾರಾದರು ಅಕ್ಷರಗಳನ್ನು ಹೇಳಿ ಕೊಡಬಲ್ಲರು ಮತ್ತಿನ್ನೇನು ಮಾಡಬೇಕು?ವಿದ್ಯೆಯೊಂದಿಗೆ ಬುದ್ಧಿಯನ್ನು ಹೇಳಿಕೊಡುವವನೇ ನಿಜವಾದ ಗುರುವು. ಜೀವನವೆಂದರೆ ಕೇವಲ ನಮ್ಮ ಕಣ್ಣೆದಿರಿಗೆ ಕಾಣಿಸುವುದಷ್ಟೇ ಅಲ್ಲ,ಭಾಷೆಗೂ,ಭಾವಕ್ಕೂ,ಸ್ಪರ್ಶಕ್ಕೂ ಕಣ್ಣಿಗೆ ಕಾಣಿಸದ ಅಲೌಕಿಕ ಆನಂದವನ್ನು ನೀಡುವ ಅಂತರ್ಯಾಮಿಯನ್ನು ಅನುಭವಕ್ಕೆ ತಂದು ಕೊಡುವವನೇ ಗುರುವು.ಅದಕ್ಕಿಂತಲೂ ಹೆಚ್ಚಾಗಿ ಬ್ರಹ್ಮ ಸಾಯುಜ್ಯದೆಡೆಗೆ ಕೊಂಡೊಯ್ಯುವವನೇ ನಿಜವಾದ ಸದ್ಗುರು.

ಜ್ಞಾನವನ್ನು ಅರ್ಜಿಸಬೇಕೆಂದು ಬಯಸುವವನು, ತ್ರಿಕರಣಶುದ್ಧಿಯಾಗಿ ಗುರುವಿಗೆ ಶುಶ್ರೂಷೆಯನ್ನು ಮಾಡಬೇಕು. ದೃಢವಾದ ವಿಶ್ವಾಸದಿಂದ ಗುರುವಿಗಿಂತಲೂ ಅಧಿಕವಾದ,ಶಾಸ್ತ್ರವಾಗಲೀ,ತಪಸ್ಸಾಗಲೀ ಬೇರೆ ಇಲ್ಲವೆನ್ನುವಂತೆ ಗುರುವಿನ ಸೇವೆಯನ್ನು ಮಾಡಬೇಕು. ಆಗ ಆ ಗುರುವು ಶಿಷ್ಯ ಏನು ಕೇಳದಿದ್ದರೂ ಎಲ್ಲಾ ವಿದ್ಯೆಗಳನ್ನು ಬೋಧಿಸುತ್ತಾನೆ. ಅಜ್ಞಾನಾಂಧಕಾರವನ್ನು ತೊಲಗಿಸಿಕೊಳ್ಳುವ ಮಾರ್ಗವನ್ನು ತೋರಿಸುತ್ತಾನೆ.

ಜ್ಞಾನಪಿಪಾಸಿಗೆ ಪರಮಾರ್ಥವನ್ನು ತಿಳಿಸಿಕೊಡುವುದಕ್ಕೆ ಒಬ್ಬ ಗುರುವಿನ ಅವಶ್ಯಕತೆ ಇದೆ. ಇವೆಲ್ಲವೂ ಸರಿಯೇ ಆದರೆ ಗುರುವೇ ಇಲ್ಲದೇ ಏನೂ ತಿಳಿಯದ ಜೇಡರ ಹುಳಕ್ಕೂ, ವಿಷಸರ್ಪಕ್ಕೂ,ಹಿಂಸೆಯಿಂದ ಆಹಾರವನ್ನು ಪಡೆಯುವುದನ್ನು ಬಿಟ್ಟು ಇನ್ನೇನೂ ತಿಳಿಯದ ಬೇಡನಿಗೆ ಸಾಯುಜ್ಯವು ಲಭಿಸಲಿಲ್ಲವೇ? ಅಂದರೆ ಅವರಿಗೆ ಯಾರೂ ಗುರುವಿಲ್ಲವೆಂದು ಅರ್ಥವಲ್ಲ. ಅವರವರ ಮನಸ್ಸಿನಲ್ಲಿ ಅಚಂಚಲವಾದ, ಬೇರೇ ದೃಷ್ಟಿಯಿಲ್ಲದ ಭಕ್ತಿಯೇ ಅವರಿಗೆ ಗುರುವಾಗಿ ನಿಂತಿತು. ತಿಳಿಯದಿರುವುದು ಬೇರೆ. ತಿಳಿಯುವುದು ಬೇರೆ,ನಮ್ಮದೂ ಅತ್ತಲೂ ಇಲ್ಲದ ಇತ್ತಲೂ ಇಲ್ಲದ ಪರಿಸ್ಥಿತಿ. ಲೌಕಿಕ ಅಲೌಕಿಕಗಳ ನಡುವೆ ಡೋಲಾಯಮಾನವಾದ ಸ್ಥಿತಿ. ಅದಕ್ಕೇ ಕೈ ಹಿಡಿದು ನಡೆಸುವವರು ಬೇಕು.ಅಂತಹವರನ್ನು ನಾವು ಅವಿರತವಾಗಿ ಹುಡುಕಬೇಕು.ಅಂತಹಾ ಜಿಜ್ಞಾಸಾಪರನಾದ ಶಿಷ್ಯನಿಗಾಗಿ, ಗುರುವಿನ ರೂಪದಲ್ಲಿ ಭಗವಂತನೇ ಹುಡುಕಿಕೊಂಡು ಬರುತ್ತಾನೆ.

ಅಜ್ಞಾನ, ಹೆಂಡತಿ ಮಕ್ಕಳು ಎಂಬ ಅನುಬಂಧಗಳೆಂಬ ವಲ್ಮೀಕದಲ್ಲಿ ವಾಸಿಸುತ್ತಿದ್ದೇವೆ.ಕಣ್ಣು ತೆರೆದರೆ ದಟ್ಟವಾದ ಅಂಧಕಾರವೇ ಕಂಡು ಬರುತ್ತದೆ. ಸ್ವಲ್ಪಶ್ರಮದಿಂದ ಅವುಗಳನ್ನು ದಾಟಿ ಬಂದರೆ ಸೂರ್ಯನ ದರ್ಶನವಾಗುತ್ತದೆ. ಅಂತಹಾ ಸೂರ್ಯನ ಕಿರಣಗಳು ಮನಸ್ಸನ್ನು ತಾಕಿದರೆ ಮಹರ್ಷಿಗಳಾಗುತ್ತೇವೆ. ಹಾಗಾಗುವುದಕ್ಕೆ ಆಸಕ್ತಿಯಿಂದ ಶ್ರದ್ಧಾ ಭಕ್ತಿಯಿಂದ ಒಬ್ಬ ಸದ್ಗುರುವನ್ನು ಆಶ್ರಯಿಸಬೇಕು.ಆತನನ್ನು ಅರ್ಚಿಸಬೇಕು, ಆರಾಧಿಸಬೇಕು. ಅದೇ ಸಾಕ್ಷಾತ್ತು ಪರಬ್ರಹ್ಮನಾದ ಗುರುವಿಗೆ ಅರ್ಪಿಸುವ ನಿಜವಾದ ಗುರುಪೂಜ್ಯೋತ್ಸವದ ಪುಷ್ಪಾಂಜಲಿ.

**ವ್ಯಾಸೋ ನಾರಾಯಣೋ ಹರಿಃ**

# ಜಯ ಜಯ ವಿಠ್ಠಲ ಜಯ ಹರಿ ವಿಠ್ಠಲ !



ಭಗವಂತನ ಸೇವೆ, ಧ್ಯಾನ ಮಾಡಲು ಎಲ್ಲ ಸಮಯ ಒಳ್ಳೆಯ ಸಮಯವೇ ! ಆದರೆ ಕೆಲವು ತಿಥಿ ಮತ್ತು ಮಾಸಗಳಲ್ಲಿ ಭಗವಂತನ ಸೇವೆ ಮಾಡುವುದು ಸರ್ವ ಶ್ರೇಷ್ಠ, ಫಲದಾಯಿ. ಅಂತಹ ತಿಥಿಗಳಲ್ಲಿ ಏಕಾದಶಿಯಂದು ಶ್ರೀ ಹರಿಯ ಸೇವೆ ಅತ್ಯುತ್ತಮ. ವರ್ಷದಲ್ಲಿ ಹನ್ನೆರಡು ತಿಂಗಳು. ಒಂದು ತಿಂಗಳಲ್ಲಿ ಎರಡು ಪಕ್ಷ. ಶುಕ್ಲಪಕ್ಷ ಮತ್ತು ಕೃಷ್ಣಪಕ್ಷ.ಪಕ್ಷಕ್ಕೆ ಒಂದು ಏಕಾದಶಿ ಬರುವುದು. ಏಕಾದಶಿ ಎಂದರೆ ಚಾಂದ್ರಮಾನದ ಹನ್ನೊಂದನೆಯ ತಿಥಿ. ಪ್ರತಿ ತಿಂಗಳು ಪೌರ್ಣಿಮೆ ಅಮಾವಾಸ್ಯೆ ಮುನ್ನ ಏಕಾದಶಿ ತಿಥಿ ಬರುವುದು. ಎಲ್ಲ ಏಕಾದಶಿ ದಿನಗಳಿಗೂ ಪ್ರಾಮುಖ್ಯತೆ ಇದೆ. ಆಷಾಢಮಾಸದಲ್ಲಿ ಬರುವ ಎರಡು ಏಕಾದಶಿ ದೇವಶಯನಿ,ಮತ್ತು ಕಾಮಿಕಾ.

### ಋಣತ್ರಯ

ಹಿಂದೂ ಧರ್ಮದಲ್ಲಿ ತಾಯಿ, ತಂದೆ ಗುರು ಮತ್ತು ದೈವ ಎಂಬುವ ಗೌರವ ಸಂಪ್ರದಾಯವಿದೆ. ಮಾನವನಾಗಿ ಭುವಿಗೆ ಬರುವುದು ತಾಯಿ ಕೊಟ್ಟ ಜನ್ಮ.ತಾಯಿ ಮಗುವಿಗೆ ಮೊದಲ ಗುರು ಮತ್ತು ದೈವ ಸಮಾನ. ತೈತ್ತಿರೀಯ ಉಪನಿಷತ್ ವರ್ಣಿಸಿದಂತೆ ಮಾತೃದೇವೋಭವ, ಪಿತೃದೇವೋಭವ ಎಂದು ತಂದೆ ತಾಯಿಗಳನ್ನು ಮೊದಲ ದೇವರಾಗಿ ಆರಾಧಿಸಬೇಕು. ಮಾನವನ ತ್ರಿವಿಧ ಋಣಗಳನ್ನು ಸೂಚಿಸಿದ್ದಾರೆ. ಮೂರು ಋಣಗಳು. ದೇವಋಣ, ಋಷಿ ಋಣ ಮತ್ತು ಪಿತೃಋಣ. ಈ ಮೂರು ಋಣಗಳನ್ನು ವಿಧಿವತ್ತಾಗಿ ತೀರಿಸಿ ಕೊಳ್ಳಲು ಸೂಚಿಸಿದ್ದಾರೆ. ಮಾನವ ಜನ್ಮ ಸಫಲವಾಗಲು, ಮಾನವ ಕೃತ ಕರ್ಮ ಫಲಿಸಲು ಮಹೋನ್ನತವಾದ ಋಣ ವಿಮುಕ್ತಿಯಿಂದ ಕೈವಲ್ಯ ಮುಕ್ತಿ ಜೀವನಿಗೆ ಪ್ರಾಪ್ತಿ ಆಗುವುದು.

### ಪುಂಡಲೀಕ ಭಕ್ತಿ

ಪುಂಡಲೀಕನ ತಂದೆ ಜನುದೇವ ಹಾಗೂ ತಾಯಿ ಸತ್ಯವತಿ. ಬಾಲ್ಯದಲ್ಲಿ ಮುದ್ದಾಗಿ ಬೆಳೆದು ಯುಕ್ತ ವಯಸ್ಸಲ್ಲಿ ಮದುವೆ ಆದರು ಪುಂಡಲೀಕರು. ಮದುವೆಯ ನಂತರ ಮೋಹಿತರಾಗಿ ಪತ್ನಿಯೊಡನೆ ಕಾಲ ಕಳೆಯುತ್ತಾ ತಂದೆ ತಾಯಿಗಳನ್ನು ನಿರ್ಲಕ್ಷ್ಯ ಮಾಡಿ ಅವಮಾನ ಮಾಡಿದರು. ಪುಂಡಲೀಕರ ವೃದ್ಧ ತಂದೆ ತಾಯಿ ಕಾಶಿಯಾತ್ರೆಗೆ ಹೊರಟರು. ಕಾಲ ಕಳೆಯಿತು. ಪುಂಡಲೀಕ ವ್ಯಾಮೋಹ ಅರಿತು ಪಶ್ಚಾತ್ತಾಪ ಪಟ್ಟು ಕಾಶಿಯಾತ್ರೆಗೆ ಹೊರಟರು. ದಾರಿಯಲ್ಲಿ ಕುಕ್ಕುಟ ಋಷಿಗಳ ಆಶ್ರಮ ಕಂಡು ಅಲ್ಲಿ ಸ್ವಲ್ಪ ಸಮಯ ಆಶ್ರಮದಲ್ಲಿ ಇದ್ದರು.ತಂದೆ- ತಾಯಿ ಸೇವೆಯನ್ನು ಋಷಿ ಭಕ್ತಿಯಿಂದ ಮಾಡುವುದು ಕಂಡು, ಗಂಗಾ, ಯಮುನಾ, ಸರಸ್ವತೀ ನದಿಗಳ ದೇವತೆಯರು ಆಶ್ರಮಕ್ಕೆ ಬಂದು ಋಷಿಗೆ ಸ್ನಾನ ಮಾಡಿಸುವುದನ್ನೂ ವೀಕ್ಷಿಸಿ ಆಶ್ಚರ್ಯಪಟ್ಟು ಆ ಬಗ್ಗೆ ಋಷಿಗಳನ್ನು ಕೇಳಲಾಗಿ ಅವರು ಮಾತಾಪಿತೃಗಳ ಸೇವೆಯಿಂದ ಆ ಸೌಭಾಗ್ಯ ವುಂಟಾಗಿದೆಯೆಂದು ತಿಳಿಸಿ ಪುತ್ರ ಧರ್ಮವನ್ನು ಉಪದೇಶಿಸಿದರು. ಪುಂಡಲೀಕ ತಾನು ಮಾಡಿದ ಅಪರಾಧ ಅರಿತು ತಂದೆ ತಾಯಿಯನ್ನು ಹುಡುಕುತ್ತಾ ಒಂದೆಡೆ ದೇವಸ್ಥಾನದಲ್ಲಿ ದೀನ ಸ್ಥಿತಿಯಲ್ಲಿ ಇದ್ದ ಅವರನ್ನು ಕಂಡು ಅವರಿಗೆ ನಮಸ್ಕರಿಸಿ ಪಾದಾ ಭಿವಂದನೆ ಮಾಡಿದರು. ಅನುದಿನ ತಂದೆ ತಾಯಿ ಸೇವೆಯಲ್ಲಿ ಮುಳುಗಿ, ತಂದೆ, ತಾಯಿಗಿಂತ ದೇವರು ಬೇರೆ ಯಾರೂ ಇಲ್ಲ! ಎನ್ನುತ ವ್ರತ ದೀಕ್ಷೆಯಲ್ಲಿ ಇದ್ದರು. ಪುಂಡಲೀಕನ ಭಕ್ತಿ, ನಿಷ್ಠೆ ಮೆಚ್ಚಿದ ಶ್ರೀಕೃಷ್ಣ ಪರಮಾತ್ಮ ಪುಂಡಲೀಕನ ಮನೆ ಮುಂದೆ ಬಂದು ಪುಂಡಲೀಕ ಇಗೋ! ನಾ ಬಂದಿರುವೆ ಎಂದು ದರುಶನ ಕೊಟ್ಟರು. ಪುಂಡಲೀಕ ತನ್ನ ತಂದೆ ಮಲಗುತ್ತಿದ್ದಾರೆ. ಸೇವೆಯಲ್ಲಿ ಭಂಗ ಆಗಬಾರದು. ಸ್ವಲ್ಪ ಅಲ್ಲೇ ನಿಲ್ಲಿ ಎಂದು ಶ್ರೀಹರಿಯನ್ನು ಬೇಡಿಕೊಂಡರು. ಶ್ರೀಹರಿ ನಿಂತು ನಿಂತು ಸೊಂಟ ನೋವಾಗುತ್ತಿದೆ ಇನ್ನು ಎಷ್ಟು ಹೊತ್ತು? ಎಂದು ಪ್ರಶ್ನೆ ಮಾಡಿದರು. ಪುಂಡಲೀಕ ಅಲ್ಲಿರುವ ಇಟ್ಟಿಗೆ ಎಸೆದು ಇದರ ಮೇಲೆ ನಿಲ್ಲಲು ಬೇಡಿಕೊಂಡರು.ನಂತರ ಶ್ರೀಹರಿಗೆ ಪಾದಾಭಿವಂದನೆ ಮಾಡಿದರು.ಜಗನ್ಮಾತೆ ರುಕ್ಮಿಣಿ ದೇವಿ ಕೂಡ ಬಂದರು. ಪುಂಡಲೀಕನ ಭಕ್ತಿಗೆ ಮೆಚ್ಚಿ ಏನು ವರಬೇಕು ಎಂದು ಕೇಳಲು,ಪುಂಡಲೀಕ ಶ್ರೀಹರಿ ಯನ್ನು ಇದೇ ರೂಪದಲ್ಲಿ ನೆಲಸಿ ಭಕ್ತರಿಗೆ ಅಭೀಷ್ಟ ನೆರವೇರಿಸಲು ಬೇಡಿಕೊಂಡರು. ಹೀಗಾಗಿ ಶ್ರೀಹರಿವಿಠ್ಠಲ ರೂಪದಲ್ಲಿ, ಶ್ರೀಮಹಾಲಕ್ಷ್ಮಿ-ರುಕ್ಮಿಣಿ ರೂಪದಲ್ಲಿ ಪಂಢರಾಪುರದಲ್ಲಿ ಇದ್ದು ಭಕ್ತ ಕೋಟಿಗೆ ದರುಶನ ಭಾಗ್ಯ, ತಮ್ಮ ಬೇಡಿಕೆಗಳನ್ನು ಪೂರೈಸುವ ಹಾಗೆ ನೆಲೆಸಿದರು.

ಪಂಢರಪುರ ಇಂದಿನ ಮಹಾರಾಷ್ಟ್ರ ರಾಜ್ಯ ಸೊಲ್ಲಾಪುರ ಜಿಲ್ಲೆಯಲ್ಲಿ ಭೀಮಾ ನದಿಯ ತಟದಲ್ಲಿರುವ ಮಹಾಪುಣ್ಯಕ್ಷೇತ್ರ. ಪಂಢರಪುರದಲ್ಲಿ ಭೀಮಾ ನದಿಯು ಅರ್ಧಚಂದ್ರಾಕಾರವಾಗಿ ಹರಿಯುವುದರಿಂದ ಅದನ್ನು ಚಂದ್ರಭಾಗಾ ನದಿ ಎಂದು ಕರೆಯುತ್ತಾರೆ.


**ವೆಂಕಟ ರಾಘವನ್.ಎಸ್**
**98457 93917**



ಈ ಪಾವನ ನದಿಯಲ್ಲಿ ಸ್ನಾನ ಮಾಡಿದವರಿಗೆ ಸಕಲ ಪಾಪ ಕರ್ಮಗಳು ಪರಿಹಾರವಾಗುತ್ತದೆ ಎಂಬ ಪ್ರತೀತಿ ಇದೆ. ಆಷಾಢ ಶುದ್ಧ ಏಕಾದಶಿಯಂದು ತಂಡೋಪತಂಡ ಜನರು ಪಂಢರಪುರಕ್ಕೆ ತೆರಳಿ ದರ್ಶನ ಪಡೆಯುವರು.

**ಮಹಾಭಕ್ತ ವಿಜಯ**

ಮಹಾಭಕ್ತ ವಿಜಯ ಗ್ರಂಥ ಹರಿಸೇವೆಯಲ್ಲಿ ಜೀವನ ಸಲ್ಲಿಸಿದ ಮಹಾಭಕ್ತರ ಚರಿತ್ರೆ, ರಚಿಸಿರುವ ಅಭಂಗ, ಕೀರ್ತನೆಗಳ ವಿಷಯ ವರ್ಣಿಸಲಾಗಿದೆ. ಮೊದಲ ಬಾರಿಗೆ ಈ ಗ್ರಂಥ ಮರಾಠಿ ಭಾಷೆಯಲ್ಲಿ ರಚನೆಯಾಗಿ ಈಗ ಬೇರೆ ಭಾಷೆಗಳಲ್ಲಿ ಲಭ್ಯವಿದೆ. ಹರಿಭಕ್ತಿ ಶ್ರೀಹರಿಯ ಕೃಪೆ, ಪಾಂಡುರಂಗನ ಲೀಲೆ ಎಲ್ಲವನ್ನು ಈ ಗ್ರಂಥದಿಂದ ತಿಳಿಯಬಹುದು. ವಾರಕರೀ ಸಂಪ್ರದಾಯದಲ್ಲಿ ನಾಮದೇವ,ಜ್ಞಾನೇಶ್ವರ,ಜನಾಬಾಯಿ, ಏಕನಾಥ ಮತ್ತು ತುಕಾರಾಮರನ್ನು ಪೂಜ್ಯನೀಯವಾಗಿ ಗೌರವ ಭಕ್ತಿ ವಂದನೆ ಸಲ್ಲಿಸುವರು.

ತುಕಾರಾಮರು ಮಹಾರಾಷ್ಟ್ರದ ಸಂತ ಪರಂಪರೆಯ ಶ್ರೇಷ್ಠ ಸಂತರು. ಕರ್ನಾಟಕದಲ್ಲಿ ದಾಸರು ಪಾಂಡುರಂಗ ದರುಶನ ಮಾಡಿ,ಕೀರ್ತನೆ ರಚಿಸಿ ಪಾಂಡುರಂಗವಿಠಲದೇವರಿಗೆ ಅಂಕಿತಕೊಟ್ಟರು.ಶ್ರೀಪುರಂದರ ದಾಸರು "ಪುರಂದರವಿಠಲ"ಎಂದು ಶ್ರೀಹರಿಗೆ ಕೀರ್ತನೆ ಅಂಕಿತಕೊಟ್ಟರು.

ದಾಸ ಪರಂಪರೆಯಲ್ಲಿ ಪಾಂಡು ರಂಗ ವಿಠಲ ದೇವರು ಸದಾ ಪೂಜನೀಯ! ಶ್ರೀಪುರಂದರದಾಸರ ಕೀರ್ತನೆಯಲ್ಲಿ ಪಾಂಡುರಂಗ ದೇವರನ್ನು ನೋಡಬಹುದು.

ನೆರೆನಂಬಿದೆ ಮದ ಹೃದಯ ಮಂಟಪದೊಳು ಪರಿಶೋಭಿಸುತಿರು
ಪಾಂಡುರಂಗ!
ಸುಖವಾಗಲಿ ಬಹು ದುಃಖವಾಗಲಿ ಸಖನೀನಾಗಿರು
ಪಾಂಡುರಂಗ
ನಿಖಿಲಾಂತರ್ಗತ ವ್ಯಾಸವಿಠಲ ತವ ಮುಖ ಪಂಕಜತೋರೋ
ಪಾಂಡುರಂಗ ॥

ಶ್ರೀಪುರಂದರದಾಸರು ಪಂಢರಪುರದಲ್ಲಿ ವಿಠೋಬ ಎನ್ನುವ ಸಾಹುಕಾರ ಎಂದು ಶ್ರೀಹರಿಯನ್ನು ಕೊಂಡಾಡಿದ್ದಾರೆ.ಶ್ರೀಹರಿ ಅಖಿಲಾಂಡ ಕೋಟಿ ಬ್ರಹ್ಮಾಂಡನಾಯಕ ಸರ್ವವ್ಯಾಪ್ತ ಸರ್ವಸ್ಥಿತ ಶ್ರೀಮನ್ನಾರಾಯಣ ಜಗತ್ತಿನ ಸಾಹುಕಾರ

ಪಂಢರಾಪುರವೆಂಬ ದೊಡ್ಡನಗರ ಅಲ್ಲಿ ವಿಠೋಬನೆಂಬ ದೊಡ್ಡ ಸಾಹುಕಾರ.
ವಿಠೋಬನಿರುವುದು ನದಿ ತೀರ. ಅಲ್ಲಿ ಪಂಡರೀ ಭಜನೆಯ ವ್ಯಾಪಾರ.
ವಿಠ್ಠಲ ವಿಠ್ಠಲ ಪಾಂಡುರಂಗ ಜಯ ಹರಿ ವಿಠ್ಠಲ ಪಾಂಡುರಂಗ.

**ಪಲ್ಲಕಿ ಸೇವೆ ಮತ್ತು ಪಾದ ಯಾತ್ರೆ**

ಹಿಂದಿನ ಕಾಲದಲ್ಲಿ ಸಂತರು ಪಾದಯಾತ್ರೆ ಮಾಡುತ ಆಷಾಢ ಶುದ್ಧ ಏಕಾದಶಿಯ ದಿನ ಪಂಢರಪುರ ಸೇರಿ ವಿಠಲನ ದರುಶನ ಮಾಡುತ ಇದ್ದರು. ಪ್ರಮುಖವಾಗಿ ಸಂತ ಜ್ಞಾನೇಶ್ವರ್, ಸಂತ ತುಕಾರಾಮರು. ಸಂತ ತುಕಾರಾಂ ಪಲ್ಲಕಿ ದೇಹುಗ್ರಾಮದಿಂದ, ಸಂತ ಜ್ಞಾನೇಶ್ವರ ಪಲ್ಲಕಿ ಆಳಂದಿ ಮತ್ತು ಬೇರೆ ಬೇರೆ ಪ್ರಾಂತಗಳಿಂದ ಪಲ್ಲಕಿ ಹೊತ್ತು ಭಕ್ತರು ೨೧ ದಿನ ಪಾದಯಾತ್ರೆ ಮಾಡುತ್ತ ಆಷಾಢ ಶುದ್ಧ ಏಕಾದಶಿಯಂದು ಪಂಢರಾಪುರ ಸೇರುವರು.ಭಕ್ತರು ಪಲ್ಲಕಿಯಲ್ಲಿ ಸಂತರ ಪಾದುಕೆ ಇಟ್ಟು, ಪಲ್ಲಕಿ ಹೊರುತ, ಸಂತರ ಅಭಂಗವಾಣಿಯನ್ನು ನುಡಿಯುತ್ತಾ, ವಿಠಲನಾಮದ ಘೋಷೆಯಿಂದ ಭಜನೆ ಮಾಡುತ ಪಂಢರಾಪುರಕೆ ಬಂದು ಸೇರುವರು. ಆಷಾಢ ಶುದ್ಧ ಏಕಾದಶಿಯಂದು ಚಾತುರ್ಮಾಸ ವ್ರತ ಆರಂಭ ಆಗುವುದು. ಆಷಾಢ ಶುದ್ಧ ಏಕಾದಶಿಯಂದು ವೈಷ್ಣವ ಮಠದ ಸಂಪ್ರದಾಯದಲ್ಲಿ ಮುದ್ರಧಾರಣೆ ಶಂಖ,ಚಕ್ರಮುದ್ರೆ ಧರಿಸಿ ಶ್ರೀಹರಿಯ ಧ್ಯಾನ ಮಾಡಿ ಶ್ರೀಹರಿಯ ಕೃಪೆಗೆ ಪಾತ್ರರಾಗುವರು.

ತೇಷಾಂ ಸತತಯುಕ್ತಾನಾಂ ಭಜತಾಂ ಪ್ರೀತಿ ಪೂರ್ವಕಮ್।
ದದಾಮಿ ಬುದ್ಧಿ ಯೋಗಂ ತಂ ಯೇನ ಮಾಮುಪಯಾಂತಿ ತೇ ॥

ನಿರಂತರವಾಗಿ ನನ್ನ ಧ್ಯಾನಾದಿಗಳಲ್ಲಿ ತೊಡಗಿ, ಪ್ರೇಮದಿಂದ ಭಜಿಸುವ ಭಕ್ತರಿಗೆ ನಾನು ನನ್ನನ್ನು ಪಡೆಯುವ ತತ್ವಜ್ಞಾನರೂಪಯೋಗ ವನ್ನು ಕರುಣಿಸುತ್ತೇನೆ ಎಂದು ಶ್ರೀಕೃಷ್ಣ ಪರಮಾತ್ಮ ಭಗವದ್ಗೀತೆಯಲ್ಲಿ ಉಪದೇಶ ಮಾಡಿದ್ದಾರೆ. ಏಕಾದಶಿ ವ್ರತದ ಫಲ ಬಹುಹೆಚ್ಚಾಗಿದೆ.

ಏಕಾದಶಿ ವ್ರತ ನೂರು ಅಶ್ವಮೇಧಯಾಗದ ಫಲ ನೂರು ಗೋದಾನ ಮಾಡಿದ ಫಲ, ಸಾವಿರ ಯಜ್ಞ ಮಾಡಿದ ಫಲವಲ್ಲದೇ ಮುಕ್ತಿಗೆ ಸೋಪಾನ. ಏಕಾದಶಿ ವ್ರತವನ್ನು ನಿಯಮ, ನಿಷ್ಠೆಯಿಂದ ಆಚರಿಸಿದವರು, ವಿವಿಧ ಸಾಂಸಾರಿಕ ದುಃಖಗಳಿಂದ ಪಾರಾಗಿ ನಂತರ ವೈಕುಂಠಕ್ಕೆ ತೆರಳುವರು. ಜಗನ್ಮಾತೆ ರುಕ್ಮಿಣಿದೇವಿ ಜಗತ್ಪಿತ ಪಾಂಡುರಂಗ ಕೃಪೆ ಸದಾ ಎಲ್ಲರ ಮೇಲೆ ಇರಲಿ. ಲೋಕ ಕಲ್ಯಾಣವಾಗಲಿ.

ಪುಂಡರೀಕ ವರದ ಗೋವಿಂದಾ,ಗೋವಿಂದ! ಹರೇ ಪಾಂಡುರಂಗ ವಿಠಲ !



# ವ್ರತ, ದಾನಕ್ಕೆ ಶ್ರೇಷ್ಠ ಆಷಾಢಮಾಸ

– ಕೆ.ವಿ. ಪದ್ಮಾವತಿ
97437 22327

ಆಷಾಢ ಮಾಸದ ಸಂದರ್ಭದಲ್ಲಿ ಮಳೆ ಬಂದು ಕೃಷಿ ಚಟುವಟಿಕೆ ಪ್ರಾರಂಭವಾಗುತ್ತಿತ್ತು. ಮೊದಲೆಲ್ಲಾ ಜನರು ಕಾರ್ಯೋನ್ಮುಖರಾಗಿದ್ದರಿಂದ, ದೂರದ ಊರಿಗೆ ಹೋಗಲು ಸಾಧ್ಯವಾಗುತ್ತಿರಲಿಲ್ಲ.ಆ ಕಾರಣ ಶುಭಕಾರ್ಯಗಳನ್ನು ಮಾಡುತ್ತಿರಲಿಲ್ಲ. ಮುಂದೆ ಅದುವೇ ನಿಯಮವಾಯಿತು.

ಆಷಾಢಮಾಸ ಎಂದರೆ ಜನಸಾಮಾನ್ಯರ ಮನಸ್ಸಿನಲ್ಲಿ ಒಂದು ರೀತಿಯ ಭಾವನೆ. ಏಕೆಂದರೆ ಆ ಮಾಸದಲ್ಲಿ ಯಾವುದೇ ಶುಭ ಕಾರ್ಯಗಳನ್ನು ಮಾಡುವಂತಿಲ್ಲ. ಅಶುಭವನ್ನು ತಂದೊಡ್ಡುತ್ತದೆ ಎಂದು ಶಾಸ್ತ್ರಗಳು ತಿಳಿಸುತ್ತವೆ. ಆದರೆ ವ್ರತ-ನಿಯಮ ದಾನಗಳಿಗೆ ಅನುಕೂಲವಾದ ಸಮಯವೆಂದು ಧರ್ಮ ಶಾಸ್ತ್ರಗಳು ಘೋಷಿಸುತ್ತವೆ.

### ವ್ರತ ಹಾಗೂ ದಾನಗಳಿಗೆ ಶ್ರೇಷ್ಠಮಾಸ

ಆಷಾಢಮಾಸವು ಶುಭಕಾರ್ಯಗಳಿಗೆ ಯೋಗ್ಯವಲ್ಲ ಎಂಬ ಪ್ರತೀತಿ ಬಂದರೂ, ಆ ಮಾಸವು ಸಾಧನೆಗೆ ದಿವ್ಯ ಮಾಸ, ಶ್ರೇಷ್ಠಮಾಸ ಎಂದು ಶಾಸ್ತ್ರಗಳು ತಿಳಿಸುತ್ತವೆ. ಆಷಾಢ ಪದವು 'ಉಪಸರ್ಗ'ಹಾಗೂ ಷಟ್‌ಧಾತುವಿನಿಂದ ಅಂಶಕೆ ಎಂಬ ಅರ್ಥವಿದೆ. ಅಂದರೆ 'ಅಂಶದಿಂದ ಕೂಡಿರುವಂತಹದ್ದು', ಎಂದು ಇದರ ಅರ್ಥ ಪರತತ್ವದ ಅಂಶ, ಭಗವಂತ ಎಲ್ಲವನ್ನೂ ತುಂಬಿಕೊಂಡಿರುವಂತಹ ಮಾಸ ಎಂದು. ಇದೇ ತಿಂಗಳಿನಲ್ಲಿ ಬರುವ ಹುಣ್ಣಿಮೆ/ಏಕಾದಶಿಯಿಂದ ಚಾತುರ್ಮಾಸ ವ್ರತ ಪ್ರಾರಂಭವಾಗುತ್ತದೆ. ಈ ಮಾಸದಲ್ಲಿ ತೀರ್ಥ ಸ್ನಾನ,ದಾನ,ಜಪ,ಸತ್ಸಂಗಗಳನ್ನು ಹೆಚ್ಚಾಗಿ ಮಾಡಬೇಕು. ಆದರಿಂದ ನೂರರಷ್ಟು ಹೆಚ್ಚಿನ ಫಲವು ದೊರೆಯುತ್ತದೆ ಎಂದು ಧರ್ಮಶಾಸ್ತ್ರ ಗ್ರಂಥಗಳು ತಿಳಿಸುತ್ತವೆ.ಆಷಾಢ ಹುಣ್ಣಿಮೆಯಂದು ಶ್ರೀಹರಿಯು ಯೋಗನಿದ್ರೆಗೆ ಜಾರುತ್ತಾನೆ. ಆಗ ಅವನು ನೀರಿನಲ್ಲಿ ಮಲಗಿರುತ್ತಾನೆ. ಆದ್ದರಿಂದ ವಿಷ್ಣುವಿನ ತೇಜಸ್ಸು ನೀರಿನಲ್ಲಿ ವಿಶೇಷವಾಗಿ ಪ್ರಕಟವಾಗುತ್ತದೆ. ಆದ್ದರಿಂದಲೇ ಪುರಾಣಗಳು ಈ ಮಾಸದಲ್ಲಿ ತೀರ್ಥಸ್ನಾನಗಳಿಗೆ ವಿಶೇಷ ಪ್ರಾಶಸ್ತ್ಯವನ್ನು ನೀಡಿವೆ.

ಪುಣ್ಯಸ್ನಾನದಿಂದ ಸತ್ಯವನ್ನು ಹೊಂದುತ್ತಾನೆ. (ಸತ್ಯ ಎಂದರೆ ಪರಮಾತ್ಮನ ಇನ್ನೊಂದು ಹೆಸರು, ಅದು ಅವನ ವಿರಾಟ್ ಸ್ವರೂಪ).ಸ್ನಾನದಿಂದ ಸನಾತನ ಧರ್ಮವನ್ನು (ಧರ್ಮಾನುಷ್ಠಾನದ ಫಲವನ್ನು) ಪಡೆಯುತ್ತಾನೆ. ಅಂದರೆ ಜೀವಿಗಳು ಈ ಸಂಸಾರಚಕ್ರದಿಂದ ಮುಕ್ತರಾಗುತ್ತಾರೆ ಎಂದರ್ಥ. ಇದೇ ಮಾಸದಲ್ಲಿ



ಸತ್ಸಂಗಗಳನ್ನು ಮಾಡಿದರೆ ವಿಶೇಷ ಫಲಗಳು ಲಭಿಸುತ್ತವೆ ಎಂಬ ಉಲ್ಲೇಖಗಳು ನಮಗೆ ಸ್ಕಾಂದ ಪುರಾಣದಲ್ಲಿ ಸಿಗುತ್ತದೆ.

ಸತ್ಸಂಗ ಗುರು - ಹಿರಿಯರಲ್ಲಿ ಭಕ್ತಿ, ತರ್ಪಣ, ಗೋದಾನ, ವೇದ ಪಠಣೆ, ಸತ್ಯವಾಕ್ಯ ಪರಿಪಾಲನೆಯನ್ನು ಭಕ್ತಿಶ್ರದ್ಧೆಗಳಿಂದ ಮಾಡತಕ್ಕದ್ದು. ಈ ದಿನಗಳಲ್ಲಿ ಭಗವಂತನನ್ನು ಎರಡು ಘಳಿಗೆ ಸ್ಮರಿಸಿದರೂ ಸಾಕು ನೂರು ಜನ್ಮಗಳಲ್ಲಿ ಮಾಡಿದ ಪಾಪ ಭಸ್ಮವಾಗಿ ಹೋಗುತ್ತದೆ ಎಂಬ ಮಾತಿದೆ. ಸತ್ಕರ್ಮ,ಭಗವದ್ವಿಚಾರವಾದ ಮಾತು, ಸಜ್ಜನರ ಸೇವೆ ಹಾಗೂ ದರ್ಶನ, ಭಗವಂತನ ಪೂಜೆ, ದಾನದಲ್ಲಿ ಪ್ರೀತಿ, ಇವುಗಳನ್ನು ಆಚರಿಸಬೇಕು. ಇದರಿಂದ ವಿಶೇಷ ಫಲಪ್ರಾಪ್ತಿ ಉಂಟಾಗುತ್ತದೆ.

ಧರ್ಮಸಿಂಧುವಿನಲ್ಲಿ ಆಷಾಢಮಾಸದಲ್ಲಿ ಈ ರೀತಿಯಾಗಿ ದಾನಗಳನ್ನು ಮಾಡಿದರೆ ವಿಶೇಷವಾಗಿ ನಮಗೆ ಫಲ ಪ್ರಾಪ್ತಿಯಾಗುತ್ತದೆ ಎಂದು ಆಷಾಢಮಾಸದಲ್ಲಿ ತಿಳಿದು ಬರುತ್ತದೆ. 'ಇಡೀ ಆಷಾಢಮಾಸದಲ್ಲಿ ಏಕಭುಕ್ತ ವ್ರತವನ್ನು ಆಚರಿಸಿದರೆ ಬಹು ದನ,ಧಾನ್ಯ,ಪುತ್ರಾದಿ ಸಂಪತ್ತು ಪ್ರಾಪ್ತವಾಗುವುದು ಎಂದು. ಈ ಮಾಸದಲ್ಲಿ ವಿಶೇಷವಾಗಿ ಎಲ್ಲ ರೀತಿಯ ದಾನಗಳನ್ನು ಹೇಳಿದ್ದರೂ, ಅನ್ನದಾನ ವಿಶಿಷ್ಟವಾದುದು. ಅದನ್ನು ಮಾಡಬೇಕು ಎಂದು ಪುರಾಣಗಳು ಹೇಳುತ್ತವೆ.

ಅನ್ನವು ಬ್ರಹ್ಮ ಅನ್ನದಲ್ಲಿ ಪ್ರಾಣವು ನೆಲಸಿದೆ. ಆದುದರಿಂದ ಅನ್ನವನ್ನು ಹಾಗೂ ನೀರನ್ನು ಕೊಡಬೇಕು. ಇವನ್ನು ಎಲ್ಲಾ ಸಮಯದಲ್ಲೂ ನೀಡಬೇಕು. ಆದರೆ ಆಷಾಢಮಾಸದಲ್ಲಿ ನೀಡಿದರೆ ಅದಕ್ಕೆ ಅಕ್ಷಯವಾದ ಪುಣ್ಯವು ಲಭಿಸುತ್ತದೆ. ಅಲ್ಲದೆ ನೀರನ್ನು ಕೊಡುವುದರಿಂದ ಜೀವಿಗೆ ತೃಪ್ತಿ ಸಿಗುತ್ತದೆ. ಅನ್ನದಿಂದ ಅಕ್ಷಯವಾದ ಸುಖ ದೊರಕುತ್ತದೆ. ಆದ್ದರಿಂದ ಅನ್ನ ಹಾಗೂ ನೀರಿನ ದಾನವನ್ನು ವಿಶೇಷವಾಗಿ ಹೇಳಲಾಗಿದೆ.

ಆಷಾಢಮಾಸದಲ್ಲಿ ಪರನಿಂದೆಯನ್ನು ಸಂಪೂರ್ಣವಾಗಿ ಬಿಡಬೇಕು. ವೈರಭಾವವನ್ನು ತ್ಯಜಿಸಬೇಕು. ಇದು ಮಹಾತಪಸ್ಸು. ಇದು ಆಂತರಿಕ ಶುದ್ಧಿಗೆ ಕಾರಣವಾಗುತ್ತದೆ. ಇಂದ್ರಿಯ ನಿಗ್ರಹಕ್ಕೂ



ಇದು ಸಹಾಯಕವಾಗುತ್ತದೆ. ಅಂದರೆ ಇತರೆ ಮಾಸದಲ್ಲಿ ಪರನಿಂದೆಯನ್ನು ಹಾಗೂ ವೈರತ್ವವನ್ನು ಬೆಳಸಿಕೊಳ್ಳಬಹುದು ಎಂದು ಆಲೋಚಿಸಬಾರದು. ಈ ಮಾಸದಲ್ಲಿ ವಿಶೇಷ ಫಲಗಳನ್ನು ಸಿಗುವುದರಿಂದ, ಅದಕ್ಕಾದರೂ ನಾವು ಸಂಕಲ್ಪವನ್ನು ತೊಟ್ಟು ಪರನಿಂದೆಯನ್ನು ಮತ್ತು ವೈರತ್ವವನ್ನು ತ್ಯಜಿಸಬೇಕು ಎಂದರ್ಥ.

ಲೋಭ ಪಾಪದ ಮೂಲ. ಅದನ್ನು ನಾವು ಗೆಲ್ಲಲೇಬೇಕು. ಕುರುಕ್ಷೇತ್ರ ಯುದ್ಧ ನಡೆದದ್ದೇ ದುರ್ಯೋಧನನ ಲೋಭವನ್ನು ಗೆಲ್ಲಬಹುದು. ಮಾನ ಎಲ್ಲರಲ್ಲಿಯೂ ಭಯಂಕರ ಶತ್ರು. ಅದನ್ನು ಕ್ಷಮಾದಾನದ ಮೂಲಕ ಗೆಲ್ಲಬಹುದು ಎಂದು ಶಾಸ್ತ್ರಕಾರರು ತಿಳಿಸಿದ್ದಾರೆ. ಹೀಗೆ ಆಷಾಢಮಾಸದಲ್ಲಿ ವಿವಿಧ ದಾನ, ಪೂಜೆ ಹಾಗೂ ವ್ರತಗಳನ್ನು ಕೈಗೊಳ್ಳುವುದರ ಮೂಲಕ ನಾವು ಪರಮಪದವನ್ನು ಹೊಂದಬಹುದು. ಅನಂತ ಸುಖ, ಸಂಪತ್ತನ್ನು ಹೊಂದಬಹುದು.

## ಸ್ವಾಮಿಯ ಆಲಯದಲ್ಲಿ ಸೆಲ್‌ಫೋನ್ ನಿಷೇಧ

ತಿರುಮಲೆ ಸ್ವಾಮಿಯವರ ಆಲಯದಲ್ಲಿ ಸೆಲ್‌ಫೋನ್,ಕೆಮರಾ, ಇತರ ಎಲೆಕ್ಟ್ರಾನಿಕ್ ವಸ್ತುಗಳನ್ನು ನಿಷೇಧಿಸಲಾಗಿದೆ. ನಿಷೇಧಿಸಿದ ವಸ್ತುಗಳೊಂದಿಗೆ ಭಕ್ತರು ಕಂಡು ಬಂದರೆ ಅಂತಹ ವ್ಯಕ್ತಿಯರನ್ನು ಆಲಯದೊಳಗೆ ಅನುಮತಿಸಲಾಗುವುದಿಲ್ಲ. ಆದ್ದರಿಂದ ಭಕ್ತರು ತಿ.ತಿ.ದೇ.ಯೊಂದಿಗೆ ಸಹಕರಿಸಬೇಕಾಗಿ ಕೋರಲಾಗಿದೆ.

- ಕಾರ್ಯನಿರ್ವಹಣಾಧಿಕಾರಿ



# ಚಾತುರ್ಮಾಸ್ಯ ದೇಹಕ್ಕೂ ಮನಸ್ಸಿಗೂ ವ್ರತ

– ಪಿ.ಎಸ್. ಅರ್ಚನ,
98453 83154

ನಮ್ಮ ಸಂಸ್ಕೃತಿಯಲ್ಲಿ ಸನ್ಯಾಸಕ್ಕೆ ತುಂಬ ಗೌರವವಿದೆ. ಲೌಕಿಕ ಸಂಸಾರವನ್ನು ತ್ಯಜಿಸಿ, ಜಗತ್ತಿನ ಒಳಿತಿಗಾಗಿ ಬದುಕುವವನೇ ಸನ್ಯಾಸಿ. ಅವನು ಒಂದೇ ಕಡೆ ನೆಲೆ ನಿಲ್ಲಬಾರದು; ಜಗತ್ತೇ ಅವನ ಪಾಲಿಗೆ ಮನೆ. ಹೀಗಿದ್ದರೂ ಅವನು ಮಳೆಗಾಲದಲ್ಲಿ ಒಂದೆಡೆ ಇರಬೇಕು; ಆ ಸಮಯದಲ್ಲಿ ಅಧ್ಯಯ ಶೀಲನಾಗಿರಬೇಕು; ಜನರಿಗೆ ಧರ್ಮಬೋಧನೆಯನ್ನು ಮಾಡಬೇಕು ಎಂದು ಪರಂಪರೆ ಹೇಳುತ್ತದೆ. ಹೀಗೆ ಸನ್ಯಾಸಿಯಾದವನು ಒಂದೆಡೆ ಇದ್ದು. ಸಾಧನೆಯಲ್ಲಿ ತೊಡಗುವ ವ್ರತವನ್ನೇ 'ಚಾತುರ್ಮಾಸ್ಯ' ಎಂದು ಕರೆಯುವುದು.

'ಚಾತುರ್ಮಾಸ್ಯ' ಎಂದರೆ ನಾಲ್ಕು ಮಾಸಗಳಿಗೆ ಸಂಬಂಧಿಸಿದ ಎಂದು ಅರ್ಥ. ವರ್ಷದಲ್ಲಿ ನಾಲ್ಕು ತಿಂಗಳ ಕಾಲ ಈ ವ್ರತವನ್ನು ಆಚರಿಸುವುದರಿಂದ ಈ ಹೆಸರು ಬಂದಿದೆ. ಇಂದು ಈ ವ್ರತ ಸನ್ಯಾಸಿಗಳಿಗೆ ಮಾತ್ರ ಎಂಬ ಅಭಿಪ್ರಾಯವಿದ್ದರೂ ಇದನ್ನು ಗೃಹಸ್ಥರೂ ಆಚರಿಸಬೇಕು ಎಂದು ಶಾಸ್ತ್ರಗಳು ಹೇಳುತ್ತವೆ. ಆಷಾಢಮಾಸದ ಶುಕ್ಲಪಕ್ಷದ ಏಕಾದಶಿ ಅಥವಾ ದ್ವಾದಶೀ ಅಥವಾ ಪೂರ್ಣಿಮೆಯಂದು ಚಾತುರ್ಮಾಸ್ಯ ವ್ರತವನ್ನು ಆರಂಭಿಸುವುದು ವಾಡಿಕೆ.

ದೈಹಿಕ ಮತ್ತು ಮಾನಸಿಕ ನಿಯಂತ್ರಣಕ್ಕೆ ಪೂರಕವಾಗುವಂತೆ ಈ ವ್ರತದ ವಿಧಾನಗಳನ್ನು ರೂಪಿಸಲಾಗಿದೆ. ಈ ಸಮಯದಲ್ಲಿ ನಮ್ಮ ದಿನನಿತ್ಯದ ಚಟುವಟಿಕೆಗಳನ್ನು ಆದಷ್ಟು ಕಡಿಮೆ ಮಾಡಿಕೊಂಡು, ಭಗವಂತನ ಧ್ಯಾನ, ಸ್ತೋತ್ರ ಮತ್ತು ಪೂಜೆಗಳಲ್ಲಿ ತೊಡಗಬೇಕೆಂಬುದು ಈ ವ್ರತದ ಉದ್ದೇಶ. ಹೀಗೆ ನಮ್ಮ ದೈಹಿಕ ಚಟುವಟಿಕೆಗಳ ಮೇಲೆ ನಿಯಂತ್ರಣವನ್ನು ಸಾಧಿಸುವ ಉದ್ದೇಶದಿಂದ ಈ ವ್ರತದ ಸಮಯದಲ್ಲಿ ಕೆಲವೊಂದು ಆಹಾರ ಪದಾರ್ಥಗಳನ್ನು ತೊರೆಯುವುದುಂಟು. ಮೊದಲ ತಿಂಗಳು ತರಕಾರಿಗಳನ್ನೂ, ಎರಡನೆಯ ತಿಂಗಳು ಮೊಸರನ್ನೂ, ಮೂರನೆಯ ತಿಂಗಳಲ್ಲಿ ಹಾಲನ್ನೂ, ನಾಲ್ಕನೆಯ ತಿಂಗಳಲ್ಲಿ ದ್ವಿದಳ ಧಾನ್ಯಗಳನ್ನೂ ಉಪಯೋಗಿಸುವಂತಿಲ್ಲ. (ಈಗ ಹದಿನೈದು ದಿನಗಳಿಗೆ - ಎಂದರೆ ಒಂದು ಪಕ್ಷವನ್ನೇ ಒಂದು ತಿಂಗಳು ಎಂಬ ಎಣಿಕೆಯಲ್ಲಿಯೂ ಚಾತುರ್ಮಾಸ್ಯವನ್ನು ಕೆಲವರು ಆಚರಿಸುವುದುಂಟು.)

ಚಾತುರ್ಮಾಸ್ಯವನ್ನು ಸನ್ಯಾಸಿಗಳು ವಿಶೇಷವಾಗಿ ಆಚರಿಸುವುದುಂಟು. ಸನ್ಯಾಸಿಗಳು ಆಷಾಢಪೂರ್ಣಿಮೆಯಂದು ಕ್ಷೌರವನ್ನು ಮಾಡಿಸಿಕೊಂಡು ವ್ರತಾಚರಣೆಗೆ ತೊಡಗುತ್ತಾರೆ. ವ್ರತವು ಮುಗಿಯುವ ತನಕ ಅವರು ಕ್ಷೌರವನ್ನು ಮಾಡಿಸಿಕೊಳ್ಳುವಂತಿಲ್ಲ.

ಶ್ರೀಮಹಾವಿಷ್ಣುವು ಈ ಸಮಯದಲ್ಲಿ ಯೋಗ ನಿದ್ರೆಯಲ್ಲಿರುತ್ತಾನೆ ಎಂಬ ನಂಬಿಕೆಯಿದೆ. ಸನ್ಯಾಸಿಗಳು ಈ ಸಮಯದಲ್ಲಿ ಒಂದೇ ಕಡೆಯಲ್ಲಿ ವಾಸ ಮಾಡಿ, ಜಗತ್ತಿನ ಒಳಿತಿಗಾಗಿ ಭಗವಂತನ ಧ್ಯಾನದಲ್ಲಿ ತಲ್ಲೀನರಾಗಿರಬೇಕು. ಸನ್ಯಾಸಿಗಳು ಒಂದೇ ಕಡೆಯಲ್ಲಿ ವಾಸ ಮಾಡುವಂತಿಲ್ಲ. ಆದರೆ ಮಳೆಗಾಲದಲ್ಲಿ ಓಡಾಟವೂ ಕಷ್ಟ. ಹೀಗಾಗಿ ಅವರು ಈ ಸಂದರ್ಭದಲ್ಲಿ ಒಂದು ಕಡೆ ಇರಲು ಅವಕಾಶ ಕೊಟ್ಟಿದೆ. ಆದರೆ ಈ ಸಮಯದಲ್ಲಿ ಅವರು ಇಂದಿನ ತಮ್ಮ ಅನುಷ್ಠಾನಗಳ ಜೊತೆಗೆ ಮತ್ತೂ ಹೆಚ್ಚಿನ ಜಪ ತಪ ಅಧ್ಯಯನಗಳಲ್ಲಿ ನಿರತರಾಗಿರಬೇಕು. ಜನರಿಗೆ ಧರ್ಮ ಬೋಧನೆಯನ್ನು ಮಾಡಬೇಕು.

ಕೇವಲ ವೈದಿಕ ಪಂಥದ ಸನ್ಯಾಸಿಗಳು ಮಾತ್ರವೇ ಅಲ್ಲದೆ, ಬೌದ್ಧ - ಜೈನ ಸನ್ಯಾಸಿಗಳೂ ಚಾತುರ್ಮಾಸ್ಯ ವ್ರತವನ್ನು ಆಚರಿಸುತ್ತಾರೆ.ನಮ್ಮ ನಾಡಿನಲ್ಲಿ ಶೃಂಗೇರಿ, ಉಡುಪಿ ಮುಂತಾದ ಪ್ರಸಿದ್ಧ ಕ್ಷೇತ್ರಗಳಲ್ಲಿ ಸನ್ಯಾಸಿಗಳು ಆಚರಿಸುವ ಚಾತುರ್ಮಾಸ್ಯ ವ್ರತದ ವಿಧಿ - ವಿಧಾನಗಳನ್ನು ನೋಡಬಹುದು.

## ಚಾತುರ್ಮಾಸ ಆಚರಣೆ

ಚಾತುರ್ಮಾಸ ಎಂದರೆ ನಾಲ್ಕು ತಿಂಗಳು. ನಾಲ್ಕು ತಿಂಗಳು ನಡೆಸುವ ವ್ರತ, ನಿಯಮ ಎಂದು ನಿಘಂಟಿನ ಅರ್ಥ, ಈ ವ್ರತ ಅಥವಾ ನಿಯಮವನ್ನು ಆಚರಿಸುವ ನಾಲ್ಕು ತಿಂಗಳುಗಳು ಯಾವುದೆಂದರೆ. ಆಷಾಢಶುದ್ಧ ದ್ವಾದಶಿಯಿಂದ ಕಾರ್ತಿಕ ಶುದ್ಧ ದಶಮಿವರೆಗಿನ ನಾಲ್ಕು ತಿಂಗಳುಗಳು.

ಒಂದು ವರ್ಷದ ಹನ್ನೆರಡು ತಿಂಗಳುಗಳಲ್ಲಿ, ಈ ನಾಲ್ಕು ತಿಂಗಳಲ್ಲಿ ಮಾತ್ರ ವ್ರತ ಆಚರಿಸುವಂತೆ ಏಕೆ ನಿಯಮ ಮಾಡಿದ್ದಾರೆ? ಇದನ್ನು ಅರ್ಥ ಮಾಡಿ ಕೊಳ್ಳಬೇಕಾದರೆ, ಖಗೋಳಶಾಸ್ತ್ರದ ಜ್ಞಾನ ಸ್ವಲ್ಪಬೇಕು. ನಮ್ಮ ಮಹರ್ಷಿಗಳು, ಈ ಖಗೋಳ ಶಾಸ್ತ್ರವನ್ನು ಧಾರ್ಮಿಕವಾಗಿ ಹೇಳಿರುವುದನ್ನು ವೈಜ್ಞಾನಿಕವಾಗಿ ಅರ್ಥಮಾಡಿಕೊಂಡರೆ, ಇದರ ಪರಮಾರ್ಥ ಗೊತ್ತಾಗುತ್ತದೆ.ಒಂದು ವರ್ಷದಲ್ಲಿ ಹನ್ನೆರಡು ತಿಂಗಳು. ಆರು ಋತುಗಳು, ಮೂರು ಚಾತುರ್ಮಾಸಗಳು ಮತ್ತು ಏಳು ವಾರಗಳು ಎಂದಾಯಿತು. ಇಷ್ಟೇ ಅಲ್ಲ. ಈ ಹನ್ನೆ ರಡು ತಿಂಗಳುಗಳಲ್ಲಿ ಸೂರ್ಯನ ಪಥವು.ಆರು ತಿಂಗಳಿಗೊಂದಾವರ್ತಿ ಸ್ವಲ್ಪ ಬದವಲಾವಣೆ ಯಾಗುತ್ತಿದೆ. ಇದಕ್ಕೆ ಆಯನ ಎಂದರು. ಉತ್ತರಾಯಣ ಮತ್ತು ದಕ್ಷಿಣಾಯಣ ಒಂದೊಂದು ಆಯನಕ್ಕೂ ಮೂರು ಋತುಗಳು ಮತ್ತು ಆರು ತಿಂಗಳುಗಳು.

ವರ್ಷಋತುವಿನಲ್ಲಿ ಶ್ರಾವಣ ಭಾದ್ರಪದ ಮಾಸಗಳೂ, ಶರದೃತುವಿನಲ್ಲಿ ಅಶ್ವ ಯುಜ ಕಾರ್ತಿಕ ಮಾಸಗಳೂ ಮತ್ತು ಹೇಮಂತ ಋತುವಿನಲ್ಲಿ ಮಾರ್ಗಶಿರ ಪುಷ್ಯಮಾಸ ಗಳೂ ಬರುತ್ತವೆ, ಈ ಕಾಲಕ್ಕೆ ದಕ್ಷಿಣಾಯಣ ಎಂದರು.

ಮೊದಲೇ ತಿಳಿಸಿದಂತೆ ಒಂದು ಋತು ಶುರುವಾಗುವ ಎರಡು ವಾರಗಳ ಮೊದಲೇ ಸದರಿ ಋತುವಿನ ಪ್ರಭಾವು ಶುರುವಾಗುತ್ತದೆ. ಗ್ರೀಷ್ಮ ಋತುವು ಆಷಾಢ ಬಹುಳ ಅಮಾ ವಾಸ್ಯೆಗೆ ಕೊನೆಗೊಂಡರೂ ಅದರ ಮುಂದಿನ ಋತುವಿನ ಪ್ರಭಾವವು. ಆಷಾಢ ಶುದ್ಧ ದ್ವಾದಶಿ ಯಿಂದ ಶುರುವಾಗುತ್ತದೆ. ಎರಡು ವಾರಕ್ಕೆ 4-5 ದಿನಗಳ ಮೊದಲೇ ಚಂದ್ರನ ಪ್ರಭಾವವು ಭೂಮಿಗೆ 120 ಡಿಗ್ರಿಗೆ ಬರುತ್ತಿರುವಾಗಲೇ ಹೀಗೆ ಶುರುವಾಗುತ್ತದೆ ಎಂದು ತಿಳಿಸಿದೆಯಷ್ಟೆ. ಏಕೆಂದರೆ, ದಕ್ಷಿಣಾಯಣ ಕಾಲವು ಅರ್ಥಾತ್ ವಿಸರ್ಗಕಾಲವು, ಚಂದ್ರನ ಅಧಿಪತ್ಯ.


ಗ್ರೀಷ್ಮ ಋತುವಿನಲ್ಲಿ ಆಹಾರ ನಿಯಮ ಹೇಗಿರಬೇಕೆಂದು, ವಾಕ್ಬಟಾಚಾರ್ಯರು ಹೇಳಿರುವುದನ್ನು ಮೊದಲೇ ತಿಳಿಸಿದೆಯಷ್ಟೇ ಈ ಋತು ಮುಗಿದು ವರ್ಷಋತು ಶುರು ವಾಗುವ ಕಾಲದಲ್ಲಿ, ಹೆಚ್ಚಿಗೆ ಉಷ್ಣವಾಗುವ ಆಹಾರವನ್ನು ವರ್ಜ್ಯ ಮಾಡಿದರು. ಇದನ್ನೇ ಶಾಕವ್ರತ ಎಂದರು. ಶಾಕ ಎಂದರೆ ತರಕಾರಿ ಎಂತಲೂ, ಉಷ್ಣ ಎಂತಲೂ ನಿಘಂಟಿನ ಅರ್ಥ. ಆಷಾಢ ಮಾಸದಲ್ಲಿ ತರಕಾರಿ ಹೆಚ್ಚಾಗಿ ಬೆಳೆಯುತ್ತೆ. ಈ ತರಕಾರಿಗಳೂ ಭೂಮಿಯೊಳಗಿನ ಉಷ್ಣದ ಸಹಾಯದಿಂದ ಬೆಳೆಯಬೇಕು. ಶಿಶಿರ ಋತು, ವಸಂತಋತು, ಗ್ರೀಷ್ಮ ಋತುಗಳಲ್ಲಿ, ಭೂಮಿಯಲ್ಲಿ ಉಷ್ಣವು ಹೆಚ್ಚಾಗಿ ಕೇಂದ್ರಿಕರಿಸಿರುತ್ತೆ. ಮಳೆಗಾಲ ಶುರುವಾದಾಗ, ಭೂಮಿಗೆ ನೀರು ಹೋಗಿ, ಭೂಮಿಯೊಳಗಿನ ಉಷ್ಣವು (ಶಾಖವು) ಸಸ್ಯಗಳ ಮೂಲಕ ವಿಸರ್ಜನೆಯಾಗುತ್ತೆ. ಈ ಸಸ್ಯಗಳಿಂದ ದೊರಕುವ ತರ ಕಾರಿಗಳನ್ನು (ಶಾಖಗಳನ್ನು), ಈ ತಿಂಗಳಿನಲ್ಲಿ ಸೇವನೆ ಮಾಡಿದರೆ,



ಶರೀರದಲ್ಲಿರುವ ಶಾಖವು, (ಉತ್ತರಾಯಣದಲ್ಲಿ ಅರ್ಥಾತ್ ಆದಾನಕಾಲದಲ್ಲಿ ಶೇಖರಿಸಿರುವ ಉಷ್ಣವು) ಕಮ್ಮಿ ಆಗುವುದಕ್ಕೆ ಅವಕಾಶವಾಗುವುದಿಲ್ಲ ವಿಸರ್ಗ ವಾಗುವುದಕ್ಕೆ, ನಾವು ಸೇವನೆ ಮಾಡುವ ಆಹಾರ ದೋಷ ಗಳಿಂದಲೇ, ಅನೇಕ ಉಪದ್ರವಗಳು ಬರುತ್ತವೆ. ಇದನ್ನು ಆಯುರ್ವೇದದಲ್ಲಿ ಬಹಳ ಕಟ್ಟುನಿಟ್ಟಾಗಿ ಹೇಳಿದ್ದಾರೆ. ಈ ಆಹಾರ ನಿಯಮವನ್ನು ಉಲ್ಲಂಘಿಸಿದರೆ, ಅನೇಕ ಬಗೆಯ ರೋಗಗಳು, ಕಾಲಕ್ರಮೇಣ ಬರುತ್ತವೆ. ಆದ್ದರಿಂದ, ಈ ಕಾಲದಲ್ಲಿ ಭೂಮಿಯಿಂದ ಹೊರದೂಡ ಲ್ಪಡುವ ಉಷ್ಣವು,ತರಕಾರಿಗಳಲ್ಲಿ (ಶಾಖಗಳಲ್ಲಿ) ಹೆಚ್ಚಾಗಿ ಇರುವು ದರಿಂದ ಈ ಕಾಲದಲ್ಲಿ,ಪೂರ್ತಿ,ಯಾವ ತರಕಾರಿಗಳನ್ನೂ ಸೇವೆ ಮಾಡಕೂಡದು ಎಂದರು. ಆದರೆ, ಮನುಷ್ಯನ ದೇಹಕ್ಕೆ ಅತ್ಯವಶ್ಯಕವಾದ ಉಷ್ಣವು, ಬೇರೆ ಇತರೆ ಆಹಾರ ಪದಾರ್ಥಗಳಲ್ಲಿರುವುದೇ ಈ ತಿಂಗಳು ಸಾಕಾಗುತ್ತದೆ.

ಎರಡನೇ ತಿಂಗಳಾದ ಶ್ರಾವಣ ಶುದ್ಧ ದ್ವಾದಶಿ ಯಿಂದ ಒಂದು ತಿಂಗಳು ಅಂದರೆ ಭಾದ್ರಪದ ಶುದ್ಧ ದಶಮಿವರೆಗೆ, ದಧಿ ಅಥವಾ ಮೊಸರಿನ ವ್ರತ ಎಂದರು. ಮೊಸರು,ಉಷ್ಣತೆ ಮತ್ತು ದೀಪಕ ಗುಣವುಳ್ಳದ್ದು. ಮೇದಸ್ಸು (ಕೊಬ್ಬು) ಜಾಸ್ತಿ ಮಾಡುತ್ತೆ ಮತ್ತು ಅಗ್ನಿವರ್ಧಕ ಮೊದಲೇ ಅಂದರೆ, ಉತ್ತರಾಯಣದಲ್ಲಿ, ದೇಹದಲ್ಲಿ ಉಷ್ಣವು ಜಾಸ್ತಿಯಾಗಿರುವುದರಿಂದ ಮೇಲೆ ಹೇಳಿದ ಗುಣ ಗಳಿರುವ ಮೊಸರನ್ನು, ಒಂದು ತಿಂಗಳು ಉಪಯೋಗಿ ಸಿದರೆ, ಇನ್ನೂ ಉಷ್ಣವು ಅಧಿಕವಾಗಿ, ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಉಂಟಾಗುತ್ತದೆ. ಉತ್ತರಾಯಣದಲ್ಲಿ ಉಷ್ಣವು ಜಾಸ್ತಿಯಾಗುವುದರಿಂದ, ಇದು ಇನ್ನೂ ಹೆಚ್ಚಾಗಿ, ಉಪದ್ರವಗಳಿಗೆ ಕಾರಣವಾಗುತ್ತೆ. ಆದ್ದರಿಂದ ಈ ತಿಂಗಳು, ದಧಿವ್ರತ ಎಂದರು. ಆದರೆ, ಈ ತಿಂಗಳಿನಲ್ಲಿ ಮಜ್ಜಿಗೆ ಯನ್ನು ಉಪಯೋಗಿಸಬೇಕು. ಮಜ್ಜಿಗೆಯಲ್ಲಿ, ಶರೀರ ವನ್ನು ತಂಪು ಮಾಡುವ ಗುಣ ಇದೆ.

ಮೂರನೇ ತಿಂಗಳಾದ ಭಾದ್ರಪದ ಶುದ್ಧ ದ್ವಾದಶಿ ಯಿಂದ ಆಶ್ವಯುಜ ಶುದ್ಧದಶಮಿವರೆಗಿನ ಒಂದು ತಿಂಗಳ ವರೆಗೆ, ಕ್ಷೀರವ್ರತ ಎಂದರು. ವರ್ಷ ಋತುವಿನಲ್ಲಿ ಮಳೆ ಬೀಳುವುದರಿಂದ ಗೋವುಗಳಿಗೆ ಮುಖ್ಯ ಆಹಾರವಾದ ಹುಲ್ಲು, ಈ ತಿಂಗಳಿನಲ್ಲಿ ಹೇರಳವಾಗಿ ಮತ್ತು ಹುಲುಸಾಗಿ ಬೆಳೆಯುತ್ತೆ. ಮೊದಲೇ ತಿಳಿಸಿದಂತೆ, ಈ ಹೊಸ ಹುಲ್ಲು ಭೂಮಿಯೊಳಗಿನ ಉಷ್ಣದಿಂದ ಕೂಡಿರುತ್ತದೆ. ಈ ಹೊಸ ಹುಲ್ಲನ್ನು ತಿಂದ ದನಗಳು ಕೊಡುವ ಹಾಲಿನಲ್ಲಿ ಈ ಹೆಚ್ಚಿಗೆ ಉಷ್ಣಾಂಶವು ಇದ್ದೇ ಇರುತ್ತೆ. ಇದು ಆಶ್ಚರ್ಯವಾಗಿ ಕಾಣ



ಬಹುದು. ಹುಲ್ಲಿನಲ್ಲಿ ನಾನಾ ಜಾತಿ ಇರುತ್ತೆ. ಇದರಲ್ಲಿ ಶುಂಠಿ ಹುಲ್ಲು ಎಂಬುದು ಒಂದು ಜಾತಿ. ಈ ಶುಂಠಿ ಹುಲ್ಲನ್ನು ತಿಂದ ದನಗಳು ಕೊಡುವ ಹಾಲಿನಲ್ಲೂ ಸ್ವಲ್ಪ ಶುಂಠಿ ವಾಸನೆ ಇರುತ್ತದೆ. ಇದು ಗ್ರಾಮಾಂತರ ಪ್ರದೇಶಗಳಲ್ಲಿರುವವರಿಗೆ ಚೆನ್ನಾಗಿ ಗೊತ್ತು. ಆದರೆ ನಗರಗಳಲ್ಲಿರುವ ದನಗಳಿಗೆ ಕೇವಲ ಬೂಸ, ಹಿಂಡಿ ಇತ್ಯಾದಿಗಳನ್ನು ಕೊಡುವುದರಿಂದ ಪಟ್ಟಣಗಳಲ್ಲಿ ಇರುವವರಿಗೆ, ಇದು ಗೊತ್ತಾಗುವುದಿಲ್ಲ.

ಹಿಂದೆ ಗ್ರಾಮಾಂತರ ಪ್ರದೇಶಗಳಲ್ಲೇ ಗೋಸಂಪತ್ತು ಇತ್ತು ಮತ್ತು ಸ್ವಾಭಾವಿಕವಾಗಿ ಸಿಕ್ಕುವ ಹುಲ್ಲೇ ಇವುಗಳ ಮುಖ್ಯ ಆಹಾರವಾಗಿತ್ತು. ಆದರೆ, ಈಗ ಪಟ್ಟಣಗಳಲ್ಲದೆ, ಗ್ರಾಮಾಂತರ ಪ್ರದೇಶಗಳಲ್ಲೂ ಸಹ, ದನಗಳಿಗೆ ಅಸ್ವಾಭಾವಿಕವಾದ ಆಹಾರ ಕೊಡುವುದು ಸರ್ವೇ ಸಾಮಾನ್ಯವಾಗಿದೆ. ಈ ಸಂದರ್ಭದಲ್ಲಿ ನಾವು, ಇನ್ನೂ ಒಂದು ಮುಖ್ಯವಾದ ವಿಷಯವನ್ನು ಗಮನಿಸಬೇಕು. ಈಗ, ಗ್ರಾಮಾಂತರ ಪ್ರದೇಶಗಳಲ್ಲದೆ, ನಗರಗಳಲ್ಲೂ, ಸೀಮೆ ಹಸುವಿನ ತಳಿಗಳು, ಜಾಸ್ತಿಯಾಗಿರುತ್ತದೆ. ಇದಕ್ಕೆ ಮುಖ್ಯ ಕಾರಣ, ಈ ತಳಿಗಳ ಹಸುಗಳು, ನಮ್ಮನಾಡ ಹಸುಗಳಿಗಿಂತ ಹೆಚ್ಚು ಹಾಲು ಕೊಡುತ್ತವೆ. ಈ ಸೀಮೆ ತಳಿಯ ದನಗಳಿಗೆ ಮೇಲೆ ಹೇಳಿದ ಬೂಸ, ಹಿಂಡಿ ಇತ್ಯಾದಿಗಳು. ಕಾರ್ಖಾನೆಗಳಲ್ಲಿ ತಯಾರಾದ ದನಗಳ ಆಹಾರವನ್ನು ಹೆಚ್ಚಾಗಿ ಕೊಡುವುದು ಸರ್ವೇ ಸಾಮಾನ್ಯವಾಗಿದೆ. ಈ ವಿಷಯವನ್ನು ಸಹ, ಇವು ಬಹಳ ಮುಖ್ಯವಾಗಿ ಗಮನಿಸಬೇಕು, ಅಲ್ಲದೆ ನಗರಗಳಲ್ಲಿ ಈಗ ದೊರಕುತ್ತಿರುವ ಹಾಲು, ಯಂತ್ರಗಳಲ್ಲಿ ಪರಿಷ್ಕರಿಸಲ್ಪಟ್ಟ ನಂತರವೇ ಮಾರಲ್ಪಡುವುದು. ಇದನ್ನೂ ಸಹ, ನಾವು ಮುಖ್ಯವಾಗಿ ಗಮನಿಸಬೇಕು.


ನಾಲ್ಕನೇ ತಿಂಗಳು ಆಶ್ವಯುಜ ಶುದ್ಧ ದ್ವಾದಶಿಯಿಂದ ಕಾರ್ತೀಕ ಶುದ್ಧ ದಶಮಿವರೆಗಿನ ಕಾಲದಲ್ಲಿ, ದ್ವಿದಳ ಧ್ಯಾನಗಳನ್ನು ಉಪಯೋಗಿಸಕೂಡದು ಎಂದರು. ಸಾಮಾನ್ಯವಾಗಿ ಈ ಕಾಲದಲ್ಲೇ ಮುಖ್ಯವಾದ ದ್ವಿದಳ ಧಾನ್ಯಗಳು ಬರುವುದು. ಶಾಕವ್ರತ ದಲ್ಲಿ ತಿಳಿಸಿರುವಂತೆ, ಈ ಹೊಸ ಧಾನ್ಯಗಳಲ್ಲಿ ಸಹ, ಉಷ್ಣಾಂಶವು ಸ್ವಲ್ಪ ಜಾಸ್ತಿ ಇರುವುದರಿಂದ ಈ ತಿಂಗಳಲ್ಲಿ ಇವುಗಳನ್ನು ಉಪಯೋಗಿಸಬಾರದು ಎಂದರು.

ಹಿಂದೆ, ಈ ನಿಯಮಗಳನ್ನು ಮಾಡಿದ ಮಹರ್ಷಿಗಳು, ಉತ್ತರ ಭಾರತದ ಹವಾಗುಣಗಳನ್ನು ಮುಖ್ಯವಾಗಿ ಗಣನೆಗೆ ತೆಗೆದುಕೊಂಡು, ಯಾವ ಯಾವ ಕಾಲದಲ್ಲಿ ಯಾವ ಯಾವ ಬೆಳೆಗಳು ಬರುತ್ತವೆಂಬುದನ್ನು ಗಮನಿಸಿ, ಆಯಾಯ ಕಾಲದಲ್ಲಿ ಇವುಗಳಿಂದ ದೇಹಾರೋಗ್ಯಕ್ಕೆ, ಉಂಟಾಗಬಹುದಾದ ಕೆಟ್ಟ ಪರಿಣಾಮಗಳನ್ನು ತಡೆಗಟ್ಟಲು, ಮುಂಜಾಗರೂಕತೆಯಿಂದ, ಧಾರ್ಮಿಕವಾಗಿ ಹೇಳಿದ್ದಾರೆ. ಆದರೂ, ಕೆಲವು ಮೂಲಭೂತವಾದ ನಿಯಮಗಳು, ಇಡೀ ಭಾರತ ದೇಶಕ್ಕೆ ಅನ್ವಯಿಸುತ್ತದೆ. ಇದನ್ನು ನಾವು ಬಹಳ ಮುಖ್ಯವಾಗಿ ಗಮನಿಸಬೇಕು. ಋತು ಬದಲಾವಣೆಯಿಂದಾಗಬಹುದಾದ ಹವಾಮಾನಾ ವ್ಯತ್ಯಾಸವು, ಅಲ್ಪ ಸ್ವಲ್ಪ ಏರುಪೇರಾಗುತ್ತೆ. ಇದು ಆಯಾ ಪ್ರದೇಶಗಳ ಅಕ್ಷಾಂಶ ಮತ್ತು ರೇಖಾಂಶಕ್ಕನುಸಾರವಾಗಿ ಆಗಲೇಬೇಕು. ಇದು ಪ್ರಕೃತಿ ನಿಯಮ. ಈ ದೃಷ್ಟಿಯಿಂದಲೇ, ಕೆಲವು ಬೆಳೆಗಳೂ ಸಹ, ಅಲ್ಲಿಯ ಹವಾಮಾನಕ್ಕನುಗುಣವಾಗಿ ವ್ಯತ್ಯಾಸವಾಗುತ್ತದೆ. ಪ್ರಕೃತ ಸಾಮಾನ್ಯವಾಗಿ ದ್ವಿದಳ ಧಾನ್ಯಗಳು ಹೆಚ್ಚಾಗಿ ಬೆಳೆಯುವುದು ಉತ್ತರ ಭಾರತದ ಪ್ರದೇಶಗಳಲ್ಲಿ, ಈ ಋತುವಿನಲ್ಲಿ, ಈ ಹೊಸ ಧಾನ್ಯಗಳು ಹೇರಳವಾಗಿ ಬರುತ್ತದೆ. ದಕ್ಷಿಣ ಭಾರತದಲ್ಲಿ ಈ ಧಾನ್ಯಗಳು ಸ್ವಲ್ಪ ತಡವಾಗಿ ಬರಬಹುದು ಅಷ್ಟೆ.

ಒಟ್ಟಿನಲ್ಲಿ ಈ ಹೊಸ ಧಾನ್ಯಗಳಲ್ಲಿ ಬರಹುದಾದ ಹೆಚ್ಚು ಉಷ್ಣವು (ಶಾಖವ್ರತದ ತಿಂಗಳಿನಲ್ಲಿದ್ದಂತೆ) ಮನುಷ್ಯನ ಆರೋಗ್ಯಕ್ಕೆ ಸಹಕಾರಿಯಾಗುವುದಿಲ್ಲವೆಂದು, ಈ ತಿಂಗಳು, ದ್ವಿದಳವ್ರತವೆಂದರು. ಆದರೆ ಶರೀರಕ್ಕೆ ಅತ್ಯಗತ್ಯವಾದ ಉಷ್ಣವು ಒಂದು ಮಿತಿಯಲ್ಲಿರಬೇಕಾಗಿರುವುದನ್ನು ಸಮ ಸರಿತೂಗಿಸಲು, ಈ ತಿಂಗಳು, ಮೆಣಸನ್ನು ಉಪಯೋಗಿಸುವಂತೆ ನಿಯಮ ಮಾಡಿದರು.

ಕೊನೆಯದಾಗಿ, ಈ ನಾಲ್ಕು ತಿಂಗಳುಗಳಲ್ಲಿ, ಅಂದರೆ ಚಾತುರ್ಮಾಸಗಳಲ್ಲಿ ಆಹಾರ ನಿಯಮವನ್ನು ಪಾಲಿಸಿದ ಬಗ್ಗೆ, ಶರೀರದಲ್ಲಿ ಉಂಟಾಗಬಹುದಾದ ಅಲ್ಪ ಸ್ವಲ್ಪ ತೊಂದರೆಗಳನ್ನು ನಿವಾರಣೆ ಮಾಡಿಕೊಳ್ಳುವ ಸಲುವಾಗಿ, ವ್ರತ ಮುಗಿದ ದಿನ, ಅಂದರೆ ಕಾರ್ತಿಕ ಶುದ್ಧ ದ್ವಾದಶಿಯಂದು, ನೆಲ್ಲಿ ಕಾಯಿಯ ಉಪಯೋಗವನ್ನು ಕಡ್ಡಾಯ ಮಾಡಿದರು. ಈ ದಿನ ನೆಲ್ಲಿಕಾಯಿ ಇಟ್ಟು ಬೃಂದಾವನ ಪೂಜೆ ಮತ್ತು ನೆಲ್ಲಿಕಾಯಿಯಿಂದ ತಯಾರಿಸಿದ ವ್ಯಂಜನ ತಿನಿಸುಗಳನ್ನು ಮಾಡಬೇಕು ಏಕೆ? ನೆಲ್ಲಿಕಾಯಿ ಶೀತಗುಣವುಳ್ಳದ್ದು. ಸ್ವಾಂತನ ಗುಣವುಳ್ಳದ್ದು ಹಗುರ ಮತ್ತು ಸಿಹಿ, ಹುಳಿ, ಖಾರ,ಕಹಿ ಮತ್ತು ಇಗರು, ಈ ರುಚಿಗಳ್ಳದ್ದು. ಇದರಲ್ಲಿ ಲವಣಾಂಶವಿಲ್ಲ. ಜೀರ್ಣಕಾರಿಗೆ ಸಹಾಯವಾದ ಸಿಹಿ ಉಳ್ಳದ್ದು. ಶರೀರದ ಉಷ್ಣತೆಯನ್ನು ಶಮನ ಮಾಡುತ್ತದೆ. ಕಣ್ಣುಗಳ ಉರಿಗೂ,ಪಾದಗಳ ಉರಿಗೂ ಒಳ್ಳೆ ರಾಮಬಾಣ ಪ್ರಕಾಶವಾದ ದೀಪಗಳಿಂದ ಮತ್ತು ಬೆಳಕಿನಿಂದ ಉಂಟಾಗುವ ಕಣ್ಣಿನ ದೋಷಗಳನ್ನು ನಿವಾರಣೆ ಮಾಡುವ ಗುಣವುಳ್ಳದ್ದು. ವೀರ್ಯವೃದ್ಧಿಯನ್ನುಂಟು ಮಾಡುತ್ತದೆ ಮತ್ತು ರುಚಿಗೆ ಸಹಾಯಕಾರಿ ಕೃಶ ಶರೀರವುಳ್ಳವರಿಗೆ ಒಳ್ಳೆ ಪುಷ್ಟಿ ಕೊಡುತ್ತದೆ.

# ಮಣ್ಣೆತ್ತಿನ ಅಮಾವಾಸ್ಯೆ - ಅನ್ನದಾತನ ಭಕ್ತಿ ಭಾವದ ಪ್ರತೀಕ




- ಪ್ರಣವ

- 9739369621


ಮಣ್ಣೆತ್ತಿನ ಅಮಾವಾಸ್ಯೆ ಎಂಬುದು ರೈತರ ಹಬ್ಬ. ಉತ್ತರ ಕರ್ನಾಟಕ ಹಾಗೂ ಹೈದ್ರಾಬಾದ್ ಕರ್ನಾಟಕ ಭಾಗಗಳಲ್ಲಿ ಮಣ್ಣೆತ್ತಿನ ಅಮಾವಾಸ್ಯೆಗೆ ವಿಶೇಷ ಸ್ಥಾನವಿದೆ. ಕೆರೆಯಿಂದ ತಂದ ಮಣ್ಣಿನಿಂದ ಎತ್ತುಗಳ ಪ್ರತಿರೂಪ ಮಾಡಿ ಪೂಜಿಸುವುದು ವಿಶೇಷ. ಮಣ್ಣಿಗೂ, ಎತ್ತಿಗೂ ಅವಿನಾಭಾವ ಸಂಬಂಧವಿದೆ. ಅಲ್ಲದೆ ಮಣ್ಣಿನ ಎತ್ತಿನ ಮೂರ್ತಿಗಳನ್ನು ಪೂಜಿಸಿದರೆ ಸಕಾಲದಲ್ಲಿ ಮಳೆ ಬೆಳೆ ಸಮೃದ್ಧಿಯಾಗುತ್ತದೆ ಎನ್ನುವ ನಂಬಿಕೆಯಿದೆ. ಈ ಹಬ್ಬದ ಪರಿಚಯಾತ್ಮಕ ಬರಹವಿದು.

ಭಾರತ ಹಬ್ಬಹರಿದಿನಗಳ ನಾಡು. ಇಲ್ಲಿ ಸಂಸ್ಕೃತಿ ಸಂಸ್ಕಾರಗಳಿಗೆ ವಿಶೇಷ ಮಹತ್ವವಿದೆ. ನಾವೆಲ್ಲ ಕಲ್ಲು ಮಣ್ಣಿನಲ್ಲಿ, ಪ್ರಕೃತಿಯಲ್ಲಿ ದೈವತ್ವವನ್ನು ಕಾಣುತ್ತೇವೆ. ಮಣ್ಣಿನಿಂದ ಎತ್ತುಗಳನ್ನು ಮಾಡಿ ಪೂಜಿಸುವ ಸಂಪ್ರದಾಯದ ಹಬ್ಬವೇ ಮಣ್ಣೆತ್ತಿನ ಅಮಾವಾಸ್ಯೆ. ಇದು ಮುಂಗಾರಿನ ಆರಂಭದ ಹಬ್ಬ ಕೂಡ.

ತಮ್ಮ ಬದುಕಿಗೆ ಆಸರೆಯಾಗಿರುವ ಎತ್ತುಗಳನ್ನು ರೈತಾಪಿ ಜನರು ಪೂಜಿಸಿ ಸಂಭ್ರಮ ಪಡುವ ಈ ಹಬ್ಬ ಕಾರಹುಣ್ಣಿಮೆಯ ನಂತರ ಬರುತ್ತದೆ. ಮಣ್ಣಿನ ಮಕ್ಕಳಿಗೆ ಅತ್ಯಂತ ಪವಿತ್ರವಾದುದು. ವರ್ಷಾರಂಭದಿಂದ ಐದು ಮುಖ್ಯ ಮಣ್ಣಿನ ಪೂಜೆಯನ್ನು ನೆರವೇರಿಸುವ ಸಂಪ್ರದಾಯವಿದೆ. ಆಷಾಢ ಶ್ರಾವಣ ಮತ್ತು ಭಾದ್ರಪದ ಮಾಸಗಳು ಮಣ್ಣಿನ ಪೂಜೆಯ ದ್ಯೋತಕಗಳಾಗಿವೆ. ಮಣ್ಣೆತ್ತು, ಗುಳ್ಳವ್ವ, ಹುತ್ತಪ್ಪ, ಗಣಪ್ಪ ಹಾಗೂ ಜೋಕುಮಾರ-ಈ ಐದೂ ಮಣ್ಣಿನಿಂದ ಮಾಡಿದ ದೈವಗಳನ್ನು ಮೂರು ಮಾಸಗಳಲ್ಲಿ ಪೂಜಿಸುತ್ತಾರೆ. ಕೃಷಿಕರ ಅತ್ಯಂತ ಒಡನಾಡಿಯಾಗಿರುವ ದನಕರುಗಳನ್ನು ಕಾರ ಹುಣ್ಣಿಮೆಯಲ್ಲಿ ವಿಶೇಷವಾಗಿ ಮೈ ತೊಳೆದು, ಬಣ್ಣ ಹಚ್ಚಿ, ವಿವಿಧ ಪರಿಕರಗಳಿಂದ ಸಿಂಗಾರ ಮಾಡುತ್ತಾರೆ. ಹೋಳಿಗೆ, ಕಡುಬು ಮುಂತಾದ ಸಿಹಿ ತಿನಿಸುಗಳನ್ನು ಮಾಡಿ ಎಡೆ ಹಿಡಿದು ಸಂಜೆಗೆ ಕರಿ ಹರಿಯುವ ಸಂಭ್ರಮ ಹೇಳತೀರದು. ದನ ಕರುಗಳನ್ನು ಮನಬಂದಂತೆ ಓಡಾಡಿಸುವ ಮೂಲಕ ತಿಂಗಳೋಪ್ಪತ್ತಿನಿಂದ ವಿಶ್ರಾಂತಿಗೆ ಸರಿದಿದ್ದು ಅವುಗಳನ್ನು ಮತ್ತೆ ಕೃಷಿ ಕಾರ್ಯಕ್ಕೆ ಮಾಡುತ್ತಾರೆ.

### ಮಣ್ಣೆತ್ತಿಗೆ ಮಹಾ ಪೂಜೆ - ಮಳೆಗಾಲದ ನಾಂದಿಪದ

ಜೂನ್ ಜ್ಯೇಷ್ಠಮಾಸ ಕೊನೆಗೊಳ್ಳುವ ದಿನ. ನಮ್ಮ ಗ್ರಾಮೀಣ ಭಾಗದಲ್ಲಿ ಈ ಅಮಾವಾಸ್ಯೆಯನ್ನು ಮಣ್ಣೆತ್ತಿನ ಅಮಾವಾಸ್ಯೆಯನ್ನಾಗಿ ಆಚರಿಸುವ ರೂಢಿಯಿದೆ. ಮಳೆ ಬಂತೆಂದರೆ ಬಹುಶಃ ಎಲ್ಲರಿಗಿಂತ ಹೆಚ್ಚು ಸಂತೋಷಪಡುವುದು ರೈತಾಪಿವರ್ಗ. ಹಾಗೆಂದೇ ಮುಂಗಾರಿನ ಜ್ಯೇಷ್ಠ ಮಾಸದಲ್ಲಿ ರೈತರು ಹೆಚ್ಚು ಉಲ್ಲಾಸದಿಂದ ಇರುತ್ತಾರೆ. ಈ ಉಲ್ಲಾಸವನ್ನು ಹೆಚ್ಚಿಸುವಂತೆ ಕೃಷಿಗೆ ಸಂಬಂಧಿಸಿದ ಸಂಭ್ರಮಾಚರಣೆಗಳೂ ನಡೆಯುತ್ತವೆ. ಈ ನಿಟ್ಟಿನಲ್ಲಿ ಜ್ಯೇಷ್ಠ ಮಾಸದ ಮುಕ್ತಾಯದ ದಿನ, ಅಂದರೆ ಅಮಾವಾಸ್ಯೆಯ ದಿನ ಅತ್ಯಂತ ಮಹತ್ವದ್ದು. ಅಂದು 'ಮಣ್ಣೆತ್ತಿನ ಅಮಾವಾಸ್ಯೆ' ಅಥವಾ 'ಬಸವಣ್ಣನ ಹಬ್ಬ'.

### ಧಾನ್ಯಲಕ್ಷ್ಮಿಗೆ ಮನ್ನಣೆ


ಈ ಅಮಾವಾಸ್ಯೆಯು ಅಶ್ವೀಜ ಬಹುಳ ಅಮಾವಾಸ್ಯೆಯಷ್ಟೇ ಪ್ರಾಮುಖ್ಯತೆ ಪಡೆದಿದೆ. ದೀಪಾವಳಿ ಅಮಾವಾಸ್ಯೆಯಲ್ಲಿ ಧನಲಕ್ಷ್ಮಿ ಪೂಜೆಗೊಂಡರೆ, ಮಣ್ಣೆತ್ತಿನ ಅಮಾವಾಸ್ಯೆಯಲ್ಲಿ ಧಾನ್ಯಲಕ್ಷ್ಮೀಯನ್ನು ತರುವ ಎತ್ತುಗಳು ಹಾಗೂ ಕೃಷಿಯ ಎಲ್ಲಾ ಉಪಕರಣಗಳು ಪೂಜೆಗೊಳ್ಳುತ್ತವೆ.

ಭೂಮಿ ಮತ್ತು ಎತ್ತುಗಳು ಕೃಷಿಯಲ್ಲಿ ಬಹು ಮುಖ್ಯ ಅಂಗಗಳು. ತಮ್ಮ ಬದುಕಿಗೆ ಕಾರಣೀಭೂತವಾದ ಮಣ್ಣು ಮತ್ತು ಎತ್ತು ಪವಿತ್ರವೆಂದು ರೈತರು ಭಾವಿಸುತ್ತಾರೆ. ಆದ್ದರಿಂದ ಭೂಮಿಯ ಅಂಗವಾದ ಮಣ್ಣಿನಿಂದ ಎತ್ತುಗಳನ್ನು ಮಾಡಿ ಪೂಜಿಸುವ ಪರಿಪಾಠವಿದೆ. ಈ ಹಬ್ಬವನ್ನು ಕರ್ನಾಟಕದ ಕೆಲವು ಕಡೆ ಅಂದರೆ ಬಯಲುಸೀಮೆ, ಉತ್ತರ ಕರ್ನಾಟಕ

## ಆಣಿವಾರ ಆಸ್ಥಾನ

ಈ ಹೆಸರು ತಮಿಳಿನ **"ಆಣಿ"** ಮಾಸದಿಂದ ಬಂದಿದ್ದು, ಸಾಮಾನ್ಯವಾಗಿ ನಾವು ಜುಲೈ ತಿಂಗಳನ್ನು ಹೆಸರಿಸುತ್ತೇವೆ. ಈ ಉತ್ಸವವು **'ಆಣಿ'** ಮಾಸದಲ್ಲಿ ನಡೆಯುವುದರಿಂದ ಇದಕ್ಕೆ **"ಆಣಿವಾರ ಆಸ್ಥಾನ"** ಎಂದು ಕರೆಯುತ್ತಾರೆ. ಅಂದರೆ ವೆಂಕಟೇಶ್ವರ ಸಭೆ ಎಂದರ್ಥ. ಆದಿತ್ಯ ಪುರಾಣದಲ್ಲಿ ಹೇಳಿರುವಂತೆ ಶ್ರೀವೇಂಕಟೇಶ್ವರ ಸ್ವಾಮಿಯನ್ನು "ಮಹಾರಾಜಾಧಿರಾಜಾಯ ನಮಃ" ಎಂದು ವರ್ಣಿಸಿದ್ದಾರೆ. ಅಂದರೆ ಶ್ರೀ ಸ್ವಾಮಿಯು ರಾಜರಿಗೆಲ್ಲಾ ರಾಜ, ಭುವನೈಕ ರಾಜ. ಅಂದರೆ ಮೂಲ್ಲೋಕಗಳನ್ನು ಆಳುವ ಅರಸು ಎಂಬ ಅರ್ಥವಿದೆ. ಆದ್ದರಿಂದ ಈ ಜಗದೊಡೆಯನು ವೈಕುಂಠವನ್ನು ಬಿಟ್ಟು ಭೂ ವೈಕುಂಠವೆಂದೇ ಕರೆಯಲ್ಪಡುವ ತಿರುಮಲೆಯನ್ನು ತನ್ನ ನಿವಾಸವನ್ನಾಗಿ ಮಾಡಿಕೊಂಡು ಜಗತ್ತಿನ ಆಳ್ವಿಕೆಯನ್ನು ಇಲ್ಲಿಂದಲೇ ನಡೆಸುತ್ತಿದ್ದಾನೆ. ಈ ತನ್ನ ಸಭೆಯಲ್ಲಿ ಕೋಟ್ಯಾನು ಕೋಟಿ ಭಕ್ತರ, ಸೇವಕರ ಮೊರೆಯನ್ನು ಆಲಿಸುತ್ತಿದ್ದಾನೆ.

ಆಣಿವಾರ ಆಸ್ಥಾನದಲ್ಲಿ, ವರ್ಷದ ಲೆಕ್ಕವನ್ನೆಲ್ಲಾ ದೇವರ ಮುಂದೆ ಒಪ್ಪಿಸುತ್ತಾರೆ. ನಂತರ ಹೊಸ ಲೆಕ್ಕವನ್ನು ಆರಂಭಿಸುತ್ತಾರೆ. ಅಂದು ತಿರುಮಲೆಯ ದೇವಸ್ಥಾನದಲ್ಲಿ ತಿ.ತಿ.ದೇ ಅಧಿಕಾರಿಗಳು, ಆರ್ಥಿಕ ಶಾಖೆಯ ಪಾತ್ರವನ್ನು ವಹಿಸಿದರೆ ಶ್ರೀದೇವರು ಎಲ್ಲಾ ಲೆಕ್ಕಗಳ ಮುಕ್ತಾಯ ಹಾಗೂ ಆರಂಭದ ಮೇಲುಸ್ತುವಾರಿಯನ್ನುವಹಿಸಿಕೊಳ್ಳುತ್ತಾರೆ ಈ ಉತ್ಸವವು ಬೆಳಗ್ಗೆ ಏಳು ಗಂಟೆಗೆ ನಿರ್ದಿಷ್ಟವಾದ ದಿನದಂದು ಉತ್ಸವಮೂರ್ತಿಗಳಾದ ಶ್ರೀಮಲೆಯಪ್ಪಸ್ವಾಮಿ, ಶ್ರೀದೇವಿ, ಭೂದೇವಿಯರ ಎದಿರು ಪ್ರಾರಂಭವಾಗುತ್ತದೆ.



ಬಂಗಾರದ ಬಾಗಿಲ ಒಳಗೆ ಈ ಉತ್ಸವಮೂರ್ತಿಗಳನ್ನು ಕರೆತರುತ್ತಾರೆ. ಅಂದು ಈ ಉತ್ಸವಮೂರ್ತಿಗಳಿಗೆ ವಿಶೇಷವಾದ ಆಭರಣಗಳೊಂದಿಗೆ (ಮಕರಕಂಠಿಹಾರ) ಅಲಂಕೃತಗೊಂಡ ಲೋಕಗಳನ್ನೆಲ್ಲಾ ಪಾಲಿಸುತ್ತಿರುವ ದ್ಯೋತವಕವಾಗಿ ಸರ್ವಭೂಪಾಲ ವಾಹನದಲ್ಲಿ ಉಪಸ್ಥಿತರಾಗುತ್ತಾರೆ. ಈ ಕಾರ್ಯಕ್ರಮದಲ್ಲಿ ಇಡೀ ವರ್ಷದ ಆಯ - ವ್ಯಯಗಳನ್ನು ದೇವರ ಮುಂದೆ ಒಪ್ಪಿಸಿ, ಹೊಸ ವರುಷದ ಲೆಕ್ಕಗಳನ್ನು ಕೈಗೆತ್ತಿ ಕೊಳ್ಳುತ್ತಾರೆ. ಆದ್ದರಿಂದ "ಆಣಿವಾರ ಆಸ್ಥಾನ" ತಿ.ತಿ.ದೇ ಯ ಹೊಸ ಆರ್ಥಿಕ ವರ್ಷಕ್ಕೆ ನಾಂದಿ ಹಾಡುತ್ತದೆ.

ಜಿಲ್ಲೆಗಳು ಅದರಲ್ಲೂ ಗುಲ್ಬರ್ಗ ಜಿಲ್ಲೆಯಲ್ಲಿ ವಿಶೇಷವಾಗಿ ಆಚರಿಸುವುದು ಕಂಡು ಬರುತ್ತದೆ ಎತ್ತುಗಳು ಧರ್ಮಸ್ವರೂಪಿ. ಅವು ಧರ್ಮವನ್ನು ಬೋಧಿಸುತ್ತವೆ. ಅದರಂತೆ ನಡೆದರೆ ಒಳಿತಾಗುತ್ತದೆ ಎಂಬ ನಂಬಿಕೆ ಗ್ರಾಮೀಣರಲ್ಲಿದೆ.

ಬೇಸಿಗೆಯಲ್ಲಿ ಹೊಲವನ್ನು ಸ್ವಚ್ಛಗೊಳಿಸಿ ಉಳುಮೆ, ಮುಂಗಾರಿನಲ್ಲಿ ಬಿತ್ತನೆ, ಅಷ್ಟೇ ಅಲ್ಲ ಬೆಳೆ ಬೆಳೆದು ಧಾನ್ಯ ಮನೆ ಸೇರುವ ತನಕ ತಮ್ಮ ಜೊತೆಗೆ ಎಲ್ಲವನ್ನು ಪೂಜಿಸಿ ಕೃತಜ್ಞತೆ ಸಲ್ಲಿಸುವ ಸಂಸ್ಕೃತಿ ನಮ್ಮದು. ಕೃಷಿಗೂ ರೈತನಿಗೂ ಸಂಬಂಧಿಸಿದ ಈ ಹಬ್ಬವು ಜಗತ್ತಿನ ಸುಖ ಸಮೃದ್ಧಿಗೆ ನಾಂದಿ ಇದ್ದಂತೆ.

## ಹಬ್ಬಕ್ಕೊಂದು ಕಥೆ

ಈ ಮಣ್ಣೆತ್ತಿನ ಹಬ್ಬಕ್ಕೆ ಸಂಬಂಧಿಸಿದಂತೆ ಒಂದು ರಮ್ಯವಾದ ಜನಪ್ರಿಯ ಕಥೆಯಿದೆ. ಒಮ್ಮೆ ಶಿವನು ಮಾರು ವೇಷದಲ್ಲಿ ಬಂದು ನಿಮ್ಮ ಎತ್ತುಗಳನ್ನು ಕೆಲಕಾಲ ನನಗೆ ನೀಡಿ ಎಂದು ರೈತರನ್ನು ಕೇಳಿದನಂತೆ ಆಗ ಅವರು ಕುಹಕದಿಂದ ನಮ್ಮ ಎತ್ತುಗಳು ಮಣ್ಣಿನವೇ ಎಂದರಂತೆ. ನಂತರ ಕೊಟ್ಟಿಗೆಯಲ್ಲಿ ಹೋಗಿ ನೋಡಿದರೆ ಎತ್ತುಗಳೆಲ್ಲವೂ ಮಣ್ಣಿನವೇ ಆಗಿ ಬಿಟ್ಟಿದ್ದವು. ಅವರೆಲ್ಲಾ ಪಶ್ಚಾತ್ತಾಪದಿಂದ ಶಿವನನ್ನು ಪೂಜಿಸಿ ಪ್ರಾರ್ಥಿಸಿದಾಗ ಆ ಎತ್ತುಗಳೆಲ್ಲ ಮರಳಿ ಜೀವಂತವಾದವಂತೆ.

ಹಬ್ಬದ ದಿನ ಹಿರಿಯರು ಮಕ್ಕಳನ್ನು ಕುಳ್ಳಿರಿಸಿಕೊಂಡು ಈ ಕಥೆಯನ್ನು ಹೇಳುವ ಪರಿಪಾಠವಿದೆ. ಮುಂದೆ ಶ್ರಾವಣ, ಭಾದ್ರಪದದಲ್ಲಿ ವ್ರತಾದಿಗಳನ್ನು ವಿಶೇಷವಾಗಿ ಆಚರಿಸುವುದರಿಂದ ವ್ರತಾದಿಗಳನ್ನು ಹೊತ್ತು ತರುವ ಹಬ್ಬವೆಂಬ ಪ್ರತೀತಿಯೂ ಇದೆ. ಈ ಹಬ್ಬದ ನಂತರ ಆಷಾಡದಲ್ಲಿ ಹಬ್ಬಗಳು ಯಾವುದೂ ಬರದೆ ರೈತರು ಕೃಷಿ ಚಟುವಟಿಕೆಗಳಲ್ಲಿ ಸಂಭ್ರಮದಿಂದ ಸಂಪೂರ್ಣವಾಗಿ ತೊಡಗುತ್ತಾರೆ. ಈ ಸಂದರ್ಭದಲ್ಲಿ ಮೈಮರೆತರೆ ಜೀವನಕ್ಕೆ ಕಷ್ಟವೆಂಬ ಎಚ್ಚರಿಕೆ ಈ ಆಚರಣೆಯಲ್ಲಿದೆ.

## ಬೆಸುಗೆಯ ಕೊಂಡಿ

ಮಣ್ಣೆತ್ತಿನ ಅಮಾವಾಸ್ಯೆ ಪೂಜೆಗಾಗಿ ಕುಂಬಾರ ಅಥವಾ ವಿಶ್ವಕರ್ಮ ಜನಾಂಗದವರು ಒಂದು ದಿನ ಮುಂಚಿತವಾಗಿ ಮಣ್ಣಿನ ಎತ್ತುಗಳನ್ನು ಮಾಡಿ ಮರುದಿನ ಮುಂಜಾನೆ ಮನೆ

ಮನೆಗೆ ತಂದುಕೊಟ್ಟು ಅವರಿಂದ ವೀಳ್ಯದೊಂದಿಗೆ ಅಕ್ಕಿ ತೆಂಗಿನ ಕಾಯಿ ಮತ್ತು ಕಾಣಿಕೆ ಪಡೆಯುತ್ತಾರೆ. ನಗರ ಪ್ರದೇಶದಲ್ಲಿ ಈ ಹಬ್ಬ ಇಂದು ಮರೆಯಾಗಿದ್ದರೂ ಗ್ರಾಮಾಂತರ ಪ್ರದೇಶಗಳಲ್ಲಿ ಇಂದಿಗೂ ರೂಢಿಯಲ್ಲಿದ್ದು ಸಾಂಪ್ರದಾಯಿಕ ಉದ್ಯೋಗಿಗಳಿಗೆ ಆಧಾರವೂ ಆಗಿದೆ.

## ವಿಭಿನ್ನ ಸಂಪ್ರದಾಯ

ಮಣ್ಣಿನ ಜೋಡೆತ್ತುಗಳನ್ನು ಪೂಜಿಸಿ ಚಕ್ಕುಲಿ, ಕೋಡು ಬಳೆ, ಅಂಬೋಡೆ, ಪಾಯಸ ನೈವೇದ್ಯ ಮಾಡಿ ನಂತರ ಊಟ ಮಾಡುವ ಆಚರಣೆಯಿದೆ. ಸಂಜೆ ಅಥವಾ ಮಾರನೆಯದಿನ ಬೆಳಿಗ್ಗೆ ಮಣ್ಣೆತ್ತುಗಳನ್ನು ನೀರಿನಲ್ಲಿ ಬಿಡುವುದು, ಹೊಲದಲ್ಲಿ ಇಡುವುದು ಅಥವಾ ಹೊಲದಲ್ಲಿ ಹೂಳುವುದು ಹೀಗೆ ಒಂದೊಂದು ಕಡೆ ಒಂದೊಂದು ಸಂಪ್ರದಾಯವಿದೆ. ಈ ಬಸವಣ್ಣಗಳು ಹುಲುಸಾದ ಬೆಳೆ ಬರುವಂತೆ ಮಾಡುತ್ತವೆ ಎಂಬ ನಂಬಿಕೆಯಿದೆ.

ಅಂದು ಮನೆಯಲ್ಲಿರುವ ಎತ್ತುಗಳಿಗೂ ದನಕರುಗಳಿಗೂ ಮೈತೊಳೆದು ಕೊರಳಿಗೆ ಗಂಟೆ ಕಟ್ಟಿ ನಾನಾ ರೀತಿಯ ಅಲಂಕಾರ ಮಾಡಿ ಹೂವುಗಳಿಂದ ಅವುಗಳನ್ನು ಅಲಂಕರಿಸಿ, ಪೂಜಿಸಿ, ವಿವಿಧ ಧಾನ್ಯಗಳ ಉಸಳಿ ಮತ್ತು ದೋಸೆಗಳನ್ನು ತಿನ್ನಿಸುತ್ತಾರೆ. ಉದ್ಯೋಗ ನಿಮಿತ್ತ ಹೊಲಮನೆಯಿಂದ ದೂರವಿರುವವರು ಹಾಗೂ ದನಕರುಗಳಿಲ್ಲದವರು ಮಣ್ಣೆತ್ತುಗಳು ದೊರಕದಿದ್ದರೆ ತಾವೇ ಸ್ವತಃ ಸಿದ್ಧ ಮಾಡಿ ಪೂಜಿಸಿ, ಹೋಳಿಗೆ ಸ್ವೀಕರಣೆ ಅಥವಾ ಬೇರೆ ಬೇರೆ ಸಿಹಿ ಅಡುಗೆ ನೈವೇದ್ಯ ಮಾಡಿ ಸಂಜೆ ಹರಿಯುವ ನೀರಿನಲ್ಲಿ ವಿಸರ್ಜಿಸುತ್ತಾರೆ. ಕೆಲವರು ವಿಸರ್ಜಿಸದೆ ಅದನ್ನು ತುಳಸಿ ಕಟ್ಟೆಯಲ್ಲಿಡುತ್ತಾರೆ. ಇನ್ನು ಕೆಲವರು ಮಕ್ಕಳಿಗೆ ಆಡಲು ಕೊಡುತ್ತಾರೆ.

ಕೆಲವು ಊರುಗಳಲ್ಲಿ ಸಂಜೆ ವೇಳೆಯಲ್ಲಿ ಮಕ್ಕಳು ಎತ್ತುಗಳಂತೆ ವೇಷಧರಿಸಿ ಕೊರಳಿಗೆ ಗಂಟೆ ಕಟ್ಟಿಕೊಂಡು ಮನೆ ಮನೆಗೆ ಹೋಗಿ ಬೇಳೆಕಾಳುಗಳನ್ನು ಪಡೆಯುತ್ತಾರೆ. ಪೂಜಿಸಿದ ಮಣ್ಣೆತ್ತುಗಳನ್ನು ಜನರು ಆ ಮಕ್ಕಳ ಕೈಗೆ ಕೊಡುತ್ತಾರೆ. ಸಂಗ್ರಹವಾದ ಬೇಳೆಕಾಳುಗಳನ್ನು ಮಾರಿ ತನಗೆ ಬೇಕಾದ ತಿಂಡಿ ತಿನಿಸುಗಳನ್ನು ಕೊಂಡು ತಿನ್ನುತ್ತಾರೆ. ಮಣ್ಣೆತ್ತುಗಳೆಲ್ಲವನ್ನೂ ಸಂಗ್ರಹಿಸಿ ಕೆರೆಯಲ್ಲಿ ವಿಸರ್ಜಿಸುತ್ತಾರೆ. ಜ್ಯೇಷ್ಠ ಆಷಾಡಗಳಲ್ಲಿ ಮಳೆ ಸುರಿದು ಧರೆ ನೆನೆದು ಆದ್ರವಾಗಿ ಹೊಸ ರೂಪವನ್ನು ಪಡೆದಿರುತ್ತದೆ. ಭೂಮಿಗೆ ಜೀವವನ್ನುಣಿಸಲು, ಧಾನ್ಯಗಳನ್ನು ಬಿತ್ತಲು ಇದು ಸಕಾಲವಾಗಿದೆ. ಇದು ಸಸ್ಯ ಸಮೃದ್ಧಿಯ ಕಾಲವಷ್ಟೇ ಆಗಿರದೆ ಸಂತಾನ ಸಮೃದ್ಧಿಯ ಕಾಲವೂ ಆಗಿದೆ.

ಸಮಗ್ರವಾದ ಸಂಪೂರ್ಣ ಸೃಷ್ಟಿಯ ಸಮೃದ್ಧಿಯ ಪ್ರತಿರೂಪವೇ ಮಣ್ಣೆತ್ತಿನ ಅಮಾವಾಸ್ಯೆ. ಸೃಷ್ಟಿಗೆ ಪ್ರಧಾನವಾದ ಈ ಹಬ್ಬವನ್ನು ಆಚರಿಸುವುದರಿಂದ ಕೃಷಿಯ ಫಲ ಸಮೃದ್ಧವಾಗಿ, ಅದ್ಭುತ ಅಭಿವೃದ್ಧಿಯಾಗಿ ವರ್ಷವಿಡೀ ಸಂತೋಷ ದೊರಕುತ್ತದೆ ಎಂಬ ಪ್ರತೀತಿಯಿದೆ. ಮೂಕ ಬಸವಣ್ಣಗಳು ರೈತರ ಜೀವನದಲ್ಲಿ ವಹಿಸುವ ಪಾತ್ರದ ಹೆಗ್ಗಳಿಕೆಯನ್ನು ಈ ಹಬ್ಬವು ಸಾರುತ್ತದೆ.

## ತಿರುಮಲೆಯಲ್ಲಿ ನೋಡುವ ಪ್ರದೇಶಗಳು

### ಸ್ವಾಮಿಪುಷ್ಕರಿಣಿ :

ಸ್ವಾಮಿಪುಷ್ಕರಿಣಿ ತಿರುಮಲೆಯಲ್ಲಿ ಆಲಯದ ಪಕ್ಕದಲ್ಲಿದೆ. ಭಕ್ತರು ಆಲಯದಲ್ಲಿ ಪ್ರವೇಶಿಸುವ ಮೊದಲು ಈ ಪುಷ್ಕರಿಣಿಯಲ್ಲಿ ಸ್ನಾನ ಮಾಡು ತ್ತಾರೆ. ಇಲ್ಲಿ ಸ್ನಾನ ಮಾಡಿದರೆ ದೇಹವೇ ಅಲ್ಲದೇ ಮನಸ್ಸು ಕೂಡಾ ಪರಿಶುದ್ಧ ವಾಗುತ್ತದೆ.

### ಆಕಾಶಗಂಗ :

ಈ ತೀರ್ಥ ಆಲಯದಿಂದ ಉತ್ತರಕ್ಕೆ 5 ಕಿ.ಮೀ ದೂರದಲ್ಲಿದೆ.

### ಪಾಪವಿನಾಶನ :

ಈ ತೀರ್ಥ ಗುಡಿಗೆ ಉತ್ತರಕ್ಕೆ 5 ಕಿ.ಮೀ. ದೂರದಲ್ಲಿದೆ.

### ವೈಕುಂಠತೀರ್ಥ :

ಈ ತೀರ್ಥ ಗುಡಿಗೆ ಉತ್ತರಕ್ಕೆ 5 ಕಿ.ಮೀ. ದೂರದಲ್ಲಿದೆ.

### ತುಂಬುರುತೀರ್ಥ :

ಈ ತೀರ್ಥ ಗುಡಿಗೆ ಉತ್ತರಕ್ಕೆ 16 ಕಿ.ಮೀ. ದೂರದಲ್ಲಿದೆ.

### ಶಿಲಾತೋರಣ :

ಭೌಗೋಳಿಕ ಪರಿಣಾಮದಿಂದ ಸಹಜಸಿದ್ಧವಾಗಿರುವ ಶಿಲಾ ತೋರಣ.ಗುಡಿಗೆ ಉತ್ತರಕ್ಕೆ ಒಂದು ಕಿಲೋ ಮೀಟರು ದೂರದಲ್ಲಿದೆ.

### ತಿ.ತಿ.ದೇ ಉದ್ಯಾನವನಗಳು :

ದೇವಸ್ಥಾನದವರು ತಿರುಮಲೆಯಲ್ಲಿ ಶೋಭಾಯಮಾನವಾದ ಉದ್ಯಾನವನಗಳನ್ನು ಬೆಳಸುತ್ತಿದ್ದಾರೆ. ಇಲ್ಲಿ ಅಪುರೂಪವಾದ ಗಿಡಗಳು, ವೃಕ್ಷಗಳು ಅಭಿವೃದ್ಧಿಯಾಗುತ್ತಿವೆ.

### ಆಸ್ಥಾನಮಂಡಪ :

ಹಿಂದೂ ಧರ್ಮ ಪ್ರಚಾರಪರಿಷತ್ತು ಅವರ ಆಧ್ವರ್ಯದಲ್ಲಿ ನಿರ್ವಹಿಸುವ ಧಾರ್ಮಿಕ ಉಪನ್ಯಾಸಗಳು, ಹರಿಕಥೆ, ಸಂಗೀತ, ಭಜನೆ ಕಾರ್ಯಕ್ರಮಗಳಿಗೆ ವೇದಿಕೆಯಾಗಿ ಉಪಯೋಗಿಸಲ್ಪಡುತ್ತಿರುವ ಸಭಾ ಮಂಡಪ.

### ಶ್ರೀ ವೆಂಕಟೇಶ್ವರ ಧ್ಯಾನಮಂದಿರ (ಎಸ್.ವಿ.ಮ್ಯೂಜಿಯಂ):

ಅಪುರೂಪವಾದ ಪುರಾವಸ್ತು ಪ್ರದರ್ಶನ, ಚಿತ್ರ, ಶಿಲ್ಪಕಳಾ ರೂಪ ಗಳಿಗೆ, ಧ್ಯಾನಕ್ಕೆ ಕೇಂದ್ರವಾಗಿ ಭಕ್ತರನ್ನು ಆಕರ್ಷಿಸುತ್ತಿದೆ. ಭಕ್ತರು ಭಗ ವಂತನನ್ನು ಧ್ಯಾನಿಸುತ್ತಾ ಮಾನಸಿಕ ಒತ್ತಡವನ್ನು ಕಳೆದುಕೊಳ್ಳಬಹುದು.

(ಹಿಂದಿನ ಸಂಚಿಕೆಯಿಂದ)

# ವೇದಪುರಾಣಗಳಲ್ಲಿ ಪರಿಸರ ಸಂರಕ್ಷಣೆ

- ಡಾ॥ ಗುರುರಾಜ ಪೋಶೆಟ್ಟಿಹಳ್ಳಿ,
97393 69621

ಆದ್ದರಿಂದ ವೇದಗಳ ಸಂಸ್ಕೃತಿ ದ್ವಿಮುಖವಾದದ್ದು ಒಂದು ಸಾಮಾಜಿಕವಾಗಿದ್ದು ಅಂದಿನ ಜಾನಪದ ಜನ ಜೀವನ ವನ್ನು ಪ್ರತಿಫಲಿಸಿದರೆ ಹಾಗೂ ಅವರಿಗಿರುವ ಸುತ್ತಮುತ್ತಲಿನ ಪರಿಸರ, ಗಿಡಮರಗಳು ಪ್ರಾಣಿಗಳನ್ನು ತಿಳಿಸಿದರೆ ಮತ್ತೊಂದು ವೈಜ್ಞಾನಿಕ. ಅಂದು ಅವರಿಗೆ ತಿಳಿದಿದ್ದ ವೈಜ್ಞಾನಿಕ ಅಂಶಗಳನ್ನು ಅವರು ಬರೆದಿಟ್ಟಿದ್ದಾರೆ. ಆ ಪೈಕಿ ಆಯುರ್ವೇದವೂ ಒಂದು. ವೇದವೃಕ್ಷಗಳಲ್ಲಿ ಇಂತಹ ಸಾಮಾಜಿಕ ಹಾಗೂ ವೈಜ್ಞಾನಿಕ ಅಂಶಗಳೆರಡನ್ನೂ ಪರಿಗಣಿಸಲಾಗಿದೆ.

ಋಗ್ವೇದ ಕಾಲದ ಋಷಿಮುನಿಗಳಿಗೆ ಅಂದಿನ ಸಸ್ಯ ವರ್ಗದ ಬಗ್ಗೆ ಹಾಗೂ ತಮ್ಮ ಪರಿಸರದ ಬಗ್ಗೆ ಸ್ಪಷ್ಟವಾದ ತಿಳುವಳಿಕೆ ಇತ್ತು. ಅಶ್ವತ್ಥ, ಔದುಂಬರ, ಮುತ್ತುಗ, ಶಮಿ ಮುಂತಾದ ವೃಕ್ಷಗಳನ್ನು ದೈವೀಭಾವನೆಯಿಂದ ಪೂಜಿಸುವ ಸಂಪ್ರದಾಯ ಬಹುಶಃ ಋಗ್ವೇದದ ಕಾಲದಿಂದಲೇ ಬಂದಿರಬಹುದು ಅಥವಾ ಇದು ಇನ್ನೂ ಪ್ರಾಚೀನ ಸಂಪ್ರದಾಯವಾಗಿರಬಹುದು.

ದೇವ ವೈದ್ಯರುಗಳಾದ ಅಶ್ವಿನಿದೇವತೆಗಳ ಬಗ್ಗೆ ವಿವರಗಳು ದೊರಕಲು ಪ್ರಾರಂಭವಾಗುವುದೇ ಋಗ್ವೇದದಿಂದ, ಮುದಿತನ ಹಾಗೂ ಜೀರ್ಣಶರೀರಗಳಿದ್ದ ಚ್ಯವನನಿಗೆ ಮುಪ್ಪನ್ನು ಜಯಿಸುವಂತೆ ಮಾಡಿ ದೀರ್ಘಾಯುವಾಗುವಂತೆ ಮಾಡಿದ ಹಿರಿಮೆ ಅಶ್ವಿನಿದೇವತೆಗಳಿದ್ದು. ಮುಂದೆ ಆಯುರ್ವೇದ ಸ್ವತಂತ್ರವಾಗಿ ಬೆಳೆಯುವುದಕ್ಕೆ ಇದು ನಾಂದಿಯಾಗಿರಬಹುದೆಂದು ಕೆಲವರ ಅಭಿಪ್ರಾಯ. ಅಥರ್ವಣವೇದಕ್ಕೆ ಆಯುರ್ವೇದ ಉಪದೇಶವಾಗಿದೆ.

"ಯುವಂ ಚ್ಯವನಂ ಜರಸ್ತೋಮು ಮುಕ್ತಂ" (ಋ.6.17.5) ಚ್ಯವನನ ಜೀರ್ಣದೇಹಕ್ಕೆ ಯೌವನವನ್ನು ತರಿಸಿಕೊಟ್ಟದ್ದು ಆಯುರ್ವೇದದ ಒಂದು ಚಮತ್ಕಾರ. ಇಂದಿಗೂ ಕೂಡ ಕೇರಳದ ಆಯುರ್ವೇದ ಔಷಧಾಲಯಗಳು ಕಾಯಕಲ್ಪ ಚಿಕಿತ್ಸೆಗಳನ್ನು ನೀಡುತ್ತಿವೆ.

"ಉದ್ ವಂದನಂ ಐರಯತಂ ಸ್ವದೃಶೇ" (ಋ. 1.112.5)

ದೇವತೆಗಳಾದ ಇಂದ್ರ, ರುದ್ರ ಹಾಗೂ ವರುಣರಿಗೂ ರೋಗನಿವಾರಣಾಶಕ್ತಿ ಇತ್ತು, ರುದ್ರನಲ್ಲಿ ಸಾವಿರಾರು ಔಷಧ ಸಸ್ಯಗಳಿವೆ.'ಸಹಸ್ರಂತೇ ಸ್ವಪಿವಾತಭೇಷಜಾ' (ಋ.7.46.3.) ಇಲ್ಲಿ ಯಜ್ಞಗಳು, ಹೋಮಗಳಿಗೆ ಉಪಯೋಗಿಸಲಾಗುವ ಅನೇಕ ಗಿಡಮರಗಳ ಸಮಿತ್ತುಗಳು ಹಾಗೂ ಘೃತ(ತುಪ್ಪ), ತಿಲ (ಎಳ್ಳು), ದರ್ಬೆ-ಇತ್ಯಾದಿಗಳಲ್ಲೂ ರೋಗನಾಶಕ ಶಕ್ತಿ ಇರುವುದೆಂದು ನಂಬಲಾಗಿದೆ.

ಪ್ರಕೃತಿಯ ಅವಿಭಾಜ್ಯ ಅಂಗಗಳಾದ ನದಿ, ಪರ್ವತಗಳಂತೆಯೇ ಋಗ್ವೇದದ ಚಿಂತನೆಯ ಪರಿಧಿಯಲ್ಲಿ ಮರಗಳೂ ದೈವಿಕತೆ ಪಡೆದಿವೆ.

ದೇವರ ಸರ್ವವ್ಯಾಪಕತೆ ಹಾಗೂ ಸರ್ವಾಂತರ್ಯಾಮಕ ಶಕ್ತಿಯನ್ನು ಋಗ್ವೇದ ಸಾಕ್ಷಾತ್ಕರಿಸಿಕೊಂಡಿದೆ. ಪ್ರಕೃತಿ, ವೃಕ್ಷಗಳು ಹಾಗೂ ಪಕ್ಷಿಗಳಲ್ಲೂ ಜೀವ ಹಾಗೂ ದೈವಿಕತೆಯನ್ನು ಕಾಣಲಾಗಿದೆ.ಖದಿರ,ಪಲಾಶ,ಶಮಿ,ಶಾಲ್ಮಲಿ, ಔದುಂಬರ, ಶಿಂಶುಪಾ ಮೊದಲಾದ ಅನೇಕ ವೃಕ್ಷಗಳ ಪ್ರಸ್ತಾಪ ಋಗ್ವೇದದಲ್ಲಿದ್ದರೂ ಅಶ್ವತ್ಥ ಅಥವಾ ಅರಳೀಮರ ಹೆಚ್ಚಿನ ಪ್ರಾಮುಖ್ಯ ಪಡೆದಿದೆ. ಈ ಮರದಿಂದಲೇ ಸೋಮರಸದ ಪಾತ್ರೆಗಳನ್ನು ತಯಾರಿಸುತ್ತಿದ್ದರು.ಇದರ ಒಣಮರದ ತುಂಡನ್ನು (ಅರಣಿಕಗಳು) ಕಡೆಯುವುದರ ಮೂಲಕ ಪವಿತ್ರಾಗ್ನಿಯನ್ನು ಉತ್ಪತ್ತಿ ಮಾಡುತ್ತಿದ್ದರು.ಇಂದಿಗೂ ಕೂಡ ಅರಳೀಮರದ ಸಮಿತ್ತುಗಳನ್ನು ಯಜ್ಞಯಾಗಾದಿಗಳಲ್ಲಿ, ಹೋಮಗಳಲ್ಲಿ ಉಪಯೋಗಿಸುವುದನ್ನು ನಾವು ಕಾಣಬಹುದು.ಇಷ್ಟಲ್ಲದೆ ಕಬ್ಬು,ಬಾರ್ಲಿ,ದರ್ಬೆ,ಎಳ್ಳು,ಅರಣ್ಯಗಳಿಂದ ಬಗೆಬಗೆಯ ಹಣ್ಣುಗಳು, ಸುಂದರ ವಾದ ಹೂಬಿಡುವ ಬಳ್ಳಿಗಳು ಇವುಗಳ ಬಗ್ಗೆ ಋಗ್ವೇದದಲ್ಲಿ ಪ್ರಸ್ತಾಪಿಸಲಾಗಿದೆ. ಈ ವೇದದ 'ಅರಣ್ಯಾನಿ' ಮಂಡಲದಲ್ಲಿ ಅರಣ್ಯಗಳ ಸುಂದರ ವರ್ಣನೆ ಇದೆ.

## ಹೋಮಹವನಗಳು ಮತಿತ್ತರ ಸಂಸ್ಕಾರಗಳಲ್ಲಿ ಉಪಯೋಗಿ ಸಲಾಗುವ ವೃಕ್ಷಗಳು

ವೇದಾಂತ ದರ್ಶನದ ಉಗಮಸ್ಥಾನ ಋಗ್ವೇದವಾಗಿ ರುವಂತೆಯೇ ಪ್ರಕೃತಿ ಪೂಜೆಯ ಧರ್ಮಕ್ಕೂ, ಋಗ್ವೇದಿಯ ಸಮಾಜವೇ ಕಾರಣ. ಪರಿಸರದ ಬಗ್ಗೆ ಇವರಿಗಿದ್ದ ಭಾವುಕತೆ, ಮರಗಳ ಬಗ್ಗೆ ಇದ್ದ ಪವಿತ್ರಭಾವನೆ- ಇವೆಲ್ಲಾ ಪರಿಸರ ಹಾಗೂ ವೃಕ್ಷ ಜಾನಪದದ ಅಡಿಗಲ್ಲುಗಳು. ಸಕಲ ಚರಾಚರ ವಸ್ತುಗಳ ಲೆಲ್ಲಾ ಭಗವಂತ ಅಂತರ್ಯಾಮಿಯಾಗಿ ಇದ್ದಾನೆಂಬುದು ಇಲ್ಲಿನ ಸಂದೇಶ. ಇವು ಜಾನಪದೀಯ ಪ್ರಕಾರ ಪಿತೃಲೋಕದಲ್ಲೂ ಅರಳಿ ಮರವಿರುತ್ತದೆ. ಪಲಾಶದ ಕೆಳಗೆ ಯಮ ಇತರ ದೇವತೆಗಳೊಡನೆ ಸೋಮಪಾನ ಮಾಡುತ್ತಿರುತ್ತಾನೆ ಎಂಬುದು. ಜೀವ ಅಲ್ಲಿಗೆ ಹೋಗಿ ಸ್ವಚ್ಛಂದವಾಗಿ ಸುಖವನ್ನನುಭವಿಸುತ್ತಾನೆ (ಋ.10.14) ಎಂಬುದು ಪಿತೃಲೋಕದಲ್ಲಿ ಅರಳಿಮರವಿರುವ ಕಲ್ಪನೆ, ವೃಕ್ಷಗಳ ಬಗ್ಗೆ ಪವಿತ್ರ ಭಾವನೆಗಳಿಗೆ ಕಾರಣವಾಗಿದೆ. ದೇವೇಂದ್ರನ ನಂದನ ವನದಲ್ಲೂ ವೃಕ್ಷಗಳಿವೆ.

ಯಜುರ್ವೇದದಲ್ಲಿ ಪ್ರಸ್ತಾಪಿಸಲಾಗಿರುವ ಸಸ್ಯಗಳನ್ನು ಅವರು ವೈದಿಕ ಸಂಸ್ಕಾರಗಳಲ್ಲಿ ಉಪಯೋಗಿಸುವ ಸಸ್ಯಗಳು, ಮಾಂತ್ರಿಕ ಅಥವಾ ಮಾಯ ಮಂತ್ರ ವಿಧಾನಗಳಲ್ಲಿ ಪ್ರಾಮುಖ್ಯವುಳ್ಳ ಸಸ್ಯಗಳು ಹಾಗೂ ಔಷಧಿಯಲ್ಲಿ ಪ್ರಾಮುಖ್ಯವುಳ್ಳ ಸಸ್ಯಗಳು ಎಂದು ಮೂರು ವರ್ಗಗಳಲ್ಲಿ ಚರ್ಚಿಸಿದ್ದಾರೆ. ಇವುಗಳ ಪೈಕಿ ವೃಕ್ಷಗಳ ಪಟ್ಟಿ ಈ ಕೆಳಗಿನಂತಿದೆ.



1) ಹೋಮಹವನಗಳು ಮತ್ತಿತರ ಸಂಸ್ಕಾರಗಳಲ್ಲಿ ಉಪಯೋಗಿ ಸಲಾಗುವ ವೃಕ್ಷಗಳು

ಆ ಕಾಲದ ಜಾನಪದ ನಂಬಿಕೆಗಳ ಪ್ರಕಾರ ಕೆಲವು ಮರಗಳು ಮಾಂತ್ರಿಕ ವಿದ್ಯೆಯಲ್ಲಿ ಪ್ರಾಮುಖ್ಯತೆ ಪಡೆದಿವೆ. ಅರಳಿಮರ, ಅತ್ತಿ, ಮುತ್ತುಗ, ಕಗ್ಗಲಿ, ಆಲ, ಕರಿಬಸುರಿ, ಹಿಪ್ಪೆ, ಹೊಳೆಮತ್ತಿ (ಅರ್ಜುನ) ನುರ್ವಲ, ತಾರೆ, ಬನ್ನಿ, ಕೆಂಪು ಬೂರುಗ ಮುಂತಾದವು.

ಆಗಿನ ಕಾಲದಲ್ಲಿ ಪವಿತ್ರಕಾರ್ಯಗಳಿಗೆ ಉಪಯೋಗಿಸುವ ಕಾರ್ಯಗಳಿಗೆಲ್ಲಾ ಮರದ ಪಾತ್ರೆಗಳನ್ನೇ ಉಪಯೋಗಿಸುತ್ತಿದ್ದರು. ಇದು ಇಂದಿಗೂ ರೂಢಿಯಲ್ಲಿದೆ. ಸ್ರುಕ್, ಸ್ರುವಗಳನ್ನು ಅತ್ತಿ ಮರ ಹಾಗೂ ಮುತ್ತಗದಿಂದಲೂ, ಜುಹುವನ್ನು ಮುತ್ತುಗದಿಂದಲೂ, ಉಪಭೃತ್ ಅನ್ನು ಅರಳಿಮರದಿಂದಲೂ ಧ್ರುವವನ್ನು ವಿಕಂತಕದಿಂದಲೂ ತಯಾರಿಸುತ್ತಿದ್ದರು.

ಹಾಲನ್ನು ಇಟ್ಟುಕೊಂಡಿರಲು ಅತ್ತಿಮರದ ಚೌಕಾಕಾರದ ಪಾತ್ರೆಯನ್ನು ಇಟ್ಟುಕೊಂಡಿರುತ್ತಿದ್ದರು. ಯೂಪಸ್ತಂಭಗಳಿಗೆ ಆಹುತಿ ಕೊಡುವ ಪ್ರಾಣಿಗಳನ್ನು ಕಟ್ಟಿ ಹಾಕುತ್ತಿದ್ದರು. ಅಶ್ವಮೇಧಯಾಗ ಮಾಡುವಾಗ 21 ಯೂಪಗಳನ್ನು ನಿಲ್ಲಿಸಲಾಗುತ್ತಿತ್ತು. ಇವುಗಳ ಪೈಕಿ ಆರು ಬಿಲ್ವದ್ದು, ಆರು ಮುತ್ತುಗದವೂ, ಆರು ಖದಿರವೂ, ಎರಡು ದೇವದಾರಿನವೂ ಹಾಗೂ ಒಂದು ರಜ್ಜುದಾಳದ್ದಾಗಿರುತ್ತಿದ್ದವು.

ಕಾಮ್ಯಯಾಗಗಳಲ್ಲಿ ಮಾತ್ರ ಅತ್ತಿಮರದ ಯೂಪಗಳೇ ಸಾಮಾನ್ಯವಾಗಿ ಉಪಯೋಗಗೊಳ್ಳುತ್ತಿದ್ದವು. ಭೂಮಿಯನ್ನು ಅಗೆಯುವ ಪವಿತ್ರ ಅತ್ತಿಮರ, ಖದಿರ, ಮುತ್ತುಗ, ವಿಕಂತಕ ಮರಗಳಿಂದ ತಯಾರಿಸುತ್ತಿದ್ದರು.

ಸೋಮಯಜ್ಞದಲ್ಲಿ ಔದುಂಬರದ (ಅತ್ತಿ) ಕಡ್ಡಿಗಳನ್ನು ಕೃತ ಮತ್ತು ಮಿತ್ರ ವರುಣ ಆಚಾರ್ಯರುಗಳು ಹಿಡಿದುಕೊಂಡಿರುತ್ತಿದ್ದರು. ಹೋಮದ ಪ್ರಾರಂಭ ಪವಿತ್ರಾಗ್ನಿಯನ್ನು ಅರಳಿಮರದಿಂದ ಮಾಡಿದ ಅರಣಿಗಳನ್ನು ಕಡೆದು ಉತ್ಪತ್ತಿ ಮಾಡುವುದರ ಮೂಲಕ ಆಗುತ್ತಿತ್ತು.

ಸುರಾ ಹಾಗೂ ಸೋಮರಸಳನ್ನಿಡುವ ಪಾತ್ರೆಗಳನ್ನು ಮರಗಳಿಂದಲೇ ತಯಾರಿಸಿಕೊಳ್ಳು ತ್ತಿದ್ದರು ಅರಳಿ, ಅತ್ತಿ, ಕಗ್ಗಲಿ, ಮುತ್ತುಗ ಹಾಗೂ ವಿಕಂತಕ ಮರಗಳಿಂದ ಇವನ್ನು ರಕ್ಷಿಸಿಡುವ ಪಾತ್ರೆಗಳು ತಯಾರಾಗುತ್ತಿದ್ದುವು.

ಮುತ್ತುಗ ಹಾಗೂ ಕೆಂಪುಬೂರುಗದ ಮರ ಗಳಿಂದ ತಯಾರಿಸಿದ ರಥದಲ್ಲಿ ಮದುಮಗಳನ್ನು ಕರೆದುಕೊಂಡು ಹೋಗುವುದರಿಂದ ಜನಗಳ ಕಣ್ಣುಗಳಿಂದ ದೃಷ್ಟಿಯಾಗುವುದನ್ನು ತಡೆಯ ಬಹುದೆಂಬುದು ಜಾನಪದ ನಂಬಿಕೆಯಾಗಿತ್ತು (ತೈತರೀಯ ಏಕಾಗ್ನಿಕಾಂಡ 1.16-17) ಯಜ್ಞ ಯಾಗಾದಿಗಳಲ್ಲಾಗಲೀ, ಅಗ್ನಿಕಾರ್ಯಗಳ ಲ್ಲಾಗಲೀ, ಔಷಧದಲ್ಲಾಗಲೀ ಇಲ್ಲವೇ ಮಾಂತ್ರಿಕ ಶಕ್ತಿ ಹಾಗೂ ಜನಪದ ವೈದ್ಯ ಹಾಗೂ ವೃಕ್ಷಗಳ ಆಶ್ರಯ ತಾಣಗಳು ಮಾನವ ಜೀವನದ ಅವಿ ಭಾಜ್ಯ ಅಂಶಗಳಾಗಿದ್ದವು. ಹುಟ್ಟಿನಿಂದ ಸಾವಿನ ವರೆಗೆ ಮರಗಳು, ಅವುಗಳ ಭಾಗಗಳು, ವೇದಗಳ ಕಾಲದಿಂದ ಇಲ್ಲಿಯವರೆಗೂ ತಮ್ಮ ಜನಪದ ಸಂಸ್ಕೃತಿಯ ಒಂದು ಪ್ರಮುಖ ಅಂಗವಾಗಿದೆ. ಫಲಪುಷ್ಪಗಳು,ಸಮಿತ್ತುಗಳು (ಬಗೆಬಗೆಯ ಔಷಧ ಸಸ್ಯಗಳ ಒಣ ಕಡ್ಡಿಗಳು) ಮತ್ತಿತರ ಸಲಕರಣೆ ಗಳಯ ಹಿಂದೂ ಸಂಸ್ಕಾರಗಳಿಗೆ ಬಹು ಅಗತ್ಯ (ಸಂಸ್ಕಾರಗಳು: ಗರ್ಭದಾನ,ಪುಂಸವನ, ಸೀಮ ತೋನ್ನತಯನ,ಜಾತಕರ್ಮ,ನಾಮಕರಣ, ನಿಷ್ಕ್ರಮಣ ಅನ್ನಪ್ರಾಶನ, ಚೂಡಾಕರ್ಮ, ಉಪ ನಯನ, ಚತುರ್ವೇದವ್ರತ, ಕೇಶಾಂತ, ಸಮಾ ವರ್ತನ ಮತ್ತು ವಿವಾಹ ಇತ್ಯಾದಿ).

ಮೇಲಿನ ಸಂಸ್ಕಾರಗಳು ನೆರವೇರ ಬೇಕಾದ ಸಸ್ಯಸಾಮಾಗ್ರಿಗಳ ಅವಶ್ಯಕತೆ ಇದ್ದೇ ಇರುತ್ತದೆ. ಈ ಪೈಕಿ ವೃಕ್ಷಗಳ ಸ್ಥಾನ ಬಹು ಮಹತ್ವ ಪೂರ್ಣವಾದದ್ದು.

ಜಾನಪದದ ಉಗಮವಾದದ್ದು ನಮ್ಮ ಕಾಡುಗಳಲ್ಲಿ, ಗಿಡಮರಗಳ ಸುತ್ತಮುತ್ತ, ಒಂದು ರೀತಿಯಲ್ಲಿ ನಮ್ಮ ಜಾನಪದದಲ್ಲಿ ಸಸ್ಯ ಅಥವಾ ವೃಕ್ಷ ಜಾನಪದವೇ ಪ್ರಮುಖ.ಮರದ ಪೋಟರೆಗಳು, ಗೆಡ್ಡೆಗೆಣಸುಗಳು, ಫಲಪುಷ್ಪಗಳು, ಮೂಲಿಕೆಗಳು,ವೃಕ್ಷಾರಾಧನೆ, ಸಸ್ಯಗಳನ್ನು ಜೀವಿಗಳಂತೆ ನೋಡುವ ವೇದಗಳ ಜನಪದ ನಂಬಿಕೆ, ಅವರ ಕೃಷಿಕ ಜೀವನ, ಜಾನಪದ, ಕೃಷಿ ಅವಲಂಬಿತ ಹಬ್ಬ ಹರಿದಿನಗಳು ಅಂದಿನಿಂದ ಇಂದಿನವರೆಗೂ ಅವ್ಯಾ ಹತವಾಗಿ ಮುಂದುವರೆಸಿಕೊಂಡು ಬಂದಿವೆ.ಯಜುರ್ವೇದದ 16ನೇ ಅಧ್ಯಾಯ ರುದ್ರನಿಗೆ ಮೀಸಲಾಗಿದೆ.

ಇಲ್ಲಿ ಶಿವ ವೃಕ್ಷಾಧಿಪತಿ, ಸಸ್ಯಸಂಪತ್ತು,ಮೂಲಿಕೆಗಳು, ಕಾಡುಗಳು, ಕೃಷಿಭೂಮಿ ಇವೆಲ್ಲಕ್ಕೂ ಅವನೇ ಅಧಿಪತಿ.(ಯ.ವೇ.16.17.19)

ಕೃಷಿಭೂಮಿ,ಹಸುಗಳು,ಎತ್ತುಗಳು, ಅನೇಕ ಗಿಡಮರಗಳು, ಕಾಡುಗಳು ಔಷಧ ಸಸ್ಯಗಳು-ಇವೆಲ್ಲವುಗಳ ಬಗ್ಗೆ ದೃಷ್ಟಿಯಿಂದ ನೋಡುವ ಜನಪದ ಸಂಸ್ಕೃತಿ ವೇದಗಳ ಕಾಲದಿಂದ ಇಂದಿನವರೆಗೂ ಮುಂದುವರೆದಿದೆ. ಹೇಗೆ ಶಿವ ಕಾಲಕೂಟ ವಿಷವನ್ನು ಹೀರಿ ಪ್ರಪಂಚವನ್ನು ರಕ್ಷಿಸಿದನೋ ಹಾಗೆಯೇ ಶಿವ ಆಧಿಪತ್ಯದಲ್ಲಿರುವ ಮರ ಗಿಡಗಳು ಇಂದಿನ ಆಧುನಿಕ ಯುಗದ ವಾತಾ ವರಣದ ವಿಷವನ್ನು ಹೀರಿ ಕೊಂಡು,ತಮ್ಮ ದ್ಯುತಿ ಸಂಶ್ಲೇಷಣೆ ಕ್ರಿಯೆಯ ಮೂಲಕ ಆಮ್ಲಜನಕವನ್ನು ವಾತಾವರಣಕ್ಕೆ ಬಿಡುವ ಮೂಲಕ ಅದನ್ನು ಶುದ್ಧವಾಗಿಟ್ಟಿದೆ.

ಬಹುಪಾಲು ಸಾಮವೇದದ ಮಂತ್ರಗಳು 1 (1474) ಋಗ್ವೇದದ ಮಂತ್ರ ಗಳೇ ಆಗಿದ್ದರೂ ಸುಮಾರು 75 ಅಪೂರ್ವ ಮಂತ್ರಗಳು ಅದರದ್ದೇ ಆಗಿವೆ. ಸಾಮವೇದವೂ ಪ್ರಕೃತಿಗೆ, ಮರಗಳಿಗೆ ಪ್ರಾಮುಖ್ಯ ಕೊಡುತ್ತದೆ.ಈ ವೇದದಲ್ಲೂ ಅರಣ್ಯಕಪರ್ವ ಹಾಗೂ ಅರಣ್ಯಕಾಂಡಗಳಿವೆ. ಕುತೂಹಲಕಾರಿ ಜಾನಪದ ಅಂಶಗಳಿವೆ.ಈ ವೇದದಲೂ ಅರಣ್ಯಕಪರ್ವ ಹಾಗೂ ಅರಣ್ಯ ಕಾಂಡಗಳಿವೆ. ಕುತೂಹಲಕಾರಿ ಜಾನಪದ ಅಂಶಗಳಿವೆ. ಈ ವೇದದ 6ನೇ ಅಧ್ಯಾಯ ವನ್ನು ಕಾಡುಗಳಲ್ಲಿ ಮರಗಳ ಕೆಳಗೇ ಹಾಕಬೇಕು (ನೋಡಿ ಅನಂತರಂಗಾ ಚಾರ್ 1968). ಅರಣ್ಯಗಳ ಪವಿತ್ರ ವಾತಾವರಣದಲ್ಲಿ ಅರಣ್ಯಗಾನಗಳನ್ನು ರಹಸ್ಯಾತ್ಮಕವಾಗಿ ಹಾಡುವುದರಿಂದ ಅವನ್ನು ಊಹ್ಯಗಾನಗಳೆನ್ನುತ್ತಾರೆ. (ಶೇಷ ನವರತ್ನ, 2003)ಸಂಗೀತದ ಉಗಮಸ್ಥಾನವಾದ ಸಾಮಗಳ ಪ್ರಕೃತಿಯ ಮೇಲಿನ ಪ್ರಭಾವ ಅಗಾಧ. ಛಂದೋಗ್ಯದ ಮೂಲಕ “ಸರ್ವಂ ಖಿಲ್ವದಂ ಬ್ರಹ್ಮ” ಎಂಬ ತತ್ತ್ವವನ್ನು ಸಾಮವೇದ ಸಾರುತ್ತದೆ.

ಈ ಬಗೆಗೆ ಹೆಚ್ಚಿನ ಆಸಕ್ತಿಯನ್ನುಳ್ಳವರು ಪ್ರೊ.ಎಸ್.ಎನ್.ರಾಮ ಸ್ವಾಮಿ ಅವರ 'ವೇದವೃಕ್ಷಗಳು' ಎಂಬ ಗ್ರಂಥದಿಂದ ಹೆಚ್ಚು ಮಾಹಿತಿಯನ್ನು ಪಡೆಯಬಹುದು.

ಧಾರಾವಾಹಿ - 2

# ಆಳ್ವಾರರ ಭಗವದನುಭವ

ಡಾ॥ ಸಿ. ಎಸ್. ಊರ್ಮಿಳಾ
93804 26830

ಭಗವಂತ ಲೀಲಾಮಾನುಷ ವಿಗ್ರಹ ಅವನಿಗೆ ವೈಕುಂಠದಲ್ಲಿ ಇರಲು ಇಷ್ಟವಿಲ್ಲವಂತೆ. ನವಸಾಮಿ ವೈಕುಂಠೇ-ಎಂದು ಹೇಳಿ ಭಕ್ತರ ಹೃದಯ ಮಂಟಪದಲ್ಲಿ ವಿರಾಜಮಾನನಾಗಿ ಇರುವುದೇ ನನಗೆ ಇಷ್ಟ ಎಂದು ಹೇಳಿದ್ದಾನಂತೆ ಇರಲಿ. ಭಗವಂತ ಭಕ್ತಪರಾಧೀನ ಅಲ್ಲವೇ? ಒಮ್ಮೆ ಭಗವಂತ ಇವರನ್ನು ಇನ್ನೂ ವಿಶೇಷವಾಗಿ ಅನುಗ್ರಹಿಸಬೇಕೆಂದು ಗಾಡಾಂಧಕಾರದಲ್ಲಿ ಜಡಿಮಳೆಯನ್ನು ಹೊಯ್ಯಿಸುತ್ತಲೇ ಇದ್ದ. ಅರ್ಚಾವತಾರದಲ್ಲಿರುವ ತಾನು ಅವರ ದರ್ಶನ ಮಾಡಬೇಕೆಂದು ಅವನಿಗೆ ಅತ್ಯಾಸೆ ಉಂಟಾಯಿತು. ಉತ್ತರ ಆರ್ಕಾಟ್ ಜಿಲ್ಲೆಯ'ತಿರುಕ್ಕೋವಲೂರ್' ಎಂಬ ಊರಿನಲ್ಲಿಯೇ ಗೋಪಾಲಕೃಷ್ಣನ ಗುಡಿ.ಅಲ್ಲಿಯೇ ಒಂದು ಕಿರುದಾಣದಲ್ಲಿ ಮೊದಲು ಪೊಯಿಗೈಆಳ್ವಾರರು ಒಂದು ಸೇರಿದರು.ದೇಹ ಬಳಲಿದ್ದಿತು. ಹಾಗೆಯೇ ಅಲ್ಲಿಯೇ ಮಲಗಿದರು. ಸ್ವಲ್ಪ ಹೊತ್ತಾದ ನಂತರ ಬಾಗಿಲು ತಟ್ಟುವ ಶಬ್ದ! ಪೂದತ್ತಾಳ್ವಾರನ್ನು ಕಂಡು ಬನ್ನಿ ಬನ್ನಿ.ತಾವು ಬಹಳ ಆಯಾಸ ಪಟ್ಟಿರುಂತಿದೆ. ಇಲ್ಲಿ ಒಬ್ಬ ಮಲಗುವ ಜಾಗದಲ್ಲಿ ಇಬ್ಬರು ಕುಳಿತುಕೊಳ್ಳೋಣ ಎಂದು ಒಳಗೆ ಸ್ವಾಗತಿಸಿದರು ಮತ್ತೆ ಕೆಲವು ನಿಮಿಷಗಳ ನಂತರ ಪೇಯಾಳ್ವಾರರೂ ಅಲ್ಲಿಗೇ ಬಂದರು. ಅಲ್ಲಿ ಕುಳಿತಿರುವ ಇಬ್ಬರನ್ನು ನೋಡಿ ಅವರು ಇದು ತುಂಬಾ ಚಿಕ್ಕದಾದ ಇಕ್ಕಟ್ಟಾದ ಸ್ಥಳ. ನಾನು ಬೇರೆಡೆ ಎಲ್ಲಾದರೂ ಜಾಗ ನೋಡುತ್ತೇನೆ ಎಂದರು. ಅದಕ್ಕೆ ಮೊದಲೇ ಕುಳಿತಿದ್ದ ಅವರೀರ್ವರೂ ಇದೇನಪ್ಪಾ! ಜೋರಾಗಿ ಮಳೆ ಬರ್ತಾ ಇದೇ.ಈಗ ನೀವೆಲ್ಲಿ ಹೋಗುತ್ತಿರಿ. ನಾವು ಮೂವರೂ ಈ ಜಡಿ ಮಳೆಯಲ್ಲಿ ಇಲ್ಲಿಯೇ ನಿಂತು ಕಾಲ ಕಳೆಯೋಣ ಎಂದರು. ಈ ಮೂವರೂ ಇರುವುದನ್ನೇ ಹಂಚಿ ಅನುಭವಿಸುವ ಈ ಮಹಾಗುಣ ಅದೆಷ್ಟು ಅದ್ಭುತವಾದದ್ದು ಅಲ್ಲವೇ? (Live and let live policy) ಇಂದಿನದಲ್ಲಾ ನಮ್ಮ ಸಂತರು ಬರೀ ಮಾತಿನಲ್ಲಿ ಹೇಳಲಿಲ್ಲ. ನುಡಿದಂತೆ ನಡೆದು ತೋರಿಸಿದ್ದಾರೆ ಇರಲಿ. ಈ ಭವ್ಯವಾದ ಸನ್ನಿವೇಶವನ್ನು ನೋಡಿಕೊಂಡು ಸುಮ್ಮನೆ ಕುಳಿತಿರಲು ಆತಿರುಕ್ಕೋವಲೂರ್ ದಿವ್ಯದೇಶದ ಸ್ವಾಮಿಗೂ ಸಾಧ್ಯವಾಗಲಿಲ್ಲ. ಆ ತ್ರಿವಿಕ್ರಮ ಮೂರ್ತಿಯೂ ನಾಲ್ಕನೆಯವನಾಗಿ ಆ ದಟ್ಟ ಇರುಳಿನಲ್ಲಿ, ಆ ಘನಮಳೆಯಲ್ಲಿಯೇ. ಅವರ ನಡುವೆ ನೆರಗಿತುರುಕಿಕೊಂಡು ನಿಂತ.





ಆತನೇ ಅಲ್ಲಿನ ತ್ರಿವಿಕ್ರಮ ಮೂರ್ತಿ ಎಂದು ಮೂವರಿಗೂ ತಿಳಿಯಿತು ಅಂದರೆ ಭಗವದನುಭವವುಂಟಾಯಿತು. ಆದರೆ ಆ ಮೂವರಿಗೂ ಭಗವಂತ ಮೊದಲು ದರ್ಶನ ನೀಡಲಿಲ್ಲ. ಅವರ ಪರಭಕ್ತಿ. ಪರಜ್ಞಾನ, ಪರಮ ಭಕ್ತಿಗಳ ಸೊಗಡನ್ನು ತಾನು ಅನು ಭವಿಸಲು ಇಷ್ಟ ಪಟ್ಟನು. ಆ ದಿವ್ಯ ಮಂಗಳ ಮೂರ್ತಿ

ಯ ು ನ ್ ು



ನೋಡಲು ಅವರ ಬಳಿ ಯಾವುದೇ ಬಾಹ್ಯ ಸಲಕರಣೆಗಳು ಇರಲಿಲ್ಲ. ಆ ಮೂವರ ಪಾಲಿಗೆ ಅದೇ ಒಂದು ಭಾಗ್ಯವಾಯಿತು. ಅತ್ಯಂತ ಸಂಭ್ರಮ ಆಶ್ಚರ್ಯದಿಂದ ಅವರು ಪ್ರಾಕೃತಿಕ ಉಪಕರಣಗಳನ್ನೇ ಬಳಸಿ ಮಾನಸ ಅಂದರೆ ಮನಸಾಆರಾಧನೆ ಮಾಡತೊಡಗಿದರು.ಆ ದೇವತಾರಾ ಧನೆಯ ಸೊಗಸನ್ನು ನಾವು ನೋಡೋಣ.

ಪೊಯಗೈಆಳ್ವಾರರು ಈ ವಿಶಾಲವಾದ ನೆಲವನ್ನೇ ಹಣತೆಯನ್ನಾಗಿಸಿ ಕಡಲ ನೀರನ್ನೇ ತುಪ್ಪವೆಂದು ಭಾವಿಸಿ ಸೂರ್ಯನನ್ನೇ ದೀಪವನ್ನಾಗಿ ಭಾವಿಸಿ ಭಗವಂತನಿಗೆ ಆರತಿಯನ್ನು ಬೆಳಗಿದರು.

ವೈಯಂ ತಹಳಿಯಾ ಆರ್ ಕಡಲೇ ನೈಯಾಹ
ಮೈಯ ಕದಿರೋನ್ ವಿಳಕ್ಕಾಹ
ಶೈಯ್ಸ ಶುಡರಾಳಿಯಾನಡಿಕ್ಕೇ ಶೂಟ್ಟಿನೇನ್ ಶೊಲ್‌ಮಾಲೈ
ಇಡರಾಳಿ ನಿಂಗುಹವೇಯೆನ್ರು

- ಎಂದು ಸ್ತುತಿಸಿದರು.

(ಮುದಲ್‌ತಿರುವಂದಾದಿ 1 ನೇ ಪಾಶುರ)

ಎರಡನೆಯವರಾದ ಪೂದತ್ತಾಳ್ವಾರರು ಪ್ರೇಮವನ್ನೇ ಹಣತೆಯನ್ನಾಗಿ ನೆನೆದು ಅದೇ ಪ್ರೀತಿಯ ಮುನ್ನಡೆಯಾದ ಔತ್ಸುಕ್ಯ, ಉತ್ಸಾಹ ಕುತೂಹಲವನ್ನೇ ಆಜ್ಯವನ್ನಾಗಿಸಿ, ಅದಕ್ಕೂ ಮಿಗಿಲಾದ ಚಿಂತನೆಯೆಂಬ ಬತ್ತಿ ಹಾಕಿ ಜ್ಞಾನದೀಪವನ್ನು ಬೆಳಗಿದರು.

ಅನ್ಬೇ ತಹಳಿಯಾ ಆರ್ವಮೇ ನೆಯ್ಯಾಹ
ಇನ್ಬುರುಹು ಶಿನ್ದೈ ಇಡುತಿರಿಯಾ, ನನ್ಬುರುಹಿ
ಜ್ಞಾನ ಚುಡರ್ ವಿಳಕ್ಕೈತ್ತಿನೇನ್ ನಾರಣರ್ಕು
ಜ್ಞಾನ ತ್ತಮಿಳ್ ಪುರಿಂದನಾನ್

-ಎಂದು ಸ್ತುತಿಸಿದರು.

(ಇರಂಡಾಂತಿರುವಂದಾದಿ 1 ನೇ ಪಾಶುರ)


ಮೂರನೆಯವರಾದ ಪೇಯಾಳ್ವಾರರು ಹೀಗೆ ಸ್ತುತಿಸಿದರು. ಹಿಂದಿನ ಈರ್ವರೂ ಹಚ್ಚಿದ ಲೋಕ ವಿಲಕ್ಷಣವಾದ ಆ ದೀಪಗಳಿಂದ ಅಜ್ಞಾನವೆಂಬ ಅಂಧಕಾರ ನಿಶ್ಶೇಷವಾಗಿ ಹೊರಟು ಹೋಯಿತು. ಸ್ವಾಮಿಯ ದಿವ್ಯ ಕಲ್ಯಾಣತಮ ರೂಪ ಸೌಂದರ್ಯ ಲಾವಣ್ಯಾದಿಗಳನ್ನು ಬ್ರಹ್ಮ ಸ್ವರೂಪದೊಂದಿಗೆ ಪರವ್ಯೂಹ, ವಿಭವ ಅಂತ ರ್ಯಾಮಿ, ಅರ್ಚಾಸ್ಥಿತಿಗಳನ್ನೆಲ್ಲಾ ಸಾಕ್ಷಾತ್ಕರಿಸಿ ಸ್ವಾನುಭವವನ್ನು ಉದ್ಗರಿಸಿದರು.

ತಿರುಕಂಡೇನ್ ಪೊನ್ ಮೇನಿ ಕಂಡೇನ್ , ತಿಹಳುಮ್
ಅರುಕ್ಕನ್ ಅಣಿ ನಿರಮುಮ್ ಕಂಡೇನ್, ಶೆರುಕ್ಕಿಳರುಮ್
ಪೊನ್ನಾಳಿ ಕಂಡೇನ್ ಪುರಿ ಶೆಂಗಮ್ ಕೈಕಂಡೇನ್
ಎನ್ನಾಳಿ ವಣ್ಣನ್ ಪಾಲ್ ಇನ್ರು

( ಮೂನ್ರಾಂತಿರುವಂದಾದಿ 1 ನೇ ಪಾಶುರ)

ನಾನು ನನ್ನ ಸ್ವಾಮಿಯ ವಕ್ಷಃಸ್ಥಳದಲ್ಲಿ ಮಹಾಲಕ್ಷ್ಮಿಯನ್ನು ಕಂಡೆನು.ಯುದ್ಧಕ್ಕೆ ಸಿದ್ಧನಾಗಿ ಸೂರ್ಯನಂತೆ ಪ್ರಕಾಶಿಸುವಂತಹ ಚಕ್ರವನ್ನು ಕಂಡೆನು. ಬೆಳಗ್ಗೆ ಇರುವ ಬಲಮುರಿ ಶಂಖವನ್ನು ಕಂಡೆನು. ನನ್ನ ಸ್ವಾಮಿ ಶ್ರೀಮನ್ನಾರಾಯಣನನ್ನು ನನ್ನ ಸಮೀಪದಲ್ಲಿಯೇ ಕಂಡೆ ಎಂದು ಹೇಳಿದ್ದಾರೆ. ಹೀಗೆ ತಮಗೆ ಆದ ಅನುಭವಾಮೃತವನ್ನು ನಮ್ಮೆಲ್ಲರಿಗೂ ಹಂಚಿದ್ದಾರೆ.

(-ಸಶೇಷ)



ಕರ್ನಾಟಕದ ವೈಷ್ಣವ ದೇವಾಲಯಗಳು

9

# ಟೇಕಲ್ಲಿನ ಶ್ರೀ ವರದರಾಜ ದೇವಾಲಯ

- ಕೆಂಗೇರಿ ಚಕ್ರಪಾಣಿ

94483 86886

ಟೇಕಲ್, ಕೋಲಾರ ಜಿಲ್ಲೆ ಮಾಲೂರು ತಾಲ್ಲೂಕಿನಲ್ಲಿರುವ ಒಂದು ನಿಸರ್ಗದತ್ತ ರಮಣೀಯ ಸ್ಥಳ. ಮಾಲೂರು ಬಂಗಾರುಪೇಟೆ ರಸ್ತೆಯಲ್ಲಿದ್ದು, ಬೆಂಗಳೂರು-ಚೆನ್ನೈ ರೈಲು ಮಾರ್ಗದಲ್ಲಿ ಮಾಲೂರು- ಬಂಗಾರುಪೇಟೆ ನಡುವೆ ಇರುವ ಒಂದು ರೈಲು ನಿಲ್ದಾಣವಾಗಿದೆ.


ಟೇಕಲ್ ಗ್ರಾಮವು ಕೂರ್ಮಾದ್ರಿ ಹಾಗೂ ಹೇಮಾದ್ರಿ ಎಂಬ ಎರಡು ಬೆಟ್ಟ ಗಳ ನಡುವೆ ಇದೆ. ಟೇಕಲ್ ಹಿಂದೆ ತೇಕಲನಾಡು ಎಂಬ ಆಡಳಿತ ಪ್ರದೇಶದ ಕೇಂದ್ರ ಸ್ಥಾನವಾಗಿತ್ತು ವಿಜಯನಗರದ ಅರಸರ ಕಾಲದಲ್ಲಿ ಗೋಪಾಲರಾಜ ಎಂಬ ಮಾಂಡಲೀಕನು ಇಲ್ಲಿ ಆಡಳಿತ ನಡೆಸಿದ್ದನು. ಅವನ ಕಾಲದಲ್ಲಿ ಇಲ್ಲಿ ಎರಡು ಸುತ್ತಿನ ಕೋಟೆ ಹಾಗೂ ಅರಮನೆಯಿದ್ದು ದಕ್ಕೆ ಶಾಸನಗಳು ಲಭ್ಯವಿವೆ. ಟೇಕಲ್‌ನಲ್ಲಿ ಹಿಂದೆ 101 ದೇವಾಲಯಗಳು ಹಾಗೂ 101 ಬಾವಿಗಳು ಇದ್ದವೆಂದು ಸ್ಥಳೀಯರು ತಿಳಿಸುತ್ತಾರೆ. ಟೇಕಲ್‌ನಲ್ಲಿ ಪ್ರಸಿದ್ಧವಾದ ವರದರಾಜ ದೇವಾಲಯ, ಸೋಮೇಶ್ವರ ದೇವಾಲಯ ಹಾಗೂ ಆಂಜನೇಯ ದೇವಾಲಯಗಳಿವೆ. ಇಲ್ಲಿರುವ ವರದರಾಜ ದೇವಾಲಯವು ಒಂದು ಪ್ರಾಚೀನ ದೇವಾಲಯವಾಗಿದ್ದು, ಮೂಲತಃ ಚೋಳರ ಕಾಲದ ಆಲಯವಾಗಿರುತ್ತದೆ. ದೇವಾಲಯವು ಗರ್ಭಗೃಹ,ತೆರೆದ ಅಂತರಾಳ ನವರಂಗ ಹಾಗೂ ಹಲವಾರು ಕಂಬಗಳ ಮುಖ ಮಂಟಪವನ್ನು ಹೊಂದಿರುವ ಬೃಹತ್ ರಚನೆಯಾಗಿದೆ. ದೇವಾಲಯಕ್ಕೆ ದೊಡ್ಡದಾದ ಪ್ರವೇಶದ್ವಾರವಿದೆ. ಪ್ರವೇಶ ದ್ವಾರದ ಇಕ್ಕೆಡೆಗಳಲ್ಲಿ ನಗಾರಿ ಕೋಣೆಯಿದೆ.

ಈ ದೇವಾಲಯದ ಗರ್ಭಗೃಹದಲ್ಲಿರುವ ವರದರಾಜ ಸ್ವಾಮಿಯು ಶಂಖ, ಚಕ್ರ,ಗದಾ ಮತ್ತು ವರದ ಹಸ್ತವನ್ನು ಹೊಂದಿರುವ ಸುಮಾರು ನಾಲ್ಕು ಅಡಿ ಎತ್ತರದ ಸುಂದರ ಮೂರ್ತಿಯಾಗಿದೆ. ವರದ ಹಸ್ತದಲ್ಲಿ ಗುಲಗುಂಜಿಯಿದ್ದು ವರದ ರಾಜ ಸ್ವಾಮಿಯು ಕಂಚಿವರದರಾಜನಿಗಿಂತ ಒಂದು ಗುಲ ಗಂಜಿಯಷ್ಟು ಹೆಚ್ಚು ಎಂದು ನಂಬಲಾಗಿದೆ. ವರದರಾಜನ ಮುಂದೆ ಒಂದು ಸಣ್ಣ ಬಂಡೆಯಿತ್ತು. ಅದು ಭೃಗು ಮಹರ್ಷಿಯ ಐಕ್ಯ ಸ್ಥಳವೆಂದು ನಂಬಿಕೆ ಹಾಗೂ ವರದಸ್ವಾಮಿಯನ್ನು ಭೃಗು ಮುನಿಗಳೇ ಸ್ಥಾಪಿಸಿರುವರೆಂದು ಸ್ಥಳೀಯ ಐತಿಹ್ಯ.

ಈ ದೇವಾಲಯದ ಮುಖ ಮಂಟಪವನ್ನು ವಿಜಯ ನಗರಸರ ಕಾಲದಲ್ಲಿ ಸ್ಥಳೀಯ ಆಡಳಿತಗಾರ ಗೋಪಾಲ ರಾಜನ ಪ್ರಧಾನಿ ಸಿಂಗ ನಾಯಕನು ನಿರ್ಮಿಸಿರುತ್ತಾನೆ. ಅಲ್ಲದೆ ತನ್ನ ದೊರೆ ಗೋಪಾಲರಾಜನ ಹೆಸರಿನಲ್ಲಿ ಗೋಪಾಲಸಮುದ್ರವೆಂಬ ಕೆರೆಯನ್ನು ಹಾಗೂ ಎರಡು ಸುತ್ತಿನ ಕೋಟೆಯನ್ನು ನಿರ್ಮಿಸಿರುವನು. ಸಿಂಗನಾಯಕನು ವರದರಾಜಸ್ವಾಮಿಯ ಅಂಗರಂಗ ಭೋಗಕ್ಕೆ,ನಿತ್ಯ ನೈವೇದ್ಯಕ್ಕೆ, ಪೂಜಾ ಕೈಂಕರ್ಯಕ್ಕೆ ಹಲವಾರು ದತ್ತಿಗಳನ್ನು ಬಿಟ್ಟಿರುವುದು ಇಲ್ಲಿ ದೊರೆತ ಶಾಸನಗಳಲ್ಲಿ ತಿಳಿದು ಬರುವುದು. ಈ ದೇವಾಲಯದ ಅಧಿಷ್ಠಾನಗಳ ಮೇಲೆ ಹಲವಾರು ತಮಿಳು ಶಾಸನಗಳಿವೆ. ತಮಿಳು ಶಾಸನಗಳಲ್ಲಿ ಅರಳಾರುನಾಡಾರ್ ಎಂದು ವರದರಾಜ ಸ್ವಾಮಿಯನ್ನು ಕರೆಯಲಾಗಿದೆ. ಈ ದೇವಾಲಯದ ನವರಂಗದ ಬಾಗಿಲುವಾಡದ ಮೇಲೆ ಸುಮಾರು ಮೂರು ಅಡಿ ಅಗಲದ ಶೇಷಶಾಯಿ ರಂಗನಾಥನ ಶಿಲ್ಪವಿದೆ ಹಾಗೂ ಮುಖಮಂಟಪದ ಇಕ್ಕೆಲಗಳಲ್ಲಿ ದ್ವಾರಪಾಲಕರಾದ ಜಯ ವಿಜಯರ ಶಿಲ್ಪಗಳಿವೆ. ಆಳ್ವಾರರು ಮತ್ತು ಕುಳಿತಿರುವ ಜನಾರ್ದನ ಶಿಲ್ಪಗಳನ್ನು ಮುಖ ಮಂಟಪದಲ್ಲಿಡಲಾಗಿದೆ. ಈ ದೇವಾಲಯದ ಸಂಕೀರ್ಣ



ದಲ್ಲಿ ಲಕ್ಷ್ಮಿಗಾಗಿ ಪ್ರತ್ಯೇಕ ಗುಡಿಯಿದೆ. ಇಲ್ಲಿ ಇತ್ತೀಚೆಗೆ ದೊರೆತ ಸ್ಥಾನಕ ಭಂಗಿಯಲ್ಲಿರುವ ಜನಾರ್ದನ ಸ್ವಾಮಿಯ ಶಿಲ್ಪವನ್ನಿರಿಸಲಾಗಿದೆ. ಈ ದೇವಾಲಯದಲ್ಲಿ ದೊರೆತ ವಿಜಯನಗರದ ಅರಸರ ಕಾಲದ ಶಾಸನದಲ್ಲಿ ಇಲ್ಲಿಯ ಮಾಂಡಲೀಕ ಗೋಪಾಲ ರಾಜನ ಪ್ರಧಾನಿ ಮಲ್ಲಮ ರಾಜನ ಮಗ ಸಿಂಗರಾಜನು ದೇವಾಲಯದ ಪ್ರವೇಶದ್ವಾರದ ಬಾಗಿಲಿಗಾಗಿ ಗ್ರಾಮದ ಸಮೀಪದಲ್ಲಿರುವ ಗಂಡ ಭೇರುಂಡ ಎಂಬ ಮಾವಿನ ಮರವನ್ನು ಕಡಿಸಿ ಅದೇ ಗ್ರಾಮದ ಬಡಗಿ ದೇವೋಜನ ಮಗ ಚೋಜ ದೇವೋಜನ ಕೈಯಿಂದ ಬಾಗಿಲುಗಳನ್ನು ಮಾಡಿಸಿ ಹಾಗೂ ಊರಿನ ಕಮ್ಮಾರ ಅಂಜಲ ಲಂಗೋಜನಿಂದ ಬಾಗಿಲಿಗೆ ಕಬ್ಬಿಣದ ಕೆಲಸವನ್ನು ಮಾಡಿಸಿದ ಸ್ವಾರಸ್ಯವಾದ ವಿವರ ದಾಖಲಿಸುತ್ತದೆ.



ವರದರಾಜ ದೇವಾಲಯದ ನಿತ್ಯಪೂಜೆ-ಪಕ್ಷ ಪೂಜೆ ಉತ್ಸವಾದಿಗಳು ನೆರವೇರಲು ಸೂಕ್ತ ವ್ಯವಸ್ಥೆ ಮಾಡಲಾಗಿತ್ತು. ಚೊಕ್ಕ ಪೆರುಮಾಳು ದಾಸರ ಅಳಿಯ ನಾಯನಾರು ದಾಸನೆಂಬುವನು ದೇವಾಲಯದ ಅರ್ಚಕರಿಗಾಗಿ, ನೈವೇದ್ಯ ಮಾಡುವವರಿಗಾಗಿ, ಹೂವಿನ ದಂಡೆ ಕಟ್ಟುವ ದಾಸರಿಗಾಗಿ, ಅಲ್ಲಿ ನರ್ತಿಸುವ ನರ್ತಕಿಯರಿಗಾಗಿ ಸಮೀಪದ ಹಳ್ಳಿಯನ್ನು ಗೋಪಾಲನು ಧಾರೆಯೆರೆದು ಕೊಟ್ಟಿರುವುದು ವರದರಾಜಸ್ವಾಮಿ ದೇವಾಲಯದ ಪ್ರವೇಶದ್ವಾರದ ಸಮೀಪದಲ್ಲಿರುವ ಶಾಸನದಿಂದ ತಿಳಿದುಬರುವುದು. ಶಾಸನದ ಉಲ್ಲೇಖದಲ್ಲಿ ದೇವಾಲಯದ ಅಂಗರಂಗ ಮಂಟಪವನ್ನು ಸಾರಿಸುವ ಊಳಿಗದ ತಿಮ್ಮಿ ಎಂಬಾಕೆಯ ಸಂಬಳದ ವ್ಯವಸ್ಥೆಯನ್ನು ಮಾಡಿದ್ದ ಸಂಗತಿ ಅಚ್ಚರಿ ಮೂಡಿಸುವುದು. ಇದು ನಮ್ಮ ಪ್ರಾಚೀನರು ಎಷ್ಟು ಅಚ್ಚುಕಟ್ಟಾಗಿ ದೇವಾಲಯವನ್ನು ನಿರ್ವಹಿಸಲು ವ್ಯವಸ್ಥೆ ಮಾಡಿದ್ದರೆಂಬ ಸಂಗತಿ ಅಧ್ಯಯನ ಯೋಗ್ಯವಾಗಿದೆ.



ವರದರಾಜಸ್ವಾಮಿಯ ದೇವಾಲಯವು ಕೆಲವು ಕಡೆ ಶಿಥಿಲವಾಗಿದ್ದು, ತುರ್ತಾಗಿ ದುರಸ್ಥಿ ಕಾರ್ಯವಾಗಬೇಕಿದೆ. ಟೇಕಲ್ ವರದರಾಜ ಸ್ವಾಮಿಯ ಬ್ರಹ್ಮ ರಥೋತ್ಸವವು ವೈಶಾಖ ಶುದ್ಧ ಪೂರ್ಣಿಮಿಯಲ್ಲಿ ಪ್ರತಿವರ್ಷ ವೈಭವವಾಗಿ ಜರುಗುವುದು.

ಟೇಕಲ್ಲಿನಲ್ಲಿರುವ ಸೋಮೇಶ್ವರ ದೇವಾಲಯವು ಇದೇ ಕಾಲಘಟ್ಟಕ್ಕೆ ಸೇರುವ ಆಲಯವಾಗಿರುವುದು. ಇಲ್ಲಿರುವ ಆಂಜನೇಯ ಸ್ವಾಮಿಯು ಸುಮಾರು ಏಳು ಅಡಿ ಎತ್ತರವಿದ್ದು ಶ್ರಾವಣ ಮಾಸದ ಶನಿವಾರಗಳಲ್ಲಿ ವಿಶೇಷ ಪೂಜಾ ಕೈಂಕರ್ಯಗಳು ಜರುಗುವುದು.

**ಹೀಗೆ ಬನ್ನಿ...**

ಬೆಂಗಳೂರಿನಿಂದ ಸುಮಾರು 65 ಕಿ.ಮೀ. ದೂರದಲ್ಲಿರುವ ಟೇಕಲ್ ಗ್ರಾಮವು ಮಾಲೂರು-ಬಂಗಾರುಪೇಟೆ ರಸ್ತೆಯಲ್ಲಿದೆ. ಬೆಂಗಳೂರು-ಹೊಸಕೋಟೆ-ಮಾಲೂರು ಮುಖಾಂತರ ಟೇಕಲ್‌ಗೆ ಬರುವುದು ಹತ್ತಿರದ ಮಾರ್ಗ.ಹೊಸಕೋಟೆಯಿಂದ ಮಾಲೂರು 18ಕಿ.ಮೀ ಹಾಗೂ ಮಾಲೂರಿನಿಂದ ಟೇಕಲ್ 6 ಕಿ.ಮೀ.ದೂರವಿರುವುದು. ಕೋಲಾರ ಮತ್ತು ಬಂಗಾರು ಪೇಟೆ ಕಡೆಯಿಂದ ಟೇಕಲ್ಲಿಗೆ ಉತ್ತಮ ರಸ್ತೆ ಮಾರ್ಗವಿದೆ.



ಧಾರಾವಾಹಿ - 4

# ಶ್ರೀ ವೇಂಕಟೇಶ್ವರಸ್ವಾಮಿ ಆಲಯ

- ಇಂಗ್ಲೀಷ್ ಮೂಲ : ಡಾ॥ ಎನ್.ರಮೇಶನ್

- ಕನ್ನಡಾನುವಾದ : ದಿ॥ ಬಿ.ಎನ್. ಶ್ರೀನಿವಾಸನ್

**ಅಧ್ಯಾಯ -4**

## ಚಾರಿತ್ರಿಕ ಹಿನ್ನೆಲೆ

### 1.ಪ್ರಾಗೈತಿಹಾಸ-

ಮನುಷ್ಯ ತನ್ನ ಅವಸರದ ಆಯುಧಗಳಾಗಿ,ಕಲ್ಲುಗಳನ್ನು ತಕ್ಕ ಆಕಾರ,ಗಾತ್ರಗಳಿಗೆ ತಕ್ಕ ರೀತಿಯಲ್ಲಿ ಸಿಗುರೆಬ್ಬಿಸಿ ಸಿದ್ಧಮಾಡಿಕೊಂಡ ಪ್ರಾಚೀನ ಶಿಲಾಯುಗವು ತಿರುಪತಿ, ಸೀತಾರಾಮಪೇಟ,ಎಲ್ಲಂಪಲ್ಲಿ,ಮೇಕಲವಾಂಡ್ಲಪಲ್ಲಿ,ಪೀಲೇರು,ಗಟ್ಟು,-ಪ್ರಾಂತಗಳಲ್ಲಿ ದೊರೆತಿರುವ ಕೈಕೊಡಲಿಗಳಿಂದ ಪ್ರತಿನಿಧಿಸಲ್ಪಟ್ಟಿದೆ.ಅಗ್ರಹಾರ,ಅರವಂದರಪಲ್ಲಿ,ಚಿಂತಪರ್ತಿ, ಮರಾಟವಾಂಡ್ಲಪಲ್ಲಿ, ತಿರುಪತಿಗಳಲ್ಲಿ ದೊರೆತ ಬೆಣಚುಕಲ್ಲು ಉಪಕರಣಗಳಿಂದ ಮೇಲೆ ಹೇಳಿದ ಯುಗದ ಮುಂದಿನ ಘಟ್ಟವಾದ ಮಧ್ಯಕಾಲೀನ ಶಿಲಾಯುಗ ಪ್ರತಿನಿಧಿತವಾಗಿದೆ. ನೂತನ ಶಿಲಾಯುಗದ ಯಾವುದೇ ಗುರುತುಗಳೂ ಸಧ್ಯಕ್ಕೆ ಉಪಲಬ್ಧವಿಲ್ಲ.

### 2.ಇತಿಹಾಸದ ಆರಂಭಕಾಲ-

1. ಮೌರ್ಯರಕಾಲ, 2. ಶಾತವಾಹನರಕಾಲ.

ಪ್ರಾಗೈತಿಹಾಸಿಕ ಹಾಗೂ ಇತಿಹಾಸದ ಆರಂಭಕಾಲಗಳ ನಡುವೆ ಹಿರಿದಾದ ಕಂದಕವೊಂದಿದ್ದು, ಇತಿಹಾಸದ ಆರಂಭಕಾಲದಲ್ಲಿ ತಿರುಪತಿಗೆ ಸಂಬಂಧಿಸಿದ ಯಾವುದೇ ಅಂಶವೂ ಬೆಳಕಿಗೆ ಬಂದಿಲ್ಲ.ಆದರೂ ಎಲ್ಲ ಕಡೆಯಲ್ಲಿಯಂತೆ ನಂದರನ್ನು ಮೂಲೆ ಗುಂಪಾಗಿಸಿ ಮೇಲೆದ್ದ ಮೌರ್ಯರ ನಂತರ ನಾಲ್ಕುನೂರು ವರ್ಷಗಳ ಕಾಲ ಆಳಿದ ಶಾತ ವಾಹನರ ಕೈಗೆ ಚಿತ್ತೂರು ಜಿಲ್ಲೆಯೂ ಸೇರಿದ ಈ ಪ್ರಾಂತವೂ ಸೇರಿತ್ತು.

### 3.ಪಲ್ಲವರು-

ಶಾತವಾಹನರ ನಂತರ ಪ್ರಾಕೃತ ದಾಖಲೆಗಳ ಹಾಗೂ ಸಂಸ್ಕೃತ ದಾಖಲೆಗಳ ಪ್ರಧಾನ ಪಲ್ಲವರ ಆಳ್ವಿಕೆಗೆ ಈ ನಾಡು ಒಳಗಾಯಿತು.ಪ್ರಾಕೃತ ಪಲ್ಲವರ ಸ್ಕಂದವರ್ಮನ ಕಾಲದಲ್ಲಿ ಆತನ ರಾಜ್ಯ ಉತ್ತರದಲ್ಲಿ ಕೃಷ್ಣಾ ನದಿಯವರೆಗೆ ಪಶ್ಚಿಮದಲ್ಲಿ ಅರಬ್ಬೀಸಮುದ್ರದ ವರೆಗೆ ಹರಡಿದ್ದಿತು. ಕ್ರಿ.ಶ.4ನೇ ಶತಕದ ಮಧ್ಯದಲ್ಲಿ ಸಮುದ್ರಗುಪ್ತನು ದಕ್ಷಿಣ ಜೈತ್ರಯಾತ್ರೆ ಬಂದಾಗ,ಕಂಚಿಯ ಬಳಿ ಪಲ್ಲವರಾಜ ವಿಷ್ಣುಗೋಪನನ್ನು ಸೋಲಿಸಿದಾಗ ಚಿತ್ತೂರು ಜಿಲ್ಲೆಯ ಭಾಗ ಅವರ ಕೈತಪ್ಪಿತು. ಪಲ್ಲವರು ಮತ್ತೆ ಈ ಭಾಗದ ಪ್ರಭುಗಳಾದರೂ ತ್ರಿಲೋಚನ ಪಲ್ಲವನ ಕಾಲದಲ್ಲಿ ಈ ಪ್ರಾಂತ ಕರಿಕಾಲಚೋಳನ ವಶಕ್ಕೆ ಬಂದಿತು. ನಂತರ ಕ್ರಿ.ಶ.560

ಲಿಂದ ಕ್ರಿ.ಶ.580ವರೆಗೆ ಆಳಿದ ಸಿಂಹ ವಿಷ್ಣುವಿನಿಂದಾಗಿ ಈ ಪ್ರಾಂತ್ಯದ ಮೇಲಿನ ಪಲ್ಲವಾಧಿಕಾರ ಮತ್ತೆ ಸ್ಥಾಪಿತ ವಾಯಿತು.

ಈ ಪ್ರಾಂತ್ಯದ ಮುಖ್ಯ ಭಾಗ ಪಲ್ಲವರಾಜ್ಯದ ಈಶಾನ್ಯದ ಗಡಿಯಲ್ಲಿ ಬಾದಾಮಿ ಚಾಲುಕ್ಯರ ರಾಜ್ಯದ ಗಡಿಯೊಡನೆ ಹೊಂದಿಕೊಂಡದ್ದರಿಂದಾಗಿ,ಸ್ಪರ್ಧೆ ನಿರಂತರವಾಗಿದ್ದಿತು. ಪಶ್ಚಿಮದ ಚಾಲುಕ್ಯರ 2ನೇ ಪುಲಿಕೇಶಿಗೆ ಇಲ್ಲಿನ ಬಹುಭಾಗವನ್ನು ಮಹೇಂದ್ರವರ್ಮ ಪಲ್ಲವ (ಕ್ರಿ.ಶ. 580-630) ಕಳೆದುಕೊಂಡ.

ಆದರೂ ಈ ಜಿಲ್ಲೆಯಲ್ಲಿ ಪಲ್ಲವರ ಆಡಳಿತ 1ನೇ ನರಸಿಂಹವರ್ಮ (ಕ್ರಿ.ಶ.630-668)ನಿಂದ ಸ್ಥಾಪಿಸಲ್ಪಟ್ಟಿತು. ಆತನ ಉತ್ತರಾಧಿಕಾರಿಗಳು ಕಡೆಯವರೆಗೆ ಪ್ರಭಾವವನ್ನುಳಿಸಿಕೊಂಡಿದ್ದರು.ಈ ಜಿಲ್ಲೆಯಲ್ಲಿ ದೊರತ ಪಲ್ಲವರಾಜರುಗಳು 2ನೇ ನರಸಿಂಹವರ್ಮ (ಕ್ರಿ.ಶ. 700-728) 2ನೇ ಪರಮೇಶ್ವರವರ್ಮ(ಕ್ರಿಶ.728-731)2ನೇ ನಂದಿವರ್ಮ(731-796)ದಂತಿವರ್ಮ (796-847)3ನೇ ನಂದಿವರ್ಮ (846-869) ನೃಪತುಂಗವರ್ಮ (859-899) ಹಾಗೂ ಅಪರಾಜಿತ (885-903) ಇವುಗಳ ಶಾಸನಗಳು ದೊರೆಯುವುದರಿಂದ ಈ ಮಾತು ಪುಷ್ಟಿಯಾಗುತ್ತದೆ.

ತಿರುಪತಿ-ತಿರುಮಲೆ ಪ್ರಾಂತ್ಯವೂ ಅದನ್ನು ಒಳಗೊಂಡ ತೊಂಡಮಂಡಲ ಪ್ರಾಂತ್ಯದಲ್ಲೂ ಪಲ್ಲವರ ಕಾಲ, ಪ್ರಥಮ ಪ್ರಧಾನಕಾಲವಾಗಿದೆ. ಈ ಪಲ್ಲವರು ಮೊದಲಿಗೆ ಶಾತವಾಹನರ ರಾಜ್ಯದ ದಕ್ಷಿಣದಗಡಿಯಾದ ತೊಂಡಮಂಡಲನಾಡಿನಲ್ಲಿದ್ದವರು.

ಈ ವಂಶದ ಮೊದಲಿಗನಾದ ಸಿಂಹವರ್ಮನು (ವೀರಕುರುಚಿ) ವನವಾಸಿಯ ನಾಗವಂಶಕ್ಕೆ ಸೇರಿದ ರಾಜಕುಮಾರಿಯೊಬ್ಬಳನ್ನು ವಿವಾಹವಾಗಿ ಬಳುವಳಿಯಾಗಿ ರಾಜ ಪದವಿಯನ್ನು ರಾಜಮರ್ಯಾದೆಯನ್ನೂ ಪಡೆದ. ಅಂದಿನ ಕಾಲದಲ್ಲಿನ ಪ್ರಭಾವಶಾಲಿ ನಾಗವಂಶದ ಅಳಿಯನಾಗಿದ್ದುದರಿಂದ ಪ್ರಾಯಶಃ ತೊಂಡಮಂಡಲದ ಇತರ ನಾಗಸಂತತಿಗಳವರಿಂದ ನಾಯಕನೆಂದು ಗುರುತಿಸಲ್ಪಟ್ಟಿರಬೇಕು. ನಂತರ ಈತ ತೀರ ಪ್ರದೇಶಗಳನ್ನು ಆಕ್ರಮಿಸಿ,ಇಕ್ಷ್ವಾಕುವಂಶವನ್ನು ಸೋಲಿಸಿ ನೆಲ್ಲೂರು, ಗುಂಟೂರು ಮತ್ತಿತರ ರಾಯಲಸೀಮೆಯ ಜಿಲ್ಲೆಗಳನ್ನು ವಶಪಡಿಸಿಕೊಂಡ. ಪ್ರಾಚೀನ ಕಂಚಿಯನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ಅದರ ಖ್ಯಾತಿಯನ್ನು ಪುನರುದ್ಧರಿಸಿದ.

ಆತ ಕಟ್ಟಿ ಬೆಳಸಿದ ಈ ರಾಜ್ಯ ಬಹುಕಾಲ ನಿಂತು ಅವನ ವಂಶಸ್ಥರಿಂದ ಕ್ರಿ.ಶ.9ನೇ ಶತಕದ ಕೊನೆಯವರೆಗೆ ಆಳಲ್ಪಟ್ಟಿತು. ನಂತರ ಚೋಳರಿಂದ ಆಕ್ರಮಿಸಲ್ಪಟ್ಟಿತು.

ಈ ಭಾಗದ ಪಲ್ಲವವಂಶದ ಬಗ್ಗೆ ಕಡೆಯ ಮೂವರಲ್ಲಿ ಮೊದಲಿಗನಾದ ರಾಜನ ಎರಡು ಶಾಸನಗಳಿವೆ. (219 ಹಾಗೂ 223ಜಿ.ಟಿ.)ಈ ರಾಜನು ಕೋವಿಜಯದಂತಿವಿಕ್ರಮರ್ ಎಂದು ಹೆಸರಿಸಲ್ಪಟ್ಟು ಕ್ರಿ.ಶ.775 ರಿಂದ 826 ರವರೆಗೆ ಆಳಿದ ದಂತಿವರ್ಮನೆಂದು ಗುರುತಿಸಲಾಗಿದೆ.ಈ ಶಾಸನಗಳು ವೇಂಗಡದ ಅಲಯಕ್ಕೆ ನೀಡಿದ ಕಾಣಿಕೆಗಳನ್ನಲ್ಲದೆ-ತಿರುಚಾನೂರಿನಲ್ಲಿದ್ದ ಅದರ ಪ್ರತಿನಿಧಿಯಾದ ಇನ್ನೊಂದು ಆಲಯಕ್ಕೆ ನೀಡಿದ ಕಾಣಿಕೆ ಯನ್ನು ಸೂಚಿಸುತ್ತವೆ.

ಈ ಪ್ರಾಂತವು ಪಲ್ಲವರ ಸಾಮಂತರಾದ ಬಾಣರ ಆಳ್ವಿಕೆಗೆ ಸೇರಿದ್ದಿತು. ಬಾಣರ ವಿಜಯಾದಿತ್ಯನು ಎರಡು ಶಾಸನಗಳಲ್ಲಿ ಹೆಸರಿಸಲ್ಪಟ್ಟಿದ್ದಾನೆ. (ಜಿ.ಟಿ.429,229) ಈ ವಿಜಯಾದಿತ್ಯನು ಕ್ರಿ.ಶ.9ನೇ ಶತಕದ ಮೊದಲಾರ್ಧದಲ್ಲಿ ಪ್ರಸಿದ್ಧನಾಗಿರಬೇಕು.ಪಲ್ಲವರ ಎರಡು ತಲೆಮಾರಿನ ನಂತರ ತೊಂಡಮಂಡಲವನ್ನು ಚೋಳರ ಆದಿತ್ಯ-1, ಆಕ್ರಮಿಸಿ ಪಲ್ಲವರರಾಜ ಅಪರಾಜಿತನನ್ನು ಸೋಲಿಸಿ ಈ ಭಾಗವನ್ನು ವಶಪಡಿಸಿಕೊಂಡ ಇದರಿಂದಾಗಿ ಪಲ್ಲವರ ಆಧಿಪತ್ಯ ಕೊನೆಗೊಂಡಿತು.

## 4. ರೇನಾಡು ಚೋಳರು

ಕರಿಕಾಲಚೋಳನ ವಂಶಸ್ಥರೆಂದು ಹೇಳಿಕೊಂಡ ಚೋಳರ ಒಂದು ಶಾಖೆಯ ಅಧೀನದಲ್ಲಿ ಈ ಪ್ರಾಂತ್ಯ, ಬಾದಾಮಿ ಚಾಲುಕ್ಯರ,ಕಂಚಿಯ ಪಲ್ಲವರ ಕಾಲದಲ್ಲಿ ಇದ್ದುದಾಗಿ ತಿಳಿದುಬರುತ್ತದೆ. ಇದರ ರಾಜರನ್ನು ಕಡಪ ಜಿಲ್ಲೆಯ ರೇನಾಡು-7000 ದ ಹೆಸರಿನಲ್ಲಿ ರೇನಾಡು ಚೋಳರೆಂದು ಕರೆಯಲಾಯಿತು. ಇವರಲ್ಲಿ ಚೋಳ ಮಹಾರಾಜ-ಬಿರುದು ಪಡೆದ ಮಹೇಂದ್ರ ವಿಕ್ರಮನ ಹಾಗೂ ಅವನ ಮಗ ಪುಣ್ಯಕುಮಾರರ ಶಾಸನಗಳು ಈ ಜಿಲ್ಲೆಯಲ್ಲಿ ದೊರೆತಿವೆ.

## 5.ರಾಷ್ಟ್ರಕೂಟರು

ಬಾದಾಮಿಯ ಚಾಲುಕ್ಯರನ್ನು ಕ್ರಿ.ಶ.757ರಲ್ಲಿ ಅವರ ಸಾಮಂತರಾದ ರಾಷ್ಟ್ರಕೂಟರು ಉದ್ಘಾಟಿಸಿದರು. ಕ್ರಿ.ಶ.9ನೇ ಶತಕದ ಕೊನೆಯಲ್ಲಿ ಪಲ್ಲವರು ಪಾಂಡ್ಯರ ಏಳ್ಗೆಯನ್ನು ಎದುರಿಸಬೇಕಾಯಿತು. ಪ್ರಾಯಶಃ ಕೆಲ ಕಾಲವಾದರೂ ಪಲ್ಲವರಿಗೆ ಪಾಂಡ್ಯರ ವಿರುದ್ಧ ರಾಷ್ಟ್ರಕೂಟರು ನೆರವು ನೀಡಿರಬೇಕು. ಈ ಕಾಲಕ್ಕೆ ದಕ್ಷಿಣ ಭಾರತದಲ್ಲಿ ಚೋಳಸಾಮ್ರಾಜ್ಯ ತಲೆಯೆತ್ತಿ ನಿಂತಿತು.ಈ ವಂಶಾವಳಿಗಳು ಚಿತ್ತೂರು ಜಿಲ್ಲೆಯ ಮೇಲೆ ಸಾಕಷ್ಟು ಪ್ರಭಾವ ಬೀರು

ವಂತಾಯಿತು. ಇವರ ಸಾಮಂತರಾದ ಬಾಣರು, ನೊಳಂಬರು, ಪಶ್ಚಿಮಗಂಗರು, ವೈದುಂಬರು ತಮ್ಮ ತಮ್ಮಲ್ಲಿ ಆಧಿಕ್ಯತೆಗಾಗಿ ಹೊಡೆದಾಡುತ್ತಿದ್ದುದರಿಂದಾಗಿ ಚಿತ್ತೂರು ಜಿಲ್ಲೆ ಈ ವಂಶಗಳ ಒಳ ಜಗಳಗಳಲ್ಲಿ ಆಗಾಗ ಕೈ ಬದಲಾಯಿಸುತ್ತ ಹೋಯಿತು.

ಏನೇ ಆದರೂ ಹಿಂದೆಯೇ ಹೇಳಿದಂತೆ ಚೋಳ ರಾಜ ಆದಿತ್ಯ-1 (ಕ್ರಿ.ಶ.871-907) ಪಲ್ಲವರ ಅಪರಾಜಿತನನ್ನು ಸೋಲಿಸಿದಾಗ ಈ ಪ್ರಾಂತದಲ್ಲಿ ಪಲ್ಲವರ ಆಳ್ವಿಕೆ ಕೊನೆಯಾಗಿ ಈ ಜಿಲ್ಲೆಯೂ ಸೇರಿದಂತೆ ಇಡಿಯಾಗಿ ಇದು ಚೋಳ ಸಾಮ್ರಾಜ್ಯದ ತೊಂಡಮಂಡಲಕ್ಕೆ ಸೇರಿಹೋಯಿತು.

ಈ ಜಿಲ್ಲೆಯ ಶ್ರೀಕಾಳಹಸ್ತಿಯಲ್ಲಿ ಮರಣ ಹೊಂದುವುದಕ್ಕೆ ಮೊದಲು ಆದಿತ್ಯನು ಬಹು ಭೂಭಾಗವನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡ. ಹೀಗಾಗಿ ಇವನ ಮಗ ಪರಾಂತಕ-1 (ಕ್ರಿ.ಶ.907-955)ಪಟ್ಟಾಭಿಷಿಕ್ತನಾದಾಗ ಚೋಳ ಸಾಮ್ರಾಜ್ಯ ಉತ್ತರದಲ್ಲಿ ಶ್ರೀಕಾಳಹಸ್ತಿಯಿಂದ ಮದರಾಸಿನವರೆಗೂ ದಕ್ಷಿಣದಲ್ಲಿ ಕಾವೇರಿಯವರೆಗೂ ವಿಸ್ತರಿಸಿದ್ದಿತು. ಕ್ರಿ.ಶ.909-916 ರ ಮಧ್ಯ ಕಾಲದಲ್ಲಿ ಪರಾಂತಕ-1 ನು ವೈದುಂಬರನ್ನೂ ವಿಕ್ರಮಾದಿತ್ಯ-11 ಹಾಗೂ ವಿಜಯಾದಿತ್ಯ-111 ಎಂಬ ಬಾಣ ದೊರೆಗಳನ್ನೂ ಸೋಲಿಸಿ,

ಪೆರುಂಬಾಣಪ್ಪಾಡಿವರೆಗೆ ವಿಸ್ತೃತವಾಗಿದ್ದ ಅವರ ರಾಜ್ಯವನ್ನು-ಪಾಲಾರ್ ನದಿಯ ಉತ್ತರಕ್ಕೆ-ಪಶ್ಚಿಮದಲ್ಲಿ ಪುಂಗನೂರಿನವರೆಗೆ ಹಾಗೂ-ಪೂರ್ವದಲ್ಲಿ ಶ್ರೀಕಾಳಹಸ್ತಿಯವರೆಗೆ ಇದ್ದ ರಾಜ್ಯವನ್ನು-ವಶಪಡಿಸಿಕೊಂಡ.

ಇದರಿಂದಾಗಿ ವೈದುಂಬ ಬಾಣ ದೊರೆಗಳು ಚೋಳರ ಆಕ್ರಮಣಕ್ಕೆ ವಿರುದ್ಧವಾದ ರಾಷ್ಟ್ರಕೂಟದ ಕೃಷ್ಣ-111 ನನ್ನು ಆಶ್ರಯಿಸುವಂತಾಯಿತು. ಹಲವಾರು ಸಾಮಂತರ ಸೇನಾಧಿಪತಿಗಳ ನೆರವಿನಿಂದ ಮೂರನೇ ಕೃಷ್ಣನು ಚೋಳರ ಮೇಲೆ ದಂಡೆತ್ತಿ ನಡೆದದ್ದರಿಂದ ಪರಾಂತಕನಿಗೆ ಹಲವಾರು ಪ್ರದೇಶಗಳು ಕೈ ಬಿಟ್ಟು ಹೋದವು.

ಈ ಜಿಲ್ಲೆಯಲ್ಲಿರುವ ಹಲವಾರು ಶಾಸನಗಳು ಪರಾಂತಕನ ಆಳ್ವಿಕೆಯ ಕೊನೆಗಾಲದವು. ಉದಾಹರಣೆಗೆ ಒಂದು ಎಂದರೆ ಕ್ರಿ.ಶ. 955 ರ ಪುಂಗನೂರಿನ ವನಮಲದಿನ್ನೆಯಲ್ಲಿ ದೊರೆತಿರುವ ಶಾಸನ ಈತನ ಆಳ್ವಿಕೆಯ 48 ನೇ ವರ್ಷದ್ದು.


ಕೃಷ್ಣ-111 ಶತ್ರುರಾಜ್ಯದಲ್ಲಿ ಬಹುಕಾಲವಿರಲ್ಲಿವಾದರೂ ತನ್ನ ದೀರ್ಘ ಆಡಳಿತಕಾಲದಲ್ಲಿ ಆಕ್ರಮಿಸಿದ ತೊಂಡಮಂಡಲದ ಆಳ್ವಿಕೆಯನ್ನು ನೋಡಿಕೊಳ್ಳಲು ಜನರನ್ನು ನಿಯಮಿಸಿ ತನ್ನ ಅಧೀನದಲ್ಲಿಯೇ ಇಟ್ಟುಕೊಂಡ. ಹೀಗೆ ಈ ಜಿಲ್ಲೆಯ ಪುಲಿನಾಡಿನ ಆಳ್ವಿಕೆ ವಜ್ಜರ ದೇವನಿಗೆ ಒಪ್ಪಿಸಲಾಯಿತು. ಮೂರನೇ ಕೃಷ್ಣನ ಕಾಲಕ್ಕೆ ಸೇರಿದ ಹಲವಾರು ಶಾಸನಗಳು ಇಲ್ಲಿ ದೊರೆತಿವೆ. ಅವನ ನಂತರ ಉಂಟಾದ ಗೊಂದಲಕರವಾದ ಪರಿಸ್ಥಿತಿಯಲ್ಲಿ ವಜ್ಜಲ ದೇವ ಅಥವಾ ವಜ್ಜರದೇವನು ದಂಗೆಯೆದ್ದಿರಬೇಕು. ಕಾರಣ ಪುಂಗನೂರಿನ ಬೋದಿನಾಯಕನ ಪಲ್ಲಿಯ ಒಂದು ಶಾಸನ ಇವನನ್ನು ಭೂಮಂಡಲವನ್ನು ಆಳುವವನೆಂದು ಕರೆದಿವೆ. ಆದರೆ ಇವನ ದಂಗೆಯನ್ನು ಅಡಗಿಸಲಾಯಿತು.

ಕೃಷ್ಣ-111 ನಿಗೆ ಕಳೆದುಕೊಂಡ ಭೂಮಿಯನ್ನು ಮರಳಿಪಡೆಯಲು ಕ್ರಿ.ಶ.949-957 ರ ವರೆಗಿದ್ದ ಚೋಳ ರಾಜ ಗಂಡರಾದಿತ್ಯನು ಪ್ರಯತ್ನಿಸಿದರೂ ಫಲಕಾಣಲಿಲ್ಲ-ಅವನ ಮಗ ಅರಿಂಜಯನೂ,ಅವನ ಮಗ ಪರಾಂತಕ-11 ನೂ(975-973)ಈ ಪ್ರಯತ್ನಗಳನ್ನು ಮುಂದುವರಿಸಿದರು. ಚೋಳರ ಪ್ರಯತ್ನಗಳಿಗೆ-ವಿಶೇಷವಾಗಿ ಪರಾಂತಕ-11 ನ ಕಾಲದಲ್ಲಿ ಉತ್ತರದಲ್ಲಿ ಸತ್‌ಫಲ ಕಂಡು ಬಂದು ಅವನ ಮಗ ಉತ್ತಮ ಚೋಳನು (ಕ್ರಿ.ಶ.970-985) ಸಿಂಹಾಸನವನ್ನೇರಿದಾಗ ಇಡೀ ತೊಂಡಮಂಡಲವು ರಾಷ್ಟ್ರಕೂಟರಿಂದ ಚೋಳರ ಹಸ್ತಗತವಾಗಿದ್ದಿತು. ಗಂಡರಾದಿತ್ಯ ಪರಾಂತಕ ಉತ್ತಮ-II (ಸುಂದರಚೋಳ) ಮಧುರಾಂತಕ ಚೋಳರ ಆಳ್ವಿಕೆಯನ್ನು ಸೂಚಿಸುವ ಹಲವು ಶಾಸನಗಳು ಇಲ್ಲಿ ಕಂಡು ಬಂದಿವೆ.

(- ಮುಂದುವರಿಯುವುದು)

**ವೃಕ್ಷೋ ರಕ್ಷತಿ ರಕ್ಷಿತಃ**

**ಗಿಡವೊಂದ ನೆಡುವವನು**
**ದೇವರಾ ಸೇವಕನು**
**ನೆನೆವರವನನು ಜನರು**
**ಅವನೆಂದು ನೋಡದರು**



ತಿರುಮಲೆ ನಾರಾಯಣಗಿರಿಯಲ್ಲಿ
ನೆಲೆಸಿದ ಸ್ವಾಮಿಯವರ ಪಾದಗಳು







ತಿರುಚಾನೂರು ಶ್ರೀಪದ್ಮಾವತಿ ಅಮ್ಮನವರ ಆಲಯದಲ್ಲಿರುವ
ಶ್ರೀ ಸುಂದರರಾಜಸ್ವಾಮಿಯವರಿಗೆ ನಡೆದ ಅವತಾರೋತ್ಸವ
(2021, ಜೂನ್ 29 ರಿಂದ ಜುಲೈ 01 ರ ವರೆಗೆ)



ತಿರುಪತಿ ಶ್ರೀ ಕಪಿಲೇಶ್ವರ ಸ್ವಾಮಿಯವರಿಗೆ ನಡೆದ ಪತ್ರಪುಷ್ಪಯಾಗ ಮಹೋತ್ಸವ
(2021, ಮೇ 26)

# ತಿರುಮಲೆ ಸ್ವಾಮಿಯವರ ಆಲಯದಲ್ಲಿ ನಡೆಯಲಿರುವ ಪವಿತ್ರೋತ್ಸವಗಳು (2021,ಆಗಸ್ಟ್ 17 ರಿಂದ 20 ರ ವರೆಗೆ)






2021,ಜೂನ್ 13 ರಂದು ಜಮ್ಮೂವಿನಲ್ಲಿ ವೈಭವವಾಗಿ ನಡೆದ ಸ್ವಾಮಿಯವರ ಆಲಯ ನಿರ್ಮಾಣ ಶಂಕುಸ್ಥಾಪನೆ, ಈ ಕಾರ್ಯಕ್ರಮದಲ್ಲಿ ಜಮ್ಮೂ ಕಾಶ್ಮೀರ್ ಲೆಫ್ಟ್‌ನೆಂಟ್ ರಾಜ್ಯಪಾಲರು ಶ್ರೀ ಮನೋಜ್‌ಸಿನ್ಹಾ, ಕೇಂದ್ರಮಂತ್ರಿಯಾದ ಶ್ರೀ ಜಿ.ಕಿಷನ್‌ರೆಡ್ಡಿ, ಶ್ರೀ ಜೀತೇಂದ್ರಸಿಂಗ್,ತಿ.ತಿ.ದೇ.ಆಡಳಿತ ಮಂಡಳಿ ಅಧ್ಯಕ್ಷರು ಶ್ರೀ ವೈ.ವಿ.ಸುಬ್ಬಾರೆಡ್ಡಿ, ತಿ.ತಿ.ದೇ. ಕಾರ್ಯನಿರ್ವಹಣಾಧಿಕಾರಿ ಡಾ|| ಕೆ.ಎಸ್.ಜವಹರ್ ರೆಡ್ಡಿ, ಐ.ಏ.ಎಸ್., ಮತ್ತು ಇತರ ಪ್ರತ್ಯೇಕ ಅಧಿಕಾರಿಗಳು





2021, ಜೂನ್ 24 ರಂದು ತಿ.ತಿ.ದೇ. ಸ್ಪೆಸಿಫೈಡ್ ಅಥಾರಿಟಿ ಅಧ್ಯಕ್ಷರಾಗಿ ನಿಯಮಿತರಾದ ತಿ.ತಿ.ದೇ. ಕಾರ್ಯನಿರ್ವಹಣಾಧಿಕಾರಿ ಡಾ|| ಕೆ.ಎಸ್.ಜವಹರ್ ರೆಡ್ಡಿ, ಐ.ಏ.ಎಸ್., ಯವರಿಗೆ ಸ್ವಾಮಿಯವರ ಪ್ರಸಾದಗಳನ್ನು ನೀಡುತ್ತಿರುವ ತಿ.ತಿ.ದೇ. ಅಡಿಷನಲ್ ಕಾರ್ಯನಿರ್ವಹಣಾಧಿಕಾರಿ ಮತ್ತು ತಿ.ತಿ.ದೇ. ಸ್ಪೆಸಿಫೈಡ್ ಅಥಾರಿಟಿ ಕನ್ವಿನರ್ ಶ್ರೀ ಎ.ವಿ.ಧರ್ಮಾರೆಡ್ಡಿ, ಐ.ಡಿ.ಈ.ಎಸ್., ತಿರುಪತಿ ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ಸದಾ ಭಾರ್ಗವಿ,ಐ.ಏ.ಎಸ್., ರವರು




2021,ಜೂನ್ 30 ರಂದು ತಿರುಪತಿಯಲ್ಲಿರುವ ಗೋಸಂರಕ್ಷಣಾ ಶಾಲೆಯನ್ನು ತನಿಖೆ ಮಾಡಿದ ತಿ.ತಿ.ದೇ. ಕಾರ್ಯನಿರ್ವಹಣಾಧಿಕಾರಿ ಡಾ|| ಕೆ.ಎಸ್.ಜವಹರ್ ರೆಡ್ಡಿ, ಐ.ಏ.ಎಸ್., ಯವರು ಮತ್ತು ಉನ್ನತಾಧಿಕಾರಿಗಳು, ನಂತರ ರಾಷ್ಟ್ರೀಯಾ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿರುವ ತಾಳಪತ್ರ ಗ್ರಂಥಗಳನ್ನು ಪರಿಶೀಲಿಸಿದರು.

# ವಿಶ್ವದ ವೈಕುಂಠ ಎಂಬ ನಂಬಿಕೆಗೆ ಪಾತ್ರವಾದ ಕ್ಷೇತ್ರ ಜಗನ್ನಾಥ ಪುರಿ

- ಸುಮ ಚಂದ್ರಶೇಖರ್
98800 60354



ವಿಶ್ವದ ವೈಕುಂಠ ಎಂಬ ನಂಬಿಕೆಗೆ ಪಾತ್ರವಾದ ಕ್ಷೇತ್ರ ಜಗನ್ನಾಥಪುರಿ ಒರಿಸ್ಸಾ. (ಈಗಿನ ಒಡಿಶಾ) ಕಲೆ, ಸಾಹಿತ್ಯ, ಸಂಸ್ಕೃತಿಗಳ ಸಮೃದ್ಧ ರಾಜ್ಯ. ಬಂಗಾಳಕೊಲ್ಲಿಯ ಸಮುದ್ರ ತೀರದಲ್ಲಿರುವ ಈ ರಾಜ್ಯ ಕ್ರಿ.ಪೂ. 5 ಮತ್ತು 4ನೇ ಶತಾಬ್ಧಿಯಲ್ಲಿ ದೇಶ ವಿದೇಶಗಳ ಸರಕು ಸಾಗಾಟದ ಬಂದರು ಪ್ರದೇಶವಾಗಿತ್ತು. ಮೌರ್ಯ ಅರಸ ಅಶೋಕ ಒಡಿಶಾದಲ್ಲಿ ಇತಿಹಾಸದ ಮಹಾಕ್ರೂರ ಯುದ್ಧವನ್ನು ಕಾಣಿಸಿದ್ದ. ಈ ಯುದ್ಧದ ಸಾವು ನೋವಿನಿಂದನೊಂದು ಮುಂದಿನ ದಿನಗಳಲ್ಲಿ ಅಶೋಕ ಬೌದ್ಧಧರ್ಮ ಸ್ವೀಕರಿಸಿ ಪ್ರಚಾರ ಕಾರ್ಯದಲ್ಲಿ ನಿರತನಾದುದು ಇತಿಹಾಸದ ದೊಡ್ಡ ಬೆಳವಣಿಗೆ.

ಒಡಿಶಾದ ಸಮುದ್ರ ತೀರದಲ್ಲಿನ ಪುರಿಜಗನ್ನಾಥ ಪವಿತ್ರ ಧಾಮ್ ಕ್ಷೇತ್ರವನ್ನು ಪುರಾಣಗಳಲ್ಲಿ ಭೂವೈಕುಂಠ ಎಂದು ಕರೆಯಲಾಗಿದೆ. ಇದು ಶ್ರೀಕೃಷ್ಣನಿಗೆ ಸಮರ್ಪಿತ ಕ್ಷೇತ್ರವೂ ಹೌದು. ಇದನ್ನು ನೀಲಾಂಚಲಧಾಮ್ ಎಂದೂ ಹೇಳುತ್ತಾರೆ.

**ಪುರಿ ಕ್ಷೇತ್ರದಲ್ಲಿ ಭಗವಾನ್ ವಿಷ್ಣು ಪುರುಷೋತ್ತಮ ನೀಲಮಾಧವ ರೂಪದಲ್ಲಿ ಅವತರಿಸಿರುವ ನಂಬಿಕೆ ಭಕ್ತರದ್ದು. ತೀರ್ಥಸ್ಥಳ ಜಗನ್ನಾಥ ಪುರಿ ಒಂದೊಮ್ಮೆ ಕಳಿಂಗದ ರಾಜಧಾನಿಯೂ ಆಗಿತ್ತು. ಧರ್ಮಗ್ರಂಥಗಳಲ್ಲಿ ಇದನ್ನು ಶಂಖಕ್ಷೇತ್ರ, ಶ್ರೀ ಶ್ರೀ ಶ್ರೀಕ್ಷೇತ್ರ , ಪುರುಷೋತ್ತಮ ಕ್ಷೇತ್ರ. ಇತ್ಯಾದಿಯಾಗಿಯೂ ಕರೆಯಲಾಗಿದೆ.**

ಭಗವಾನ್ ಜಗನ್ನಾಥ, ಸಹೋದರ ಬಲಭದ್ರ (ಬಲರಾಮ) ಮತ್ತು ತಂಗಿ ಸುಭದ್ರಾದೇವಿ ಇವರ ಮೂರ್ತಿಗಳು ಇಲ್ಲಿನ ದೇವಸ್ಥಾನದಲ್ಲಿದೆ. ಈ ಮುಂದಿನ ಸಾವಿರ ವರ್ಷಗಳಷ್ಟು ಹಳೆಯದೂ ಹೌದು. ಆಷಾಢಮಾಸದ ಶುಕ್ಲಪಕ್ಷದ ದ್ವಿತೀಯದಂದು ವಿಶ್ವ ಖ್ಯಾತಿಯ ಜಗನ್ನಾಥ ಪುರಿ ರಥಯಾತ್ರೆ ಜರುಗುತ್ತದೆ.

ಪುರಿ ಕ್ಷೇತ್ರದಲ್ಲಿ ಭಗವಾನ್ ವಿಷ್ಣು ಪುರುಷೋತ್ತಮ ನೀಲ ಮಾಧವ ರೂಪದಲ್ಲಿ ಅವತರಿಸಿರುವ ನಂಬಿಕೆ ಭಕ್ತರದ್ದು. ತೀರ್ಥಸ್ಥಳ ಜಗನ್ನಾಥಪುರಿ ಒಂದೊಮ್ಮೆ ಕಳಿಂಗದ ರಾಜಧಾನಿಯೂ ಆಗಿತ್ತು. ಧರ್ಮಗ್ರಂಥಗಳಲ್ಲಿ ಇದನ್ನು ಶಂಖಕ್ಷೇತ್ರ, ಶ್ರೀ ಶ್ರೀ ಶ್ರೀ ಕ್ಷೇತ್ರ, ಪುರುಷೋತ್ತಮ ಕ್ಷೇತ್ರ ಇತ್ಯಾದಿಯಾಗಿಯೂ ಕರೆಯಲಾಗಿದೆ. ಭಾರತದ ಚಾರ್‌ಧಾಮ್‌ಗಳಲ್ಲಿ ಜಗನ್ನಾಥ ಪುರಿ ಕೂಡಾ ಒಂದೆನಿಸಿದೆ. ಈ ಕ್ಷೇತ್ರ ಕಲಿಯುಗದ ಧಾಮ್ ಆಗಿರುವುದು ಎನ್ನುತ್ತಾರೆ.

ಶಂಕರಾಚಾರ್ಯರು ದೇಶದಲ್ಲಿ ಸ್ಥಾಪಿಸಿದ ನಾಲ್ಕು ಮಠಗಳಲ್ಲಿ ಒಂದು ಮಠ ಪುರಿಯಲ್ಲೂ ಇದ್ದು ಅದನ್ನು 'ಗೋವರ್ಧನ ಪೀಠ' ಹೆಸರಿನಲ್ಲಿ ಕರೆಯಲಾಗಿದೆ. ಸಿಖ್ಖರ ಪ್ರಥಮ ಗುರು ನಾನಕ್ ದೇವ ಅವರೂ ಇಲ್ಲಿಗೆ ಬಂದಿದ್ದು ಈ ಪವಿತ್ರಸ್ಥಳ 'ನಾನಕ್ ಮಠ್ ಜಗನ್ನಾಥ್ ಮಂದಿರದ ಎದುರುಗಿದೆ. ಚೈತನ್ಯ ಮಹಾಪ್ರಭು ಇಲ್ಲಿ ದೀರ್ಘಕಾಲ ವಾಸವಿದ್ದು ಭಕ್ತಸಾಧನಗೈದರು.

ಕಳಿಂಗ ರಾಜಾಚೋಡ ಗಂಗ್ ಕಾಲದಲ್ಲಿ ನಿರ್ಮಿಸಲಾದ 65.ಮೀ ಎತ್ತರದ ಶ್ರೀಜಗನ್ನಾಥ ಮಂದಿರ ಇಲ್ಲಿನ ಪ್ರಮುಖ ಮತ್ತು ಸರ್ವಾಧಿಕ ವಿಶಾಲ ಮಂದಿರ ಆಗಿದೆ. ಇಲ್ಲಿ ಭಗವಾನ್

ಜಗನ್ನಾಥ, ಸುಭದ್ರಾ ಮತ್ತು ಬಲರಾಮರ ಮರದಿಂದ ನಿರ್ಮಿಸಲಾದ ದಿವ್ಯ ಮೂರ್ತಿಗಳಿವೆ. ಪ್ರತೀದಿನ ಪೂಜೆ-ಆರತಿಯ ಸಮಯ ದಲ್ಲಿ ಭಕ್ತಿ ಪೂರ್ಣ ಸಂಗೀತ ಕಾರ್ಯಕ್ರಮಗಳು ಜರುಗುವುದು.



## ಪುರಿ ಜಗನ್ನಾಥರಥ ಯಾತ್ರೆಯು ಆರಂಭ

ಒಂಭತ್ತು ದಿನಗಳ ಕಾಲ ಈ ರಥಯಾತ್ರೆಯ ಸಂಭ್ರಮ ಇರುತ್ತದೆ. ಭಗವಾನ್ ಜಗನ್ನಾಥ್ ಅಣ್ಣ ಬಲ ಭದ್ರ (ಬಲರಾಮ) ಮತ್ತು ತಂಗಿ ಸುಭದ್ರೆಯರ ಪ್ರತಿಮೆಗಳನ್ನು ರಥದಲ್ಲಿರಿಸಿ ರಥಯಾತ್ರೆಯು ಆರಂಭವಾಗುತ್ತದೆ. ಮೂವರು ದೇವರುಗಳ ಮೂರ್ತಿಗಳನ್ನು ಶೃಂಗರಿಸಿ ರಥದಲ್ಲಿರಿಸಿ 2 ಕಿ.ಮೀ ದೂರದ 'ಗುಂಡಿಚಾ' ಮಂದಿರಕ್ಕೆ ತೆರಳಿ ಅಲ್ಲಿ ಒಂಭತ್ತು ದಿನಗಳ ಕಾಲ ಈ ಮೂರ್ತಿಗಳನ್ನು ಇರಿಸಲಾಗುತ್ತದೆ. ನಂತರ ಅಲ್ಲಿಂದ ಮತ್ತೆ ವಾಪಸ್ಸು ರಥಗಳು ಬರುತ್ತವೆ.

ವಿಶೇಷ ಅಂದರೆ ಭಗವಾನ್ ಜಗನ್ನಾಥರ ರಥ ಯಾತ್ರೆಯ ರಥಗಳಲ್ಲಿ ಮರಕ್ಕೆ ಮಾತ್ರ ಆಧ್ಯತೆ. ಯಾವುದೇ ಮೊಳೆಗಳನ್ನು ಬಡಿಯುವುದಿಲ್ಲ. ಲೋಹಗಳ ಬಳಕೆಯೂ ಇಲ್ಲ. ಈ ಮೂರು ರಥಗಳನ್ನು ಅಕ್ಷಯ ತೃತೀಯದಿಂದ ನಿರ್ಮಿಸಲು ಆರಂಭ ವಾಗುತ್ತದೆ. ವಸಂತ ಪಂಚಮಿಯಿಂದ ಮರಗಳ ಆಯ್ಕೆ ಶುರುವಾಗುತ್ತದೆ. ಹಳೆಯ ರಥಗಳ ಮರದ ತುಂಡುಗಳನ್ನು ಭಕ್ತರು ಖರೀದಿಸುತ್ತಾರೆ. ಹಾಗೂ ತಮ್ಮ ಮನೆಯ ಕಿಟಕಿ-ಬಾಗಿಲುಗಳಿಗೆ ಬಳಸಿ ಕೊಳ್ಳುತ್ತಾರೆ. ಹನ್ನೆರಡು, ಹದಿನಾಲ್ಕು ವರ್ಷಗಳಿ ಗೊಮ್ಮೆ ದೇವರ ಮರದ ಮೂರ್ತಿ ಗಳನ್ನು ಬದಲಿಸಲಾಗುತ್ತದೆ. ಮೂರ್ತಿಗಳ ನಿರ್ಮಾಣಕ್ಕೆ ಮರಗಳ ಆಯ್ಕೆಯಲ್ಲ ಕೆಲವು ವಿಧಿ-ನಿಯಮಗಳು ಇರುತ್ತದೆ. (ಎಲ್ಲಾ ಮರಗಳನ್ನು ಬಳಸ ಲಾಗುವುದಿಲ್ಲ) ಆ ಮರದ ಸಮೀಪ ಕೆರೆ ಇರಬೇಕು. ಸ್ಮಶಾನ ಇರ ಬೇಕು.ಬುಡದಲ್ಲಿ ಹುತ್ತ ಇರಬೇಕು. ಸುತ್ತ ಮೂರು ಬೆಟ್ಟಗಳು ಸುತ್ತು ವರಿದಿರಬೇಕು ಇತ್ಯಾದಿ.



## ಭೋಜನ ತಯಾರಿ ಕೊಠಡಿ

ಜಗನ್ನಾಥ ಪುರಿ ಮಂದಿರದ ಅಡುಗೆ ಕೋಣೆಗೆ ವಿಶೇಷ ಗೌರವದ ಸ್ಥಾನವಿದೆ. ಇಲ್ಲಿ 'ಮಹಾಪ್ರಸಾದ' ತಯಾರಿಸಲು ವಿಶೇಷ ಕೊಠಡಿ ಗಳಿವೆ. ಬೇಳೆ, ಅಕ್ಕಿ, ಮೊಸರು, ಪಾಯಸ, ಇವೆಲ್ಲ ಮಹಾಪ್ರಸಾದ ರೂಪದಲ್ಲಿ ಪ್ರಸಿದ್ಧಿ ಪಡೆದಿದ್ದು, ಒಂದು ಪಾಲು ದೇವರಿಗೆ, ಉಳಿದುದು ಭಕ್ತರಿಗೆ ಕಡಿಮೆ ಬೆಲೆಗೆ ಹಂಚಲಾಗುತ್ತದೆ. ಪ್ರತೀ ದಿನ 72 ಕ್ವಿಂಟಾಲ್ ಅಕ್ಕಿ ಬೇಯಿಸ ಲಾಗುತ್ತದೆ. ಇಲ್ಲಿ ನಾಲ್ಕು ನೂರು (400) ಅಡುಗೆ ಕೋಣೆಗಳಿವೆ.

ರಥಯಾತ್ರೆಯ ಸಂದರ್ಭದಲ್ಲಿ ಪ್ರತೀದಿನ ಲಕ್ಷ 14 ಸಾವಿರದಷ್ಟು ಭಕ್ತ ಜನ ಈ ಅಡುಗೆ ಕಾರ್ಯಕ್ರಮಗಳಲ್ಲಿ ತಮ್ಮನ್ನು ತೊಡಗಿಸುತ್ತಾರೆ. ಮಂದಿರದ ಅಂಗಣದಲ್ಲಿ ವಿಮಲಾದೇವಿಯ ಶಕ್ತಿ ಪೀಠವಿದೆ. ವಿಷ್ಣುವಿಗೆ ಇರಿಸಿದ ನೈವೇ ದ್ಯವನ್ನು ವಿಮಲಾದೇವಿ ಮೊದಲಿಗೆ ಸ್ವೀಕರಿಸುತ್ತಾಳೆ.





# ಆಯುರ್ವೇದ ಮತ್ತು ನಾವು

2

- ಡಾ || ಪ್ರದೀಪ್ ಕುಮಾರ್ ಹೆಬ್ರಿ



ಆಯುರ್ವೇದ ವೈದ್ಯ ಪದ್ಧತಿಯ ಲಕ್ಷಣಗಳೆಂದರೆ ರೋಗಕ್ಕೆ ಕಾರಣವಾದುದನ್ನು ತ್ಯಜಿಸುವುದು. ರೋಗಲಕ್ಷಣ ಗಳಿಂದ ವಿಷಮ ದೋಷಗಳ ವ್ಯತ್ಯಾಸವನ್ನು ಕಂಡು ಹಿಡಿಯು ವುದು ಮತ್ತು ಅವುಗಳನ್ನು ಸಮಸ್ಥಿತಿಯಲ್ಲಿರಿಸಿ ಧಾತುಗಳ ಬಲ ವನ್ನು ಹೆಚ್ಚಿಸುವುದಾಗಿದೆ. ರೋಗಕ್ಕೆ ಕಾರಣವಾದವುಗಳನ್ನು ತ್ಯಜಿಸಿ,ದೋಷಗಳ ವ್ಯತ್ಯಾಸವನ್ನು ಕಂಡು ಹಿಡಿದು ಹೆಚ್ಚಿಸಿಕೊ ಳ್ಳುವುದು ಎಲ್ಲಾ ಕಾಲದಲ್ಲಿಯೂ ಆರೋಗ್ಯದ ದೃಷ್ಟಿಯಿಂದ, ಮುಖ್ಯವಾದುದು.ಈ ನೀತಿ ಎಲ್ಲ ವರ್ಗ ವರ್ಣಗಳಿಗೂ ಅನ್ವಯಿ ಸುತ್ತದೆ.ಶರೀರದಲ್ಲಿ ಉತ್ಪತ್ತಿಯಾಗುವ ವಾಯು, ಮಲಮೂತ್ರ ಇತ್ಯಾದಿಗಳ ವೇಗಗಳನ್ನು ತಡೆಯುವುದು ಅಥವಾ ಅವುಗಳನ್ನು ಬಲವಂತವಾಗಿ ಬರಮಾಡಿಕೊಳ್ಳಲು ಪ್ರಯತ್ನಿಸುವುದು ರೋಗಕ್ಕೆ ಮುಖ್ಯ ಕಾರಣವಾಗಿ ಮಾರ್ಪಾಡಾಗುತ್ತದೆ.

ಶರೀರದ ಕ್ರಿಯೆಯಲ್ಲಿ ವ್ಯತ್ಯಾಸವಾಗಿ ಬರುವ ರೋಗಕ್ಕೆ ನಿಜರೋಗವೆಂದು ಕರೆಯುತ್ತಾರೆ. ಅಪಘಾತ,ಬೆಂಕಿ,ವಿಷ ಇತ್ಯಾದಿ ಬೇರೆ ಬೇರೆ ಕಾರಣಗಳಿಂದ ಸಂಭವಿಸುವ ರೋಗಕ್ಕೆ ಆಗಂತುಕ ರೋಗ ಎಂದು ಕರೆಯುತ್ತಾರೆ. ಈ ಆಗಂತುಕ ರೋಗದಲ್ಲಿ ಬಾಧೆಯಾದ ನಂತರ ದೋಷ ವೈಷಮ್ಯ ಕಂಡು ಬರುತ್ತದೆ. ದೋಷಕ್ಕೆ ತಕ್ಕಂತೆ ಮತ್ತು ವ್ಯಾಧಿಗೆ ತಕ್ಕಂತೆ ಇದಕ್ಕೆ ಚಿಕಿತ್ಸೆಯನ್ನು ಮಾಡುತ್ತಾರೆ.

ದೋಷಕ್ಕೆ ತಕ್ಕಂತೆ ಮಾಡುವ ಚಿಕಿತ್ಸೆಗೆ "ದೋಷ ಪ್ರತ್ಯ ನೀಕ" ಎನ್ನುತ್ತಾರೆ. ಇದರಲ್ಲಿ ರೋಗವು ತನ್ನ ಸ್ಪಷ್ಟರೂಪವನ್ನು ಹೊಂದುವುದಕ್ಕೆ ಮೊದಲು ಶೋಧನ ಅಥವಾ ಶಮನ ಕ್ರಿಯೆ ಗಳಿಂದ ದೋಷಗಳನ್ನು ಸರಿಪಡಿಸುತ್ತಾರೆ.ವ್ಯಾಧಿಗೆ ತಕ್ಕಂತೆ ಮಾಡುವ ಚಿಕಿತ್ಸೆಗೆ "ವ್ಯಾಧಿ ಪ್ರತ್ಯನೀಕ" ಎನ್ನುತ್ತಾರೆ ಇದರಲ್ಲಿ ರೋಗವು ಸ್ಪಷ್ಟವಾಗಿ ಮುಂದುವರಿಯುತ್ತಿದ್ದರೆ ರೋಗಹರಣ ಮಾಡಲು ಚಿಕಿತ್ಸೆಗೆ ಸಿದ್ಧೌಷಧಗಳನ್ನು ಬಳಸುತ್ತಾರೆ.

ಹಲವಾರು ರೋಗಗಳ ನಿವಾರಣೆಗೆ ಔಷಧಗಳ ಪ್ರಯೋಗ ಮಾತ್ರ ಸಾಕಾಗುವುದಿಲ್ಲ. ಆ ಸಂದರ್ಭದಲ್ಲಿ ಕ್ಷಾರ ಕರ್ಮ, ಶಸ್ತ್ರಕರ್ಮ ಮತ್ತು ಅಗ್ನಿಕರ್ಮಗಳೆಂಬ ವಿಧಾನಗಳನ್ನು ಬಳಸುತ್ತಾರೆ ಕ್ಷಾರ ಮತ್ತು ಅಗ್ನಿ ಕರ್ಮಗಳು ದುರ್ಮಾಂಸ, ವಿಷ ದಂಸ,ಮುಂತಾದುವುಗಳನ್ನು ಸುಡುವುದರಲ್ಲಿಯೂ ಶಸ್ತ್ರ ಕರ್ಮವು ಶಲ್ಯಾಹರಣ ವಿದ್ರಧಿ (ಕುರು ಅಥವಾ ಬಾವು) ಅಧಿ ಮಾಂಸ ಅಸ್ಥಿಭಗ್ನ ಮುಂತಾದುವುಗಳಲ್ಲೂ ಉಪಯೋಗಿಸ ಲ್ಪಟ್ಟಿದೆ.

ಇವುಗಳೊಡನೆ ರೋಗಗಳನ್ನು ಕಂಡು ಹಿಡಿದು ಚಿಕಿತ್ಸಿಸಲು ನಾಡೀ ಪರೀಕ್ಷೆ, ಪಂಚಕರ್ಮ,ಲೋಹಾದಿಗಳ ಭಸ್ಮ ಪ್ರಯೋಗಗಳೂ ಬಳಕೆಯಲ್ಲಿವೆ. ಆಯುರ್ವೇದ ವೈದ್ಯ ವಿಜ್ಞಾ ನದ ವೈಶಿಷ್ಟ್ಯವೆಂದರೆ ವೈದ್ಯರು ತಮಗೆ ಬೇಕಾದ ಔಷಧಗಳನ್ನು ತಾವೇ ತಯಾರು ಮಾಡಿಕೊಳ್ಳುವುದಾಗಿದೆ ಆಹಾರಕ್ಕೆ ಸಂಬಂ ಧಿಸಿದಂತೆ ಏಕ ಮೂಲಿಕಾ ಪ್ರಯೋಗ ಪಥ್ಯ ಹಾಗೂ ಆಯಾ ಋತುಗಳಿಗೆ ತಕ್ಕಂತೆ ಆಹಾರ ವಿಹಾರದ ನಿಯಮಗಳಿವೆ.

ಕೇವಲ ಇಷ್ಟು ಮಾತ್ರವಲ್ಲದೆ.ದೀರ್ಘಾಯಸ್ಸು ಸ್ಮೃತಿ ಮೇಧಾಶಕ್ತಿ ಮುಂತಾದವುಗಳನ್ನು ಪಡೆಯಲು ರಸಾಯನ ಪ್ರಯೋಗಗಳಿವೆ. ಮನುಷ್ಯ ಸದಾ ನೆಮ್ಮದಿ ಹಾಗೂ ಸಂತೃಪ್ತಿ ಯಲ್ಲಿದ್ದು ತನ್ನ ವಂಶದ ಅಭಿವೃದ್ಧಿ ಹಾಗೂ ಸುಖ - ಸಂತೋಷ ಕ್ಕಾಗಿ ಸತ್ ಸಂತಾನವನ್ನು ಪಡೆಯಲು ವಾಜೀಕರಣ ಎಂಬ ವಿಧಿಯೂ ಇದೆ. ಇವೆಲ್ಲವನ್ನೂ ಒಳಗೊಂಡಿರುವ ಆಯುರ್ವೇದ ವನ್ನು ಶಲ್ಯ,ಶಾಲಾಕ್ಯ, ಕಾಯಚಿಕಿತ್ಸಾ, ಭೂತವಿದ್ಯಾ, ಕೌಮಾರ ಭೃತ್ಯ ಅಗದ ತಂತ್ರ (ವಿಷಚಿಕಿತ್ಸೆ), ರಸಾಯನ ತಂತ್ರ ಮತ್ತು ವಾಜೀಕರಣ ತಂತ್ರಗಳೆಂದು ಎಂಟು ವಿಭಾಗಗಳಾಗಿಸಿದ್ದಾರೆ.

ವಿಜ್ಞಾನದ ರೀತ್ಯಾ ಊರ್ಜೆ ಮತ್ತು ದ್ರವ್ಯದಿಂದ ವ್ಯಕ್ತವಾದ ಮೊದಲ ಗುಣವೇ ಗುರುತ್ವ. ಇಂದಿನ ವೈಜ್ಞಾನಿಕ ನಿಲುವಿನಂತೆ ಏಕೀಕೃತ ಬಲ - ಕ್ಷೇತ್ರದಿಂದ ಬೇರ್ಪಟ್ಟ ಮೊದಲ ಬಲವೇ ಗುರುತ್ವ ಇದರಂತೆಯೇ ಪುರಾಣಗಳ ಪ್ರಕಾರ, ಬ್ರಹ್ಮನೇ ಮೊತ್ತ ಮೊದಲು ಹೊರಬಂದು, ವಿಶ್ವ ಸೃಷ್ಟಿಯನ್ನು ಸಂಕೇತಿಸಿದನು. ವೇದಗಳು ಈ ಬ್ರಹ್ಮನನ್ನು ಸರ್ವೋಚ್ಚ ಶಕ್ತಿ ಎನ್ನಲಿಲ್ಲ. ಹಾಗೆಯೇ ಗುರುತ್ವವೂ ಬಲ - ಕ್ಷೇತ್ರದ ಒಂದು ಆಲೋಕ ಮಾತ್ರವೇ ಹೊರತು ವಿಜ್ಞಾನದಲ್ಲಿ ಸರ್ವೋಚ್ಚ ಬಲ ಕ್ಷೇತ್ರವಲ್ಲ-

## ಬ್ರಹ್ಮನ ಕೆಲ ಹೆಸರುಗಳು ಹಾಗೂ ಮುಖಗಳು

ಬ್ರಹ್ಮನ ಬಗ್ಗೆ ಹೆಚ್ಚು ತಿಳಿದುಕೊಳ್ಳಬೇಕೆಂದರೆ ಮೊದಲು ಬ್ರಹ್ಮನ ಕೆಲ ಹೆಸರುಗಳಾದ ಹಿರಣ್ಯಗರ್ಭ ನಾಭಿಜ, ಕಾಂಚ ಇತ್ಯಾದಿಗಳನ್ನು ಅರ್ಥ ಮಾಡಿಕೊಳ್ಳಬೇಕು.

ಹಿರಣ್ಯಗರ್ಭವೆಂದರೆ ಆಂತರಿಕ ಜಡ (ಇನರ್ಟ್ ಇಂಟೀರಿಯರ್) ಅಥವಾ ಅಪ್ರವರ್ತಕ ಗರ್ಭ. ಹಿರಣ್ಯ = ಚಿನ್ನ =ಜಡ. ಹಿರಣ್ಯವೆಂದರೆ ಚಿನ್ನದ ಗುಣವಾದ ಅದರ ಜಡತ್ವ ಅಥವಾ ಸ್ಥಿರತೆ.

ಬ್ರಹ್ಮವೆಂದರೆ =ಬೃಂಹಣಾದಿದಾದುದು = ಬಹಳ ದೊಡ್ಡದು. ವಿಜ್ಞಾನ ಹೇಳುತ್ತದೆ, ಗುರುತ್ವಕ್ಕೆ ದೀರ್ಘ (ಬಹುತೇಕ ಅನಂತ) ವ್ಯಾಪ್ತಿ ಇದೆ. ಗುರುತ್ವವು ಬೃಂಹ (ಬಹಳ ದೊಡ್ಡದ್ದು). ವಿಷ್ಣು ಪುರಾಣದಲ್ಲಿ ಪರಾಶರರು ಬ್ರಹ್ಮಶಬ್ದವು 'ವೃಹ' (ಬೃಹ)ದಿಂದಾದ್ದು ಎನ್ನುತ್ತಾರೆ. ಅದು ವೃದ್ಧಿಸುತ್ತಾ ಅನಂತವಾಗುವುದರ ದ್ಯೋತಕ.

**ನಾಭಿಜ** ಎಂದರೆ ಕೇಂದ್ರದಿಂದ ಉದಯಿಸುವುದು.

ಕಾಂಚವೆಂದರೆ ಯಾರು ಬಗ್ಗುತ್ತಾರೋ ಅವರು.

ಹಿರಣ್ಯಗರ್ಭ - ನಾಲ್ಕನೆಯ ಆಯಾಮದ ದೇಶ ಕಾಲದ ವಕ್ರೀಭಾವ

# ಬ್ರಹ್ಮ ಗುರುತ್ವ


- ಹೇಮಂತ್ ಕುಮಾರ್ ಜಿ.
89717 74594

ಹಿರಣ್ಯಗರ್ಭ ಎಂಬ ಜಡ ಗರ್ಭವು ಎಲ್ಲೆಡೆ ವಕ್ರಿಯಾಗಿರುತ್ತದೆ. (ಅಂಡಾಕಾರ). ಇದು ನಾಲ್ಕನೆಯ ಆಯಾಮದ ದೇಶಕಾಲವಾಗಿದ್ದು, ಇದರೊಳಗೇ ವಿಶ್ವದ ಉಗಮ. ನಾಲ್ಕನೆಯ ಆಯಾಮದ ದೇಶಕಾಲವು ವಿಶ್ವದ ಗರ್ಭವಿದ್ದಂತೆ. ಹಿರಣ್ಯಗರ್ಭವು ದೇಶಕಾಲವಾಗಿದ್ದು (ಸ್ಪೇಸ್-ಟೈಮ್), ಬ್ರಹ್ಮವು ಗುರುತ್ವವಾದರೆ, ಇವೆರಡು ಹೇಗೆ ಹೊಂದುತ್ತವೆ? ಗುರುತ್ವವು ಬಲ - ಕ್ಷೇತ್ರ. ಈ ಬಲ ಕ್ಷೇತ್ರಗಳೇ ರುದ್ರರು. ಆದರೆ ಈ ವಾದದಲ್ಲಿ ಬ್ರಹ್ಮನು ರುದ್ರನಲ್ಲ.

ಐನ್‌ಸ್ಟೈನ್ ಸಾಧಿಸಿದ್ದೇನೆಂದರೆ ಕಾಲದೇಶದ ವಕ್ರೀಭಾವವು (ಹಿರಣ್ಯಗರ್ಭ ) ಗುರುತ್ವವಾಗಿ ಕಂಡು ಬರುತ್ತದೆ (ಬ್ರಹ್ಮ) ಹಾಗೂ ಗುರುತ್ವವು ನಿಜವಾದ ಬಲ - ಕ್ಷೇತ್ರವಲ್ಲ (ರುದ್ರ). ಗುರುತ್ವವು ನಿಜವಾದ ಬಲ - ಕ್ಷೇತ್ರವಲ್ಲ ಎಂದು ಐನ್‌ಸ್ಟೈನ್ ತೋರಿಸಿಕೊಟ್ಟರೆ, ವೇದಾದಿ ಸಾಹಿತ್ಯವು ಹಿರಣ್ಯಗರ್ಭ ಮತ್ತು ಬ್ರಹ್ಮ ಎಂಬುದು ಒಂದೇ ಪರಮಾತ್ಮನ ವಿವಿಧ ಹೆಸರುಗಳು ಎಂದಿವೆ.

## ಕಾಂಚ - ದೇಶಕಾಲ ವಕ್ರೀಭಾವದ ಬಗ್ಗುವಿಕೆ

ಕಾಂಚವೆಂದರೆ ಯಾವುದು ಬಗ್ಗುತ್ತದೆಯೋ ಅಥವಾ ನಾಶವಾಗುತ್ತದೆಯೋ ಅದು. ಪುರಾಣಗಳ ಪ್ರಕಾರ ಬ್ರಹ್ಮ ಅಥವಾ ಹಿರಣ್ಯಗರ್ಭವು



ಶಿವ ಮತ್ತು ಶಕ್ತಿಯರ ಮುಂದೆ ಬಗ್ಗುತ್ತದೆ. ಶಿವವೆಂದರೆ ಊರ್ಜೆ (ಎನರ್ಜಿ) ಮತ್ತು ಶಕ್ತಿ ಎಂದರೆ ಸಂವೇಗ (ಮೊಮೆಂಟಮ್)ವಿಜ್ಞಾನ ಹೇಳುವಂತೆ ದೇಶಕಾಲ ವಕ್ರೀಭಾವವು ಊರ್ಜೆಯು ಸಂವೇಗದಿಂದ ಅಥವಾ ದಟ್ಟವಾದ ವಸ್ತುಗಳಿಂದ (ಮಾಯೆ) ಬಗ್ಗುತ್ತದೆ.

## ಬ್ರಹ್ಮನಿಂದ ವಾಮದೇವ ರುದ್ರ ಸೃಷ್ಟಿ

ಗುರುತ್ವ ಬಲ - ಕ್ಷೇತ್ರವಾದ ಬ್ರಹ್ಮನು ಕೇವಲ ದೇಶಕಾಲ ವಕ್ರೀಭಾವದ ವಿಕಾಸವಾದರೆ, ಆ ಬ್ರಹ್ಮನು ಹೇಗೆ ಬಲ - ಕ್ಷೇತ್ರ ಅಥವಾ ರುದ್ರನಾಗಲು ಸಾಧ್ಯ?

ಪುರಾಣಗಳು ಹೇಳುವಂತೆ ಬ್ರಹ್ಮನು ವಾಮದೇವ ರುದ್ರನನ್ನು ಸೃಷ್ಟಿಸಿದ. ನಾವೀಗಾಗಲೇ ವಾಮದೇವ ರುದ್ರನನ್ನು ಗುರುತ್ವಾಕರ್ಷಣ ಬಲ - ಕ್ಷೇತ್ರಕ್ಕೆ ಸಮೀಕರಿಸಿದ್ದೇವೆ. ಹಾಗಾಗಿ ದೇಶಕಾಲ ವಕ್ರೀಭಾವದ ಕಾಂಚ ಅಥವಾ ಬಗ್ಗುವಿಕೆಯು (ಅಂಡಾಕಾರದ ಹಿರಣ್ಯಗರ್ಭ ) ವಾಮದೇವರುದ್ರನನ್ನು (ಗುರುತ್ವ) ಉಂಟುಮಾಡುತ್ತದೆ.

## ಬ್ರಹ್ಮ - ಗುರುತ್ವ

ವಿಜ್ಞಾನದ ರೀತ್ಯಾ, ಗುರುತ್ವಕ್ಕೆ ಅತಿವ್ಯಾಪ್ತಿ ಇದೆ. ಅದು ಕೇಂದ್ರದತ್ತ ಎಳೆಯುತ್ತದೆ. ಗುರುತ್ವವು ಆಕಾಶವನ್ನೂ ಬಗ್ಗಿಸುತ್ತದೆ ಹಾಗೂ ಬೆಳಕನ್ನು ತನ್ನತ್ತ ಎಳೆಯುತ್ತದೆ.ಇದು ಜಡ ಸ್ಥಿತಿಯ (ಇನರ್ಷಿಯಾ ) ಅವಳಿ ಏಕೆಂದರೆ ಎಲ್ಲಾ ಊರ್ಜೆಗಳು ಹಾಗೂ ದ್ರವ್ಯಗಳು ಎರಡೂ ಗುಣಗಳನ್ನು ಹೊಂದಿರುತ್ತವೆ.

ಈ ವಿವರಣೆಗಳು ಬ್ರಹ್ಮನಿಗೆ ಚೆನ್ನಾಗಿ ಹೊಂದುತ್ತವೆ. ಬೃಂಹವೆಂದರೆ ಬಹಳ ದೊಡ್ಡದು ಅಥವಾ ಬಹಳ ಮಹತ್ತರವಾದದು. ಇದು ಗುರುತ್ವದ ಶ್ರೇಣಿಯ ವಿವರಣೆಗೆ ಸರಿಯಾಗುತ್ತದೆ. ನಾಭಿ - ಜ ಎಂದರೆ ಯಾವುದು ಕೇಂದ್ರದಿಂದ ಉದಯಿಸುತ್ತದೋ, (ಅಥವಾ ತನ್ನ ಕೇಂದ್ರದತ್ತ ವಸ್ತುಗಳನ್ನು ಎಳೆದುಕೊಳ್ಳುತ್ತದೆ) ಕಾಂಚ ಎಂದರೆ ಯಾವುದು ಬಗ್ಗುತ್ತದೋ/ವಕ್ರವಾಗುತ್ತದೋ ಅದು. ಗುರುತ್ವವು ಆಕಾಶ ಮತ್ತು ಬೆಳಕನ್ನೂ ಬಗ್ಗಿಸುತ್ತದೆ. ಹಿರಣ್ಯಗರ್ಭ ಎಂದರೆ ಯಾವುದು ಜಡ ಆಂತರ್ಯವನ್ನು ಹೊಂದಿದೆಯೋ ಅದು. ಚಿನ್ನವು ಜಡ, ಹಾಗಾಗಿ ಅದು ಹಿರಣ್ಯ.ಈ ವ್ಯಾಖ್ಯಾನದ ರೀತ್ಯಾ ಗುರುತ್ವವು ಜಡ ಆಂತರ್ಯದಿಂದ ಮೇಲ್ಪರುತ್ತದೆ.

ಒಮ್ಮೆ ನೋಡಲು, ಗುರುತ್ವದ ಬಲವು ವಸ್ತುವಿನ ಊರ್ಜೆ/ ದ್ರವ್ಯವನ್ನು ಪ್ರತಿನಿಧಿಸುತ್ತದೆಯೋ ಎನ್ನಿಸುತ್ತದೆ. ಆದರದು ನಿರ್ದಿಷ್ಟ ವಸ್ತುವಿನ ಊರ್ಜೆ/ದ್ರವ್ಯವನ್ನು ಪ್ರತಿನಿಧಿಸುವುದಿಲ್ಲ. ವಸ್ತುವು ಒಂದು ಬಿಂದುವಿನಲ್ಲಿ ಅನುಭವಿಸುವ ಗುರುತ್ವದ ಬಲವು ಅದರ ಸುತ್ತಲಿನ ಎಲ್ಲಾ ವಸ್ತುಗಳ ಗುರುತ್ವ ಬಲದ ಸಂಕಲನವಾದ್ದರಿಂದ, ಅದು ಒಂದೇ ವಸ್ತುವಿನ ಊರ್ಜೆ/ ದ್ರವ್ಯದ ಪ್ರತಿನಿಧಿಯಲ್ಲ.

## ವಿಷ್ಣುಪುರಾಣದಲ್ಲಿ ಬ್ರಹ್ಮ

ಕಾಂಡ-೩ ಅಧ್ಯಾಯ-೩ರಲ್ಲಿ ಪರಾಶರರು ಮೈತ್ರೇಯರಿಗೆ ಹೇಳುತ್ತಾರೆ - ಬ್ರಹ್ಮಶಬ್ದವು ವೃಹ (ವೃದ್ಧಿಸು) ಎಂಬ ಧಾತುವಿನಿಂದ ಬಂದಿದೆ. ಏಕೆಂದರೆ ಅದು ಅನಂತ. ಇಲ್ಲಿ ಬ್ರಹ್ಮವೂ ಅನಂತ, ಅಗೋಚರ, ಅಮರ, ಅಚಲ, ಸ್ವಲಿಂಗ, ಅವಿಭಾಜ್ಯ ಅಕ್ಷಯ, ಬಹುರೂಪಿ ಎಂದು ವರ್ಣಿಸಲ್ಪಟ್ಟಿದೆ.

ಕಾಂಡ -೧ ಅಧ್ಯಾಯ - ೨೨ ಪರಾಶರರು ಮೈತ್ರೇಯರಿಗೆ - ಈ ಬ್ರಹ್ಮಕ್ಕೆ ಎರಡು ಸ್ಥಿತಿಗಳಿವೆ. ಒಂದು ರೂಪಿ, ಇನ್ನೊಂದು ಅರೂಪಿ; ಒಂದು ಕ್ಷರ, ಇನ್ನೊಂದು ಅಕ್ಷರ; ಇದು ಚರಾಚರಗಳಲ್ಲೆಲ್ಲಾ ಇದೆ. ಅಕ್ಷರವದೇ ಪರಬ್ರಹ್ಮ; ಕ್ಷರವದೇ ಪ್ರಪಂಚಗಳಲ್ಲಿ ಬ್ರಹ್ಮದ ವಿವರ್ತ. ಬೆಂಕಿಯು ಉರಿಯುವುದೊಂದು ಜಾಗದಲ್ಲಿ, ಅದರ ಕಿಡಿಗಳು ಮತ್ತು ಶಾಖವು ವ್ಯಾಪಿಸುವುದು ಸುತ್ತಮುತ್ತಲು. ಪ್ರಪಂಚವು ಈ ಗುರುತ್ವದ ಊರ್ಜೆಯ ಹೊರತು ಬೇರೇನಲ್ಲ. ಮೈತ್ರೇಯ ಹೇಗೆ ನಾವು ಹತ್ತಿರ ಅಥವಾ ದೂರವಿದ್ದಾಗ ಬೆಳಕು ಮತ್ತು ಶಾಖವು ಹೆಚ್ಚಿದಂತೆ ಅಥವಾ ಕುಗ್ಗಿದಂತೆ ಅನುಭವವಾಗುತ್ತದೆಯೋ, ಅದೇ ರೀತಿ ಪರಬ್ರಹ್ಮದ ಊರ್ಜೆಯು ಜೀವ ಪ್ರಭೇದದ ಶ್ರೇಣಿಯಂತೆ ಹೆಚ್ಚು ಅಥವಾ ಕಡಿಮೆ ಪ್ರಭಾವಶಾಲಿಯಾಗಿರುತ್ತದೆ.

ಈಗ ಬ್ರಹ್ಮನ ಜಾಗದಲ್ಲಿ ಗುರುತ್ವವನ್ನು ವಿಶ್ಲೇಷಿಸೋಣ. ಗುರುತ್ವವಾದರೋ ಪ್ರಚ್ಛನ್ನ /ವಿಭವ/ ಪೊಟೆನ್ಶಿಯಲ್ ರೂಪದಲ್ಲಿ ಅವಿನಾಶಿ, ಚಲನ/ ಕೈನೆಟಿಕ್ ರೂಪದಲ್ಲಿ ವಿನಾಶಿ. ಇದನ್ನು ಮೇಲ್ಕಂಡ ಸಾಲುಗಳಿಗೆ ಹೊಂದಿಸಿ ಪುನಃ ಓದೋಣ.

ಕಾಂಡ - ೧, ಅಧ್ಯಾಯ -೨೨, ಪರಾಶರರು ಮೈತ್ರೇಯರಿಗೆ - ಈ ಗುರುತ್ವಕ್ಕೆ ಎರಡು ಸ್ಥಿತಿಗಳಿವೆ. ಒಂದು ರೂಪಿ, ಇನ್ನೊಂದು ಅರೂಪಿ; ಒಂದು ಪ್ರಚ್ಛನ್ನ, ಇನ್ನೊಂದು ಚಲನ; ಇದು ಎಲ್ಲಾ ವಸ್ತುಗಳ ಆಂತರ್ಯದಲ್ಲಿದೆ. ಪ್ರಚ್ಛನ್ನವೇ ಸರ್ವೋಚ್ಚ ಗುರುತ್ವ ಚಲನೆಯೇ ಪ್ರಪಂಚಗಳಲ್ಲಿ ಬ್ರಹ್ಮದ ವಿವರ್ತ. ಬೆಂಕಿಯು ಉರಿಯುವುದೊಂದು ಜಾಗದಲ್ಲಿ, ಅದರ ಕಿಡಿಗಳು ಮತ್ತು ಶಾಖವು ವ್ಯಾಪಿಸುವುದು ಸುತ್ತಮುತ್ತಲು. ಪ್ರಪಂಚವು ಈ ಗುರುತ್ವದ ಊರ್ಜೆಯ ಹೊರತು ಬೇರೇನಲ್ಲ. ಮೈತ್ರೇಯ, ಹೇಗೆ ನಾವು ಹತ್ತಿರ ಅಥವಾ ದೂರವಿದ್ದಾಗ ಬೆಳಕು ಮತ್ತು ಶಾಖವು ಹೆಚ್ಚಿದಂತೆ ಅಥವಾ ಕುಗ್ಗಿದಂತೆ ಅನುಭವವಾಗುತ್ತದೆಯೋ, ಅದೇ ರೀತಿ ಗುರುತ್ವದ ಊರ್ಜೆಯು ವಸ್ತುವಿನ ದೂರದಂತೆ ಹೆಚ್ಚು ಅಥವಾ ಕಡಿಮೆ ಪ್ರಭಾವಶಾಲಿ ಯಾಗಿರುತ್ತದೆ.

ಗುರುತ್ವದ ಬಲವು ದೂರವನ್ನು ಆಧರಿಸಿರುತ್ತದೆ. ಗುರುತ್ವ ಪುಚ್ಛನ್ನ ಊರ್ಜೆಯೇ ಅವಿನಾಶಿ, ಚಲನ ಊರ್ಜೆಯಾದರೋ ವಿನಾಶಿ ಹಾಗೂ ಬಾಹ್ಯದಲ್ಲಿ ಕಾಣಸಿಗುತ್ತದೆ. ಇಡೀ ವಿಶ್ವವೇ ಈ ಗುರುತ್ವದ ವಿಕಾಸ ಏಕೆಂದರೆ ಗುರುತ್ವ ವೇ ನಾವಿರುವ ವಿಶ್ವವನ್ನು ಈಗಿರುವಂತೆ ವಿಕಾಸ ಮಾಡಿರುವುದು. ವಿಜ್ಞಾನದ ರೀತ್ಯಾ ಉದಯಿಸುವ ಮೊತ್ತಮೊದಲ ಬಲವೇ ಗುರುತ್ವ.

(-ಸಶೇಷ)

ಧಾರಾವಾಹಿ - 1



# ವೇದದಲ್ಲಿ ಗಣಿತ

- ರಮೇಶ್ ಕುಮಾರ್ ಬನ್ನೂರು
99018 02587

ವೇದಗಳು ಜ್ಞಾನ ಭಂಡಾರಗಳು. ಪ್ರಪಂಚದ ಹಾಗೂ ನಮ್ಮ ದೇಶದ ಅತ್ಯಂತ ಪುರಾತನ ಗ್ರಂಥಗಳೆನಿಸಿರುವ ವೇದಗಳು ಆಧ್ಯಾತ್ಮಿಕ, ಲೌಕಿಕ ಮತ್ತು ವೈಜ್ಞಾನಿಕ ವಿಷಯಗಳನ್ನೊಳಗೊಂಡಿವೆ. ವೇದಗಳನ್ನು ನಾಲ್ಕು ಭಾಗಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ ಋಗ್ವೇದ,ಯಜುರ್ವೇದ,ಸಾಮವೇದ ಮತ್ತು ಅಥರ್ವವೇದ. ವೇದಗಳಲ್ಲದೆ. ಸಾಂಪ್ರದಾಯಿಕ ವಿಜ್ಞಾನ ಹಾಗೂ ತಾಂತ್ರಿಕ ವಿಷಯಗಳನ್ನೊಳಗೊಂಡ ನಾಲ್ಕು ಉಪವೇದಗಳಿವೆ.ಅವುಗಳೆಂದರೆ

## ವೇದ,ಉಪವೇದ ಮತ್ತು ವೇದಾಂಗಗಳು

ಆಯುರ್ವೇದ,ಗಾಂಧರ್ವವೇದ,ಧನುರ್ವೇದ ಮತ್ತು ಸ್ಥಾಪತ್ಯವೇದ. ಈ ಮಹಾನ್ ಗ್ರಂಥಗಳಲ್ಲಿನ ವಿಷಯ ಗ್ರಹಣಕ್ಕಾಗಿ ಸಹಕರಿಸಲು ಶಿಕ್ಷಾ, ವ್ಯಾಕರಣ, ಛಂದಸ್ಸು, ನಿರುಕ್ತಿ, ಜ್ಯೋತಿಷ್ಯ ಮತ್ತು ಕಲ್ಪಗಳೆಂಬ ಆರು ವೇದಾಂಗಗಳಿವೆ.

ಉಪವೇದಗಳಲ್ಲೊಂದಾದ ಆಯುರ್ವೇದ ಹೆಸರೇ ಸೂಚಿಸುವಂತೆ ಮಾನವನ ಆಯಸ್ಸಿನ ವೃದ್ಧಿಗೆ ಸಹಕಾರಿಯಾಗುವ ಜ್ಞಾನಭಂಡಾರವಾದ ವೈದ್ಯಕೀಯ ವಿಜ್ಞಾನ (Science of Medicine).ಗಾಂಧರ್ವವೇದ, ಲಲಿತ ಕಲೆಗಳಾದ ಸಂಗೀತ, ಚಿತ್ರಕಲೆ, ಶಿಲ್ಪಕಲೆಗಳಂತಹ ಕಲಾ ಪ್ರಕಾರಗಳಿಗೆ (Science of Finearts )ಸಂಬಂಧಿಸಿದ ವಿಜ್ಞಾನ.ಧನುರ್ವೇದ ಸಮರ ಕಲೆಯ (Science of Warfare) ವಿಷಯಗಳನ್ನೊಳಗೊಂಡ ವಿಜ್ಞಾನವಾಗಿದ್ದು ಸ್ಥಾಪತ್ಯವೇದವು ತಾಂತ್ರಿಕ ವಿಜ್ಞಾನಕ್ಕೆ (Science of Engineering) ಸಂಬಂಧಿಸಿದ ವಿಜ್ಞಾನವಾಗಿದೆ.

ಆಯುರ್ವೇದ, ಗಾಂಧರ್ವವೇದ, ಧನುರ್ವೇದ ಮತ್ತು ಸ್ಥಾಪತ್ಯವೇದ ಮತ್ತು ವೇದಾಂಗಗಳಾದ ಜ್ಯೋತಿಷ್ಯ ಮತ್ತು ಕಲ್ಪಗಳಂತಹ ವೈಜ್ಞಾನಿಕ ವಿಷಯಗಳ ಅಧ್ಯಯನದಲ್ಲಿ ಗಣಿತದ ಜ್ಞಾನ ಅತ್ಯವಶ್ಯಕ ಎನ್ನುವುದು ಸರ್ವವಿದಿತ. ಅಂತೆಯೇ, ಈ ವೇದ ಗ್ರಂಥಗಳಲ್ಲಿ ವಿಪುಲವಾದ ಗಣಿತ ಸಂಬಂಧಿ ಮಾಹಿತಿ ಅಡಕವಾಗಿದೆ. ಈ ಗಣಿತದ ಮಾಹಿತಿ ಸೂತ್ರ ರೂಪಗಳಲ್ಲಿದ್ದು ಸಂಸ್ಕೃತ ಭಾಷೆಯಲ್ಲಿದೆ. ಕಾಲಾಂತರದಲ್ಲಿ ಸಂಸ್ಕೃತ ಭಾಷಾ ಅಧ್ಯಯನ ಕುಂಠಿತಗೊಂಡಂತೆ ಜನ ಮಾನಸದಿಂದ ವೇದಗ್ರಂಥಗಳಲ್ಲಿನ ವಿಷಯ ಮಾಸಿಹೋದದ್ದರಲ್ಲಿ ಆಶ್ಚರ್ಯವೇನಿಲ್ಲ. ವೇದ ಗ್ರಂಥಗಳಲ್ಲಿರುವ ಗಣಿತದ ಪುನರುಜ್ಜಾರವೇ ವೇದಗಣಿತ.

| ವೇದಗಳು | ಉಪವೇದಗಳು | ವೇದಾಂಗಗಳು |
|---|---|---|
| ಋಗ್ವೇದ | ಆಯುರ್ವೇದ(Science of Medicine) | ಶಿಕ್ಷಾ (Education) |
| ಯಜುರ್ವೇದ | ಗಾಂಧರ್ವವೇದ (Science of Finearts ) | ಛಂದಸ್ಸು(Prosody) |
| ಸಾಮವೇದ | ಧನುರ್ವೇದ(Science of Warfare) | ವ್ಯಾಕರಣ (Grammar) |
| ಅಥರ್ವವೇದ | ಸ್ಥಾಪತ್ಯವೇದ (Science of Engineering) | ನಿರುಕ್ತಿ (Etymology) |
| | | ಜ್ಯೋತಿಷ್ಯ (Astrology) |
| | | ಕಲ್ಪ (Astronomy) |

ವೇದಗಣಿತದ ಅಧ್ಯಯನ ನಮ್ಮನ್ನು ಸಾವಿರಾರು ವರ್ಷಗಳಷ್ಟು ಪುರಾತನವಾದ ಭಾರತೀಯ ಗಣಿತಶಾಸ್ತ್ರದ ಪರಂಪರೆಯತ್ತ ಕೊಂಡೊಯುತ್ತದೆ. ಮನುಕುಲದ ಆರಂಭ ವನ್ನು ಸೂಚಿಸುವ ವೇದಗ್ರಂಥಗಳು ಮಾನವನ ಅಸಾಧಾರಣ ವಿದ್ವತ್ತಿನ ವ್ಯಾಖ್ಯಾನಗಳು.ಭಾರತೀಯರ ಮೇಧಾಶಕ್ತಿ. ವೈಜ್ಞಾನಿಕ ಜ್ಞಾನ ಮತ್ತು ಸೌಂದರ್ಯ ಮೀಮಾಂಸೆ ಕೇವಲ ತತ್ವಶಾಸ್ತ್ರ. ಭೌತಶಾಸ್ತ್ರ. ಪರಿಸರ ವಿಜ್ಞಾನ ಮತ್ತು ಪ್ರದರ್ಶನ ಕಲೆಗಳಿಗೆ (performing arts) ಸೀಮಿತವಾಗಿರದೆ ಜ್ಯಾಮಿತಿ, ಬೀಜ ಗಣಿತ ಹಾಗೂ ಅಂಕಗಣಿತ. ತ್ರಿಕೋನಮಿತಿ ಕಲನಶಾಸ್ತ್ರ (Calculus) ಕ್ಷೇತ್ರಗಳಲ್ಲೂ ವಿಕಸಿತ ಗೊಂಡು ಜಯಭೇರಿಯನ್ನು ಮೊಳಗಿಸಿತ್ತು. 'ಶೂನ್ಯ' ಅಥವಾ 'ಸೊನ್ನೆ'ಯ ಆವಿಷ್ಕಾರ. 'ದಶಮಾನ ಪದ್ಧತಿ'ಯನ್ನು ಜಗತ್ತಿಗೆ ಪರಿಚಯಿಸಿದ್ದರಿಂದ ಗಣಿತ ಒಂದು ವೈಜ್ಞಾನಿಕ ವಿಷಯವಾಗಿ ಬೆಳೆಯಲು ಅನುವು ಮಾಡಿ ಕೊಟ್ಟಿತು.

ವೇದಗಣಿತ, ಗಣಿತದ ಲೆಕ್ಕಾಚಾರಗಳನ್ನು ವೇಗವಾಗಿ ಮತ್ತು ಹೆಚ್ಚಿನ ಕ್ಷಮತೆಯೊಡನೆ ನಿರ್ವಹಿಸಲು ಅನುವು ಮಾಡಿ ಕೊಡುವ ವೇದಕಾಲದ ಭಾರತೀಯ ತಾಂತ್ರಿಕ ಕಾರ್ಯ ವಿಧಾನ. ವೇದಗಣಿತದ ಪುರಾತನ ವಿಧಾನಗಳನ್ನು ಅನು ಸರಿಸಿ ಸಂಕಲನ. ವ್ಯವಕಲನ, ಗುಣಾಕರ, ಭಾಗಾಕಾರ, ಸಂಖ್ಯೆಗಳ ವರ್ಗ, ಘನ, ವರ್ಗಮೂಲ. ಘನಮೂಲಗಳನ್ನು ಕಂಡು ಹಿಡಿಯುವುದೇ ಅದಿಯಾಗಿ ಏಕಕಾಲಿಕ ಸಮೀಕರಣ, ವರ್ಗಸಮೀಕರಣ, ತ್ರಿಕೋನಮಿತಿ. ಕಲನಶಾಸ್ತ್ರ ಮುಂತಾದ ಗಣಿತಶಾಸ್ತ್ರ ಸಂಬಂಧಿತ ಸಮಸ್ಯೆಗಳನ್ನು ಬಹಳ ಸುಲಭವಾಗಿ ಬಿಡಿಸಬಹುದಾಗಿದೆ.

ವೇದಗಣಿತದ ಸೌಂದರ್ಯ ಅದರ ಸರಳತೆಯಲ್ಲಿ ಅಡಕವಾಗಿದೆ. ಸಮಸ್ಯೆಗಳನ್ನು ಬಿಡಿಸುವ ಅದರ ವಿಧಾನಗಳು ನಮ್ಮ ಮೇಧಾಶಕ್ತಿ ಮತ್ತು ಸ್ಮರಣಶಕ್ತಿಗಳನ್ನು ಉದ್ದೀಪನಗೊಳಿ ಸುತ್ತದೆ. ವೇದಗಣಿತದ ವಿಧಿವಿಧಾನಗಳನ್ನು ವಿದ್ಯಾರ್ಥಿಗಳು ಬಹು ಸುಲಭವಾಗಿ ಗ್ರಹಿಸಲು ಸಾಧ್ಯ. ಅದರ ಮೂಲಭೂತ ಪರಿಕಲ್ಪನೆಗಳನ್ನು ಅರಿತರೆ ವಿದ್ಯಾರ್ಥಿಗಳ ಸೃಜನಶೀಲತೆ ಗರಿ ಗೆದರುವುದರಲ್ಲಿ ಸಂಶಯವೇ ಇಲ್ಲ.

ಈ ಲೇಖನದ ಮುಂದಿನ ಮಾಲಿಕೆಗಳಲ್ಲಿ ವೇದಗಣಿತದ ಜನಪ್ರಿಯತೆಗೆ ಕಾರಣಕರ್ತರಾದವರು. ವೇದಗಣಿತದ ಮೂಲ ಭೂತ ಪರಿಕಲ್ಪನೆಗಳು, ವೇದಗಣಿತದ ಸೂತ್ರಗಳು ಮತ್ತು ಗಣಿತದ ಸಮಸ್ಯೆಗಳನ್ನು ವೇದಗಣಿತದ ವಿಧಿವಿಧಾನಗಳ ಮೂಲಕ ಬಿಡಿಸುವ ಕ್ರಮಗಳನ್ನು ವಿಧಿವತ್ತಾಗಿ ತಿಳಿಸ ಲಾಗುವುದು.

(ಮುಂದುವರಿಯುವುದು)

## ತಿರುಪತಿಯಲ್ಲಿ ದರ್ಶನೀಯ ಆಲಯಗಳು :

### ಶ್ರೀ ಗೋವಿಂದರಾಜಸ್ವಾಮಿ ಆಲಯ:

ಇತಿಹಾಸದ ಪ್ರಕಾರ ಈ ಕ್ಷೇತ್ರವನ್ನು ಶ್ರೀವೈಷ್ಣವಾಚಾರ್ಯರಾದ ರಾಮಾನುಜರು ಪ್ರತಿಷ್ಟಿಸಿದರೆಂದು ಪ್ರತೀತಿ. ಗೋವಿಂದರಾಜ ಸ್ವಾಮಿ ಆದಿಶೇಷನಮೇಲೆ ಶಯನ ಭಂಗಿಯಲ್ಲಿ ದರ್ಶನ ಕೊಡು ತ್ತಾರೆ. ಆಂಡಾಳ್, ಪಾರ್ಥಸಾರಥಿ ಮತ್ತು ವೆಂಕಟೇಶ್ವರಸ್ವಾಮಿ ಗುಡಿಗಳು ಗೋವಿಂದರಾಜಸ್ವಾಮಿ ಆಲಯ ಪ್ರಾಂಗಣದಲ್ಲಿವೆ. ವಿಜಯನಗರ ರಾಜರ ಶಿಲ್ಪಕಳಾಚಾತುರ್ಯಕ್ಕೆ ಪ್ರಸಿದ್ಧಿಯಾಗಿದೆ ಈ ಆಲಯ.

### ಶ್ರೀ ಕೋದಂಡರಾಮಸ್ವಾಮಿ ಆಲಯ:

ತಿರುಪತಿ ರೈಲ್ವೇನಿಲ್ದಾಣದಿಂದ ಒಂದು ಕಿಲೋಮೀಟರು ದೂರ ದಲ್ಲಿರುವ ಈ ಆಲಯದಲ್ಲಿ ಕೋದಂಡರಾಮಸ್ವಾಮಿ ನೆಲೆಸಿದ್ದಾನೆ. ರಾವಣ ಸಂಹಾರದನಂತರ ಸೀತಾಲಕ್ಷ್ಮಣರೊಡನೆ ಶ್ರೀರಾಮನು ಈ ಸ್ಥಳದಲ್ಲಿ ಕೆಲವು ಕ್ಷಣ ಇದ್ದ ನೆನಪಿಗಾಗಿ ಈ ಆಲಯ ನಿರ್ಮಿಸ ಲಾಗಿದೆ.


### ಶ್ರೀ ಕಪಿಲೇಶ್ವರಸ್ವಾಮಿ ಆಲಯ:

ತಿರುಪತಿ ಪಟ್ಟಣಕ್ಕೆ 3 ಕಿ.ಮೀ ದೂರದಲ್ಲಿ ಪ್ರಸಿದ್ಧ ಶೈವ ಕ್ಷೇತ್ರ ವಿದೆ. ಕಪಿಲ ಮಹರ್ಷಿ ಪೂಜಿಸಿದ ಶಿವಲಿಂಗವಾದುದರಿಂದ ಕಪಿಲೇಶ್ವರನೆಂದು ಇಲ್ಲಿರುವ ತೀರ್ಥ ಕಪಿಲತೀರ್ಥ ಎಂದು ಕರೆಯಲಾಗಿದೆ

### ಅಲಮೇಲು ಮಂಗಾಪುರ (ತಿರುಚಾನೂರು):

ತಿರುಪತಿಗೆ 5 ಕಿ.ಮೀ. ದೂರದಲ್ಲಿರುವ ಪ್ರಾಚೀನವಾದ ಕ್ಷೇತ್ರ ತಿರುಚಾನೂರು. ಇದನ್ನೇ ಅಲಮೇಲು ಮಂಗಾಪುರವೆಂದು ಕರೆಯು ತ್ತಾರೆ. ಶ್ರೀ ವೆಂಕಟೇಶ್ವರಸ್ವಾಮಿಯ ಪತ್ನಿಯಾದ ಶ್ರೀ ಪದ್ಮಾವತಿ ಅಮ್ಮ ನವರಿಗೆ ಇಲ್ಲಿ ಪೂಜೆ ನಡೆಯುತ್ತಿವೆ. ತಿರುಮಲೆಗೆ ಬಂದ ಯಾತ್ರಿಕರು ತಿರುಚಾನೂರು ಅಮ್ಮನವರನ್ನು ದರ್ಶಿಸಿದರೆ ತಮ್ಮ ಯಾತ್ರೆ ಫಲವಂತ ವಾಗುತ್ತದೆಯೆಂದು ಪ್ರಸಿದ್ಧಿ. ಕಾರಣ ತಿರುಮಲೆಯ ಯಾತ್ರಿಕರು, ತಿರುಚಾನೂರುಗೆ ಹೋಗಿ ಶ್ರೀ ಪದ್ಮಾವತಿಯನ್ನು ಪೂಜಿಸುತ್ತಾರೆ. ತಿರುಚಾನೂರಿನಲ್ಲಿರುವ ಪವಿತ್ರ ಪುಷ್ಕರಿಣಿ "ಪದ್ಮಸರೋವರ" ದಲ್ಲಿ ಶ್ರೀ ಪದ್ಮಾವತಿ ಅಮ್ಮನವರು ಆವಿರ್ಭವಿಸಿದಳೆಂದು ಸ್ಥಳ ಪುರಾಣ.

# ಪುಸ್ತಕ ವಿಮರ್ಶೆ




**ಪುಸ್ತಕದ ಹೆಸರು :** ಪುರಂದರ ಮಹಾಸಂಪುಟ

**ಲೇಖಕರು :** ಡಾ।। ಅರಳುಮಲ್ಲಿಗೆ ಪಾರ್ಥಸಾರಥೀ

**ದೂರವಾಣಿಸಂಖ್ಯೆ:** 9480304541

**ಪುಟಗಳು :** 1255

**ಬೆಲೆ :** ರೂ. 800/-

**ಮುದ್ರಣ:** ಅರಳು ಮಲ್ಲಿಗೆ ಪ್ರತಿಷ್ಠಾನ ಬೆಂಗಳೂರು

"ಪುರಂದರ ಮಹಾಸಂಪುಟ" ವಿದ್ಯಾವಾಚಸ್ಪತಿ ಡಾ।।ಅರಳುಮಲ್ಲಿಗೆ ಪಾರ್ಥಸಾರಥಿ ಅವರು ಸಂಪಾದಿಸಿದ ಪುರಂದರದಾಸರ ಹಾಡುಗಳು, ಜೀವನ, ದರ್ಶನ, ಚೇತನದ ಬೃಹತ್ ಕೃತಿ.೧೨೫೫ ಪುಟಗಳು ರೂ.೮೦೦/-ಮುಖ ಬೆಲೆಯ ಈ ಸಂಪುಟವನ್ನು ಅರಳುಮಲ್ಲಿಗೆ ಪ್ರತಿಷ್ಠಾನ ಬೆಂಗಳೂರು (9480304541) ಪ್ರಕಟಿಸಿದ್ದಾರೆ. ಪುರಂದರದಾಸರ ಸಮಗ್ರ ಪರಿಚಯದೊಂದಿಗೆ ಅವರ 1424 ಹಾಡುಗಳು ಈ ಮಹಾಸಂಪುಟದಲ್ಲಿದೆ.

ಪುರಂದರದಾಸರನ್ನು ಮನದುಂಬಿ ನೆನೆಯುತ್ತ ಡಾ।।ಅರಳುಮಲ್ಲಿಗೆ ಯವರು," ಪುರಂದರದಾಸರು ಆಡಿದ ಮಾತೆಲ್ಲ ಹಾಡಾಯಿತು.ಅವರ ತಲೆಯಲ್ಲಿ ಸುಳಿದದ್ದೆಲ್ಲಾ ಸುಳಾದಿಗಳಾದವು. ಅವರು ಉಂಡು ಉಟ್ಟು ಉಸಿರಾಡಿದ್ದೆಲ್ಲ ಉಗಾಭೋಗಗಳಾದವು. ಪುರಂದರದಾಸರು ಬಾಯಿಬಿಟ್ಟರೆ ಪದಪದ್ಯಗಳ ಧಾರೆಧಾರೆ. ಭೋರ್ಗರೆವ ಸಂಗೀತದ ಜಲಪಾತವಾದರೂ ಪುರಂದರದಾಸರು.ಸಾಹಿತ್ಯ ಸಂಗೀತ, ಸಂಸ್ಕೃತಿಗಳ ತ್ರಿವೇಣಿ ಸಂಗಮವಾದ ಹರಿದಾಸ ಸಾಹಿತ್ಯವನ್ನು ರೂಪಿಸುವಲ್ಲಿ, ಸಮೃದ್ಧಿ ಮಾಡುವಲ್ಲಿ, ಜನಪ್ರಿಯಗೊಳಿಸುವಲ್ಲಿ ಪುರಂದರದಾಸರ ಕೊಡುಗೆ ಅತ್ಯಂತ ಮಹತ್ವಪೂರ್ಣ ಅದು. ಜನಪದ ಆಶಯಗಳಿಗೆ ಧ್ವನಿಯಾಗಿ ದಾಸಸಾಹಿತ್ಯವನ್ನು ಸಂಘಟಿಸಿದ ಕೀರ್ತಿ ಪುರಂದರದಾಸರದ್ದು. ಮನಸ್ಸನ್ನೂ, ಬುದ್ಧಿಯನ್ನೂ ಶುದ್ಧಿ ಮಾಡುವ, ಹೃದಯವನ್ನು ಸಂಸ್ಕರಣ ಮಾಡುವ ಉತ್ತಮ ಸಂಸ್ಕಾರ ನೀಡುವ ಸಾಹಿತ್ಯವನ್ನು ಸಂಗೀತವನ್ನು ಪುರಂದರರು ನೀಡಿದರು.ಇವರು ಕರ್ನಾಟಕ ಸಂಗೀತದ ಸ್ಥಾಪನಾಚಾರ್ಯರು. ಕರ್ನಾಟಕ ಸಂಗೀತದ ಪಿತಾಮಹರು ಕಳೆದೈದು ಶತಮಾನಗಳಿಂದಲೂ ಪುರಂದರದಾಸರು ಹರಿದಾಸ ಜಗತ್ತಿನ, ಸಂಗೀತವು ಪ್ರಪಂಚದ ಗಾಳಿಯಲ್ಲಿ ಗಂಧವಾಗಿ ಹರಡಿಕೊಂಡಿದ್ದಾರೆ ಎಂದಿದ್ದಾರೆ.

ಪುರಂದರದಾಸರಿಗೆ ಸಂಬಂಧಿಸಿದಂತೆ ಅವರ ಜನ್ಮಸ್ಥಲದ ವಿಚಾರ, ಮುಕುತಿ ನೀಡಿದ ಮೂಗುತಿ, ಬಾಗಿಲಿಗೆ ಬಂದ ಭಗವಂತ, ಗುರಿತೋರಿದ ಗುರು, ನವಕೋಟಿ ನಾರಾಯಣರು ಹರಿದಾಸರಾದುದು, ಹೆಂಡತಿ ಸಂತತಿ ಸಾವಿರವಾಗಲಿ, ದಾಸರೆಂದರೆ ಪುರಂದರದಾಸರು. ಮೊದಲಾದ ಶೀರ್ಷಿಕೆಗಳಲ್ಲಿ ಸಮಗ್ರ ಪರಿಚಯವಿದೆ. ಅವರ ಕೀರ್ತನೆಗಳಲ್ಲಿ ಅಡಕವಾಗಿರುವ ಹಲವಾರು ವಿಷಯಗಳ ಪ್ರಸ್ತಾಪವಿದೆ. ಈ ಮಹಾಸಂಪುಟದ ರೂಪದಲ್ಲಿ ಸಾಕ್ಷಾತ್ ಪುರಂದರದಾಸರ ದರ್ಶನ ಮಾಡಿಸಿ ಡಾ।।ಅರಳುಮಲ್ಲಿಗೆ ಯವರು ಧನ್ಯತೆ ಮೆರೆದಿದ್ದಾರೆ.

ಪುರಂದರದಾಸರ ಕೀರ್ತನೆಗಳಲ್ಲಿ ಸ್ತುತಿ,ತತ್ತ್ವ ಬೋಧೆ ಸಿದ್ಧಾಂತ, ರಸವ್ಯಂಜನಾದಿಗಳಿವೆ. ಇವುಗಳಲ್ಲಿ ಸಮಯ ಸ್ಫೂರ್ತಿ, ಭಕ್ತಿಯಾವೇಶ, ಹುಮ್ಮಸ್ಸು, ದುಗುಡ ಕಂಡು ಬಂದಿವೆ. ಬರೆದ ಕೀರ್ತನೆಗಳಿಗಿಂತ ಬಂದ ಕೀರ್ತನೆಗಳೇ ಅಧಿಕ. ಇವೇ ಪುರಂದರೋಪನಿಷತ್ತು, ಲೋಕದ ರೀತಿನೀತಿಗಳ ವಿಡಂಬನೆ, ಉದಾತ್ತವಾದ ಆದರ್ಶ ಕೌಟುಂಬಿಕ ಜೀವನ ಸಾಮಾಜಿಕ ಮೌಲ್ಯಗಳು ಧರ್ಮದ ದಿಟವಾದ ನೆಲೆ, ಆಧ್ಯಾತ್ಮದ ಸ್ವಾರಸ್ಯ, ಮೊದಲಾದವುಗಳು ಸಹಜವಾಗಿ ಸೇರಿಕೊಂಡಿವೆ. ಶಾಸ್ತ್ರ ಗ್ರಂಥಗಳಿಗಿಂತ ಹೆಚ್ಚಾಗಿ ಪುರಾಣ, ಇತಿಹಾಸಗಳನ್ನಿವರು ಅವಲಂಬಿಸಿದ್ದಾರೆ. ಮಾಧ್ವಮತ ನಿಷ್ಠೆ ಸ್ಪಷ್ಟವಾಗಿದೆ.

ಸಂಗೀತ ಸಾಹಿತ್ಯ ಎರಡು ಕ್ಷೇತ್ರಗಳಲ್ಲೂ ಎತ್ತಿದ ಕೈಯಾಗಿರುವ ಗೇಯಗುಣ ಹಾಗೂ ಕಾವ್ಯ ಧರ್ಮ ಒಳಗೊಂಡಿರುವ, ಮುಖ್ಯವಾಗಿ ಶ್ರೀಹರಿಯ ಸ್ಮರಣೆಯಲ್ಲಿ ನಮ್ಮನ್ನು ತಲ್ಲೀನರನ್ನಾಗಿಸುವ ಪುರಂದರದಾಸರ ಕೀರ್ತನೆಗಳ ವೈಭವವನ್ನು ತಮ್ಮ ಪುರಂದರ ಮಹಾಸಂಪುಟದಲ್ಲಿ ತೋರಿಗೊಟ್ಟಿರುವ ಡಾ।। ಅರಳುಮಲ್ಲಿಗೆ ಪಾರ್ಥಸಾರಥಿಯವರಿಗೆ ಹಾರ್ದಿಕ ಅಭಿನಂದನೆಗಳು,ಪ್ರತಿಯೊಬ್ಬ ಕನ್ನಡಿಗನ ಮನೆಯಲ್ಲೂ ಇರಲೇ ಬೇಕಾದ ಕೃತಿರತ್ನವಿದು.ಇಂದೇ ಖರೀದಿಸಿ ಆನಂದಿಸಿ, ಧನ್ಯರಾಗಿರಿ.

# ಶ್ರೀ ಗೋಪಾಲದಾಸರ ಭಕ್ತಿಯ ಸ್ವರೂಪ

- ಡಾ॥ ಮಧುಮತಿ ದೇಶಪಾಂಡೆ

ಆಗತಾದಿ ತ್ರಿಕಾಲಜ್ಞಂ ಆಗಮಾರ್ಥ ವಿಶಾರದಂ ।
ತ್ಯಾಗ ಭೋಗ ಸಮಾಯುಕ್ತಂ ಭಾಗಣ್ಣಾರ್ಯಂ ಗುರು ಭಜೆ ॥

## ಉಪೋದ್ಘಾತ

ಮಾನವನು ಐಹಿಕ ಭೋಗಗಳು ಹೆಚ್ಚಾದಾಗ ಸುಖ ಪಡುತ್ತಿದ್ದೇನೆ ಎಂತಲೂ, ಅವುಗಳ ಕೊರತೆಯಾದಾಗ ದುಃಖ ಪಡುತ್ತಿದ್ದೇನೆ ಎಂತಲೂ ಭಾವಿಸಿ ಆ ಭ್ರಮೆಯಲ್ಲೇ ಬದುಕುತ್ತಾನೆ. ಆದರೆ ಈ ಐಹಿಕ ಸುಖ ದುಃಖಗಳನ್ನು ಅಲಕ್ಷಿಸಿ ಭಗವಂತನ ಕುರಿತು ಚಿಂತನೆಯಲ್ಲಿ ತೊಡಗಿದಾಗ ಐಹಿಕ ಸುಖ ಸಂತೋಷಗಳಿಗಿಂತ ಭಿನ್ನವಾದ ಆನಂದದ ಸ್ಥಿತಿಯನ್ನು ಅನುಭವಿಸುತ್ತಾನೆ. ಭಗವಂತನ ಸಾಕ್ಷಾತ್ಕಾರವಾದ ಕ್ಷಣವನ್ನು ಪರಮಾನಂದ ಅಥವಾ ಬ್ರಹ್ಮಾನಂದ ಎನ್ನುತ್ತಾರೆ. ಇಂತಹ ಆನಂದವನ್ನು ಕರುಣಿಸುವ ಪರಮಾತ್ಮ ಅಥವಾ ಪರಬ್ರಹ್ಮ ಸಚ್ಚಿದಾನಂದನೇ ಆಗಿದ್ದಾನೆ. ನಿರಂತರವಾಗಿ ಇಂತಹ ಆನಂದವನ್ನು ಅನುಭವಿಸುವ ಸಾಧಕರು ನಿತ್ಯಾನಂದ, ಸದಾನಂದ, ಅಚಲಾನಂದ ಹೊಂದುವವರಾಗಿದ್ದಾರೆ. ಆನಂದದಾನುಭವವನ್ನು ಕುರಿತು ವಿವರಿಸುವಾಗ ಅದ ಪಾತ್ರೆಯೊಂದರಲ್ಲಿ ಕಾಯಲು ಇಟ್ಟ ಹಾಲಿಗೆ ಉಕ್ಕು ಬರುವಂತೆ ಎಂದು ವರ್ಣಿಸಲಾಗುತ್ತದೆ. ಹೃದಯವೆಂಬ ಪಾತ್ರೆಯಲ್ಲಿ ಭಕ್ತಿಯೆಂಬ ಕ್ಷೀರ ತುಂಬಿ ಮನಸ್ಸೆಂಬ ಸಮಿಧೆಯುರಿಯಲು ಆ ಹಾಲು ಉಕ್ಕಿ ಆನಂದಾನುಭವವಾಗುತ್ತದೆ.

ಕ್ಷೀರಸಾಗರದಲ್ಲಿ ಶೇಷಶಾಯಿಯಾದ ಭಕ್ತವತ್ಸಲ ಶ್ರೀಹರಿಯ ಚಿಂತನೆಯಲ್ಲೇ ಪರಮಾನಂದವನ್ನು ಪಡೆದ ಅಗ್ರೇಸರರಲ್ಲೊಬ್ಬರು ಶ್ರೀಗೋಪಾಲದಾಸರು. “ಬಂದು ನಿಲ್ಲಯ್ಯ ಭವದ ಸಿಂಧುವಿಗೆ ಎಂಬ ಅವರ ಸುಳಾದಿಯೊಂದರಲ್ಲಿ ಬರುವ “ಆನಂದ ಗುಣಪೂರ್ಣ ಗೋಪಾಲವಿಠಲ ಈ ನಿಮಿಷವೇ ಸಾಕು ನಿನ್ನ ತಿಳಿದವ ಧನ್ಯ” ಎಂಬ ಸಾಲುಗಳೇ ಇದಕ್ಕೆ ಆಧಾರ, ಅವರನ್ನು ಕುರಿತು ಭಕ್ತಿಯಲ್ಲಿ ಭಾಗಣ್ಣ ಎಂದು ಅವರ ಗುರುಗಳಾದ ಶ್ರೀವಿಜಯದಾಸರೇ ಶ್ಲಾಘಿಸಿದ್ದಾರೆ. ಇಂಥವರ ಭಕ್ತಿ ಸ್ವರೂಪವನ್ನು ಕುರಿತು ಹೇಳು ಎಂದರೆ ಥಟ್ ಅಂತ ಹೇಳಿಬಿಡಲು ಸಾಧ್ಯವಿಲ್ಲ. ಅದು ಅನಿರ್ವಚನೀಯ. ಆದರೂ ಸುಳಾದಿ, ಉಗಾಭೋಗ ಪದ-ಪದ್ಯ ಸಂಕೀರ್ತನಾದಿಗಳಲ್ಲಿ ಅವರಿಂದ ಅಭಿವ್ಯಕ್ತವಾದ ಭಕ್ತಿಯ ಸ್ವರೂಪವನ್ನು ಯಥಾನುಶಕ್ತಿ ವರ್ಣಿಸಬೇಕೆಂಬ ಪರಿಮಿತಿಯನ್ನು ಹಾಕಿಕೊಂಡಾಗ ಆ ಪ್ರಯತ್ನ ತಕ್ಕ ಮಟ್ಟಿಗೆ ಸಫಲವಾಗಬಹುದು.



ನಾರದಾಂಶ ಸಂಭೂತರಾದ, ನವಕೋಟಿ ನಾರಾಯಣರೆನಿಸಿದ ಶ್ರೀನಿವಾಸ ನಾಯಕರು ಭಗವದನುಗ್ರಹವಾದೊಡನೆ ಎಲ್ಲವನ್ನೂ ತೊರೆದು ಶ್ರೀವ್ಯಾಸರಾಯರ ಉಪದೇಶ ಪಡೆದು ಶ್ರೀ ಪುರಂದರದಾಸರೆನಿಸಿದರು. ಅವರ ಮಗ ಮಧ್ವಪತಿಯಾಗಿ ಮರು ಜನ್ಮದಲ್ಲಿ ದಾಸಪ್ಪನಾಗಿ, ಅವರಿಂದಲೇ ಕಾಶಿಯ ಮಣಿ ಕರ್ಣಿಕಾ ಘಟ್ಟದಲ್ಲಿ ಸ್ವಪ್ನಾಂಕಿತರಾದವರು ಶ್ರೀವಿಜಯದಾಸರು.

ಶ್ರೀವಿಜಯದಾಸರಿಂದ ಗೋಪಾಲವಿಠಲಾಂಕಿತರಾಗಿ ತಮ್ಮ ನಲವತ್ತು ವರ್ಷಗಳ ಆಯುರ್ದಾನದ ವೈರಾಗ್ಯ ಶಾಲಿಗಳು ಶ್ರೀಗೋಪಾಲದಾಸರು. ಇವರಿಂದ ಉಪಕೃತರಾಗಿ ಪಂಢರಪುರದಲ್ಲಿ ಪಾಂಡುರಂಗನಿಂದಲೇ ಜಗನ್ನಾಥ ವಿಠಲಾಂಕಿತರಾಗಿ ಶ್ರೀಮದಾನಂದ ತೀರ್ಥರ ಸಕಲ ಸಚ್ಛಾಸ್ತ್ರಗಳ ಸಾರಭೂತವಾದ ‘ಹರಿಕಥಾಮೃತಸಾರ’ ರಚಿಸಿ ಹರಿಗರ್ಪಿಸಿದವರು ಶ್ರೀಜಗನ್ನಾಥ

ದಾಸರು. ಹೀಗೆ ಈ ಶಿಷ್ಯ ಪ್ರಶಿಷ್ಯರು ಹರಿದಾಸ ಚತುಷ್ಟಯರೆನಿಸಿದ್ದಾರೆ.

ಉಪರ್ಯುಕ್ತ ಪ್ರಾತಃಸ್ಮರಣೀಯರಲ್ಲೊಬ್ಬರಾದ ಭಾಗಣ್ಣನವರು ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಮೊಸರಕಲ್ ಗ್ರಾಮದಲ್ಲಿ ಮುರಾರಿ ಮತ್ತು ವೆಂಕಮ್ಮನವರು ಜ್ಯೇಷ್ಠ ಸುಪುತ್ರರಾಗಿ ಕ್ರಿ.ಶ. ೧೭೨೧ ರಲ್ಲಿ ಜನಿಸಿದರು. ಬಾಲ್ಯದಲ್ಲಿ ತಂದೆಯನ್ನು ಕಳಕೊಂಡು, ತಾಯಿ ಮತ್ತು ಮೂವರು ತಮ್ಮಂದಿರೊಂದಿಗೆ ಸಂಕಾಪುರ ಮತ್ತು ಉತ್ತನೂರುಗಳಲ್ಲಿ ಜೀವನ ಯಾಪನ ಮಾಡಿದರು. ಉಪನಯನಾನಂತರ ಗಾಯತ್ರಿ ಮಂತ್ರದ ಸಿದ್ಧಿಯನ್ನೂ, ಜ್ಯೋತಿಷ್ಯದಲ್ಲಿ ನೈಪುಣ್ಯತೆಯನ್ನೂ ಗಳಿಸಿ ಸುಪ್ರಸಿದ್ಧರಾದರು.

ವೆಂಕಟಕೃಷ್ಣ ಎಂಬ ಮುದ್ರಿಕೆಯೊಂದಿಗೆ ಭಕ್ತಿಗೀತೆಗಳು ರಚನೆಯಲ್ಲಿ ತೊಡಗಿರುವಾಗ ಶ್ರೀ ವಿಜಯದಾಸರು ಅನುಗ್ರಹಿಸಿ ಕೊಟ್ಟ ಗೋಪಾಲವಿಠಲ ಎಂಬ ಅಂಕಿತದೊಂದಿಗೆ ಇವರಿಂದ ಅಪಾರವಾದ ದಾಸಸಾಹಿತ್ಯ ಮೂಡಿ ಬಂದಿದೆ. ಕಬ್ಬು ಆದ್ಯಂತವೂ ರಸಭರಿತವಾಗಿ ಸಿಹಿಯಾಗಿರುವಂತೆ ಇವರ ಸಾಹಿತ್ಯ ಸಂಪೂರ್ಣವಾಗಿ ಭಕ್ತಿಯುಕ್ತವಾಗಿದೆ. ಅದರ ಸ್ವರೂಪವನ್ನು ಕುರಿತು ಸುದೀರ್ಘವಾಗಿ ಬರೆಯುವಾಗ ಅದರಲ್ಲಿ ಆತ್ಮನಿವೇದನೆ, ಅಪರೋಕ್ಷಾನುಭವ, ಭಾವ ವೈವಿಧ್ಯ ಪ್ರಮೇಯ ಪ್ರತಿಪಾದನೆ ಮತ್ತು ಸ್ತುತಿ ಮಾಲಿಕೆ ಎಂದು ವಿಭಾಗಿಸಿ ಕೊಂಡರೆ ಅಧ್ಯಯನಕ್ಕೆ ಅನುಕೂಲವೆನಿಸುತ್ತದೆ.

**ಆತ್ಮನಿವೇದನೆ:**

ಸಹಜವಾಗಿ ಮಕ್ಕಳು ಮಾಡುವ ತಪ್ಪುಗಳನ್ನು ಪಾಲಕರು ಗುರುಹಿರಿಯರು ಕ್ಷಮಿಸುತ್ತಾರಾದರೂ ದಂಡಿಸುವುದೂ ಲೋಕ ರೂಢಿ. ಇಂತಹ ಸಂಸ್ಕಾರಕ್ಕೆ ಒಳಪಟ್ಟವರು ದೊಡ್ಡವರಾದ ಮೇಲೆ ತಪ್ಪು ಮಾಡಿದರೆ ಯಾರೂ ದಂಡಿಸದಿದ್ದರೂ ಸ್ವಯಂ ಪ್ರೇರಿತವಾಗಿ ಭಗವಂತನೆದುರು ನಿಂತು ತಾವು ಮಾಡಿದ ತಪ್ಪುಗಳನ್ನು ತಾವೇ ಹೇಳಿಕೊಂಡು ಪಶ್ಚಾತ್ತಾಪ ಪಡುತ್ತಾರೆ. ಇದನ್ನೇ ಆತ್ಮನಿವೇದನೆ ಎನ್ನುವರು.

ಈ ನಿಟ್ಟಿನಲ್ಲಿ ಅನೇಕ ಜನ ಹರಿದಾಸರು ಅನೇಕ ಬಗೆಯ ಆತ್ಮನಿವೇದನಾ ಪರಪದ್ಯಗಳನ್ನು ಬರೆದಿದ್ದಾರೆ. ಅವುಗಳನ್ನು ಓದುವಾಗ ದಾಸರೂ ಇಂತಹ ತಪ್ಪುಗಳನ್ನು ಮಾಡಿದ್ದಾರೆಯೇ ಎಂಬ ಪ್ರಶ್ನೆ ಹುಟ್ಟುತ್ತದೆ. ಆದರೆ ಇಂತಹ ವಿಷಯಗಳನ್ನು ವಿವೇಚಿಸುವಾಗ ವಿವೇಕವಿರಬೇಕು. ಭಗವಂತನ ಕುರಿತು ಒಂದು ಕ್ಷಣದ ವಿಸ್ಮೃತಿಯೂ ಅನೇಕರ ಪಾಪ ಕೃತ್ಯಗಳಿಗೆ ಸಮಾನ ಎಂಬ ಹಿನ್ನೆಲೆಯಲ್ಲಿ ಇಂತಹ ಹಾಡುಗಳನ್ನು ವ್ಯಾಖ್ಯಾನಿಸಬೇಕಾಗುತ್ತದೆ. ಶ್ರೀಗೋಪಾಲದಾಸರು ಬರೆದ ಆತ್ಮನಿವೇದನಾ ಪರ ಹಾಡುಗಳನ್ನೂ ಇದೇ ಸಿದ್ಧಾಂತದ ಹಿನ್ನೆಲೆಯಲ್ಲಿ ನೋಡಬೇಕು.

"ಇಂದಿರೆ ಅರಸ ಗೋಪಾಲ ವಿಠಲ ಕೃಷ್ಣ
ತಂದೆ ನಿಮ್ಮ ವಿಸ್ಮೃತಿ ಎನಗೆ ಮುಖ್ಯಾಪರಾಧ"

ಎಂಬ ಇವರ ಪದ್ಯವೊಂದರ ಸಾಲುಗಳನ್ನು ತಿಳಿದಾಗ ಈ ವಿಚಾರ ಮನವರಿಕೆಯಾಗುತ್ತದೆ.

"ಆವ ರೋಗವೋ ಎನಗೆ ದೇವ ಧನ್ವಂತ್ರಿ
ಸಾವಧಾನದಿ ಕೈಯ ಪಿಡಿದು ನೀ ನೋಡಯ್ಯ"

ಎಂದು ಶ್ರೀಗೋಪಾಲದಾಸರು ಪ್ರಾರ್ಥಿಸುತ್ತ ಕಣ್ಣು, ಕಿವಿ, ನಾಲಿಗೆ, ಮೂಗು, ಕೈ, ಕಾಲುಗಳೆಲ್ಲ ವಿಹಿತ ಕರ್ಮಗಳಲ್ಲಿ ತೊಡಗಲಾರದಾಗಿವೆ ಎಂದು ಹೇಳಿಕೊಳ್ಳುತ್ತಿದ್ದಾರೆ. ಆದರೆ ಅವರು ಈ ರೀತಿಯಾಗಿ ರೋಗಗ್ರಸ್ತರಾಗಿರಲು ಸಾಧ್ಯವಿಲ್ಲ.

"ಎನ್ನ ಬಿನ್ನಪಕೇಳು ಧನ್ವಂತ್ರಿ ದಯಮಾಡೋ ಸಣ್ಣವ ಇವ ಕೇವಲ ಬನ್ನಬಡಿಸುವ ರೋಗವನ್ನು ಮೋಚನ ಮಾಡಿ ಚೆನ್ನಾಗಿ ಪಾಲಿಸುವುದು"

ಎಂದು ಧನ್ವಂತ್ರಿ ರೂಪಿ ಪರಮಾತ್ಮನನ್ನು ಪ್ರಾರ್ಥಿಸಿ ಜೋಳದ ಅರ್ಧ ಭಕ್ಕರಿಯಿಂದ ಕ್ಷಯರೋಗ ನಿವಾರಿಸಿ, ಶ್ರೀನಿವಾಸಾಚಾರ್ಯರ ಉದರ ಬಾಧೆಯನ್ನು ಪರಿಹರಿಸಿದ ಮಹಾತ್ಮರಿವರು. ರೋಗ ರುಜಿನುಗಳು ಇಂಥವರ ಬಳಿಯಲ್ಲಿ ಸುಳಿಯಲೂ ಸಾಧ್ಯವಿಲ್ಲ. ಆದರೂ ಹೀಗೆ ಹಾಡಿದ್ದಾರೆಂದರೆ ತಿಳಿದೋ, ತಿಳಿಯದೆಯೋ ಯಾವುದೋ ಒಂದು ಕ್ಷಣದಲ್ಲಿ ಪರಮಾತ್ಮನ ನಾಮಸ್ಮರಣೆಯಿಂದ ದೂರಾದ ಪಾಪವನ್ನು ಪರಿಹರಿಸಲು ಹೀಗೆ ಪ್ರಾರ್ಥಿಸಿದ್ದಾರೆ ಎಂದು ತಿಳಿಯಬೇಕು. ತಪ್ಪು ಮಾಡಿದರೂ ಪಶ್ಚಾತ್ತಾಪ ಪಡುವ ಮನೋಭಾವವಿರದಿದ್ದ ಜನರೂ ಇಂತಹ ಹಾಡುಗಳನ್ನು ಕೇಳಿದಾಗಲಾದರೂ ಅರಿವು ಮೂಡಿ ಉದ್ಧಾರವಾಗಲಿ ಎಂಬ ಸದುದ್ದೇಶದಿಂದಲೂ ದಾಸರು ಹೀಗೆ ಹಾಡಿ ಮಾದರಿಯಾಗಿದ್ದಾರೆ.

ಇತರರು ಮಾಡುವ ತಪ್ಪುಗಳನ್ನು ತಮ್ಮ ಮೇಲೇ ಆಪಾದಿಸಿಕೊಂಡು ಅಭಿವ್ಯಕ್ತಿ ಪಡಿಸುವುದೂ ಕೆಲವೊಮ್ಮೆ ಪರಿಣಾಮಕಾರಿಯಾಗಿರುತ್ತದೆ. ಅಂಥ ಒಂದು ಉಪಾಯವೆಂದು ಬಗೆದು ದುರ್ಜನರನ್ನು ಸರಿ ದಾರಿಗೆ ತರುವ ಉದ್ದೇಶದಿಂದಲೂ ಇಂತಹ ಹಾಡುಗಳ ರಚನೆಯಾಗಿರುತ್ತವೆ. ಒಂದು ಹಾಡಿನಲ್ಲಿ "ಎಷ್ಟು ಮಮತೆಯೋ ನಿನಗೆ ಭ್ರಷ್ಟಮನವೆ" ಎಂದು

ಶ್ರೀಗೋಪಾಲದಾಸರು ತಮ್ಮ ಮನವನ್ನೇ ಸಂಬೋಧಿಸಿ "ನಿನ್ನ ಕಣ್ಣ ಮುಂದೆ ಪ್ರೋಪ ಜೀವರು ಕಂಡು ಇನ್ನು ನಿನಗೆ ನಾಚಿಕೆಬಾರದೆ ಎಂದು ಹೇಳುವ ಇಂಥ ಸಾಲುಗಳು ಮಾರ್ಮಿಕವಾಗಿವೆ.

ಭಗವಂತನೆದುರು ನಾವು ಮಾಡಿದ ತಪ್ಪುಗಳನ್ನು ಮುಚ್ಚು ಮರೆಯಿಲ್ಲದೆ ಹೇಳಬೇಕು. ಘಂಟಾಘೋಷವಾಗಿ ಹೇಳಬೇಕು. ಜನಸಂದಣಿಯಲ್ಲಿ,ಅದೂ ಸ್ವಜನರೇ ಹೆಚ್ಚಾಗಿರುವಲ್ಲಿ ಹೇಳಿ ತಮ್ಮ ದುಷ್ಕೃತ್ಯಗಳಿಗಾಗಿ ಪಶ್ಚಾತ್ತಾಪ ಪಡಬೇಕು. ಅಂದಾಗ ಮಾತ್ರ ಪಶ್ಚಾತ್ತಾಪವೇ ಪ್ರಾಯಶ್ಚಿತ್ತವಾಗುತ್ತದೆ. ಈ ವಿಚಾರಗಳನ್ನು ಪುಷ್ಟೀಕರಿಸುವ ಒಂದು ಹಾಡಿನ ಸಾಲುಗಳು ಹೀಗಿವೆ.

ಏನೆಂದು ಬಿನ್ನೈಸಲಯ್ಯ ಎನ್ನ ಮನ ನಿನ್ನ ಧೇನಿಸಲೊಲ್ಲದು
ಪಂಚವೃತ್ತಾತ್ಮಕದ ಈ ಮನದ ಪ್ರಪಂಚವೆಲ್ಲವು ನಿನಗೆ
ವಂಚನೆಯಿಲ್ಲದೆ ಒರೆದು ಪೇಳಿದೆ ವಿರಿಂಚಿವರದ ಗೋಪಾಲವಿಠಲ"

ಮನಸ್ಸು, ಬುದ್ಧಿ, ಅಹಂಕಾರ, ಚಿತ್ರ, ಚೇತನಗಳಿಂದ ಕೂಡಿದ ಈ ಮನಸ್ಸಿನ ಒಳಗುಟ್ಟುಗಳೆಲ್ಲವನ್ನೂ ಮುಚ್ಚುಮರೆಯಿಲ್ಲದೇ ಬಿನ್ನೈಸಿದ್ದೇನೆ ಗೋಪಾವಿಠಲ ಎನ್ನುತ್ತಾರೆ .ಶ್ರೀಗೋಪಾಲದಾಸರು.

ಶ್ರೀ ಹರಿಯನ್ನು ಕುರಿತು ಪ್ರಾರ್ಥಿಸುವಾಗ ನನ್ನನ್ನು ಈಗಲೇ ಉದ್ದರಿಸು ಎಂದು ಕೇಳುವ ಹಕ್ಕು ನಮಗೆಲ್ಲಿದೆ. ಹಾಗೆ ಹಕ್ಕೆತ್ತಾಯ ಮಾಡಿದರೆ ಕೇಳುತ್ತಾನೆಯೇ ಶ್ರೀಹರಿ. ಹಿಂದಣ ಜನ್ಮಾಂತರಗಳ ಪ್ರಾರಬ್ಧಗಳೆಲ್ಲ ಮುಗಿಯುವವರೆಗೆ ಕಾಯುತ್ತ ಶ್ರೀಹರಿಸ್ಮರಣೆ ಮಾಡುವದೊಂದೇ ನಮಗಿರುವ ದಾರಿ ಎಂದು ತಿಳಿಯಬೇಕು. ಈ ವಿಚಾರವು ಶ್ರೀಗೋಪಾಲದಾಸರ "ಏಕೆ ಮಮತೆ ಕೊಟ್ಟು ದಣಿಸುವಿ ರಂಗ" ಎಂಬ ಹಾಡಿನಲ್ಲಿ ವ್ಯಕ್ತವಾಗಿದೆ.

"ಇಂದ್ರಿಯಂಗಳು ವಿಷಯದಿಂದ ತೆಗೆಯಲು ಗೋವಿಂದ ಎನ್ನ ವಶಕೆ ಬಾರವೋ " ಎಂದು ನಿವೇದಿಸುತ್ತ

"ಎಂದಿಕೆ ನಿನ್ನ ಚಿತ್ತಕೆ ಬರುವುದೋ ಸ್ವಾಮಿ ಅಂದೇ ಉದ್ಧರಿಸಯ್ಯ ಕರುಣಿಯೆ" ಎನ್ನುವ ವಿನೀತ ಭಕ್ತಿ ಭಾವವನ್ನು ತೋರಿದ್ದಾರೆ.

ತಿರುಮಲೆ ತಿರುಪತಿ ದೇವಸ್ಥಾನಗಳು, ತಿರುಪತಿ

# ತಿರುಮಲೆಯಲ್ಲಿ

ಮಾಡಬೇಕಾದವು; ಮಾಡಬಾರದವುಗಳು ಹಾಗೂ ನಿಷಿದ್ಧವಾದವು.

## ಮಾಡಬೇಕಾದವು :

☑ ತಿರುಮಲೆಗೆ ಬರುವ ಮುನ್ನ ನಿಮ್ಮ ಇಷ್ಟ ಅಥವಾ ಕುಲದೈವವನ್ನು ಪೂಜಿಸಿರಿ.
☑ ಶ್ರೀವೆಂಕಟೇಶ್ವರ ಸ್ವಾಮಿಯನ್ನು ದರ್ಶಿಸುವ ಮೊದಲು ಸ್ವಾಮಿ ಪುಷ್ಕರಿಣಿಯಲ್ಲಿ ಸ್ನಾನಮಾಡಿ,
☑ ಅಲ್ಲಿಯೇ ಇರುವ ಶ್ರೀ ವರಾಹಸ್ವಾಮಿಯನ್ನು ದರ್ಶಿಸಿರಿ.
☑ ದೇವರ ದರ್ಶನಕ್ಕೆ ಸರದಿಯ ಸಾಲು ಸೇರಿರಿ.
☑ ಆಲಯದ ಒಳಗಡೆ ಸ್ವಾಮಿಯಲ್ಲಿ ಮನಸ್ಸನ್ನು ಕೇಂದ್ರೀಕರಿಸಿ.
☑ ಆಲಯದ ಒಳಗಡೆ ಗಂಭೀರ ಮೌನವನ್ನು ಪಾಲಿಸಿರಿ ಮತ್ತು
☑ ಮನಸ್ಸಿನಲ್ಲಿ "ಓಂ ನಮೋ ವೇಂಕಟೇಶಾಯ" ಎಂದು ಜಪಿಸಿರಿ.
☑ ತಿರುಮಲೆಯಲ್ಲಿ ಪಾಪನಾಶಿನಿಯಲ್ಲೂ, ಆಕಾಶಗಂಗೆಯಲ್ಲೂ ಸ್ನಾನಮಾಡಿರಿ.
☑ ತಿರುಮಲೆಗೆ ಬಂದಾಗ ಪ್ರಾಚೀನಪರಂಪರೆಯನ್ನೂ ಆಚಾರವನ್ನೂ ಗೌರವಿಸಿ.
☑ ತಮ್ಮ ಕಾಣಿಕೆಗಳನ್ನು ಹುಂಡಿಯಲ್ಲಿ ಮಾತ್ರವೇ ಸಮರ್ಪಿಸಿ.
☑ ತಿರುಮಲೆಯನ್ನು ಶುಭ್ರವಾಗಿ ಶುದ್ಧವಾಗಿ ಇಡಲು ಸಹಕರಿಸಿ.
ಬಯೋಡಿಗ್ರೇಡಬಲ್ ಪ್ಲಾಸ್ಟಿಕ್ ಕವರಗಳನ್ನು ಮಾತ್ರವೇ ಬಳಸಿರಿ.

## ಮಾಡಬಾರದವು :

☒ ತಮ್ಮೊಂದಿಗೆ ಹೆಚ್ಚಿನ ಹಣ, ಆಭರಣಗಳನ್ನು ತರಬೇಡಿ.
☒ ದೇವರನ್ನು ಸೇವಿಸುವುದರ ಹೊರತು ಬೇರೆ ಯಾವ ಕಾರಣಕ್ಕೂ ತಿರುಮಲೆಗೆ ಬಾರದಿರಿ.
☒ ದೇವರ ದರ್ಶನಕ್ಕಾಗಿ ನೂಕುನುಗ್ಗುಲು ಮಾಡದಿರಿ.
☒ ಸಂಪ್ರದಾಯದಂತೆ ಆಲಯ ಪ್ರವೇಶ ನಿಷೇಧವಿದ್ದಲ್ಲಿ ಆಲಯ ಪ್ರವೇಶ ಮಾಡದಿರಿ.
☒ ಹೂವು ಮುಡಿಯದಿರಿ. (ಎಲ್ಲ ಹೂವುಗಳೂ ದೇವರಿಗೇ.)
☒ ನೀರು, ವಿದ್ಯುತ್‌ಗಳು ಪೋಲು ಮಾಡದಿರಿ.
☒ ಅಪರಿಚಿತರಿಗೆ ನಿಮ್ಮ ಕೋಣೆಯ ಬೀಗದ ಕೈಗಳನ್ನು ನೀಡದಿರಿ, ಅವರನ್ನು ನಿಮ್ಮ ಕೊಠಡಿಗೆ ಸೇರಿಸದಿರಿ.
☒ ಆಲಯದ ಒಳಗೆ, ಹೊರಗೆ ಪಾದರಕ್ಷೆಗಳನ್ನು ಧರಿಸಿ ಓಡಾಡಬೇಡಿರಿ.

## ನಿಷೇಧಿತ ಪದಾರ್ಥಗಳು :( ನಿಷೇಧಿಸಿದವು)

✗ ತಿರುಮಲೆಯಲ್ಲಿ ಮಾಂಸಾಹಾರವನ್ನು ಬಳಸಬೇಡಿರಿ. ಮಾದಕ ವಸ್ತು, ಪೇಯಗಳನ್ನು ಬಳಸಬೇಡಿರಿ. ಧೂಮಪಾನ ಮಾಡಬೇಡಿರಿ.
✗ ವಸತಿಗಾಗಿ, ಪ್ರತ್ಯೇಕ ಪ್ರವೇಶಕ್ಕಾಗಿ ದಳ್ಳಾಳಿಗಳನ್ನು ಆಶ್ರಯಿಸಬೇಡಿರಿ.
✗ ಬೀದಿವ್ಯಾಪಾರಿಗಳಿಂದ ನಕಲೀ ಪ್ರಸಾದ ಕೊಳ್ಳಬೇಡಿ.
✗ ದೇವಾಲಯದಲ್ಲಿ ಉಗುಳುವುದೇ ಮುಂತಾದವುಗಳನ್ನು ಮಾಡದಿರಿ.
✗ ಅನ್ಯಮತ ಪ್ರಚಾರ ನಿಷೇಧಿಸಲಾಗಿದೆ.
✗ ವಿವಿಧ ರಾಜಕೀಯ ಸಭೆ, ಬ್ಯಾನರು, ಧರಣಿ, ರಾಸ್ತಾರೋಕೋ, ಹರತಾಳ - ಮೊದಲಾದವುಗಳನ್ನು ನಿಷೇಧಿಸಲಾಗಿದೆ.
✗ ಜಂತುವಧೆ ನಿಷೇಧ.
✗ ಯಾವುದೇ ರೂಪದಲ್ಲಿ ಜೂಜಾಡುವುದನ್ನು ನಿಷೇಧಿಸಲಾಗಿದೆ.
✗ ಸೆಲ್‌ಫೋನ್, ಕ್ಯಾಮರಾ, ಮತ್ತಿತರ ವಿದ್ಯುತ್ ಚಾಲಿತ ಉಪಕರಣಗಳನ್ನು ಆಲಯಕ್ಕೆ ಒಯ್ಯಬೇಡಿರಿ.ಆಯುಧಗಳನ್ನು ತರಬಾರದು.
✗ ಭಿಕ್ಷೆಯನ್ನು ಪ್ರೋತ್ಸಾಹಿಸದಿರಿ. ಹುಸಿ ಪ್ರಸಾದಗಳನ್ನು ಕೊಳ್ಳಬೇಡಿರಿ.

# ಸಂಸ್ಕೃತ ಕಲಿಯೋಣ...!!

**ನವಮಃ ಪಾಠಃ** ಒಂಬತ್ತನೇಯ ಪಾಠ

(कृ धातुः = ಕೃ ಧಾತು)

ರಚನೆ:- ಮಹಾ ಮಹೋಪಾಧ್ಯಾಯ ಕಾಶಿ ಕೃಷ್ಣಾಚಾರ್ಯ
ನಿರ್ವಹಣೆ:- ಮಹಾ ಮಹೋಪಾಧ್ಯಾಯ ಸಮುದ್ರಾಲ ಲಕ್ಷ್ಮಣಯ್ಯ

1. देवः = ದೇವರು
2. किमर्थम् = ಯಾತಕ್ಕಾಗಿ
3. करोति = ಮಾಡು
4. जनकः = ತಂದೆ, ಪಿತೃ
5. एव = ಹೀಗೆ
6. करोषि = ಮಾಡುವುದು
7. अग्रज = ಅಣ್ಣ,ಹಿರಿಯ ಸಹೋದರ
8. किल = ಹೀಗೆಯೇ, ಅಲ್ಲವೇ
9. करोमि = ಮಾಡುತ್ತೇನೆ

## ಪ್ರಶ್ನೆ

1. देवः कुत्र अस्ति?
2. सः अत्र अस्ति।
3. अग्रजः किं करोति?
4. किं वा?
5. त्वं किं करोषि?
6. अहम् अत्रासम्।
7. यूयं किमर्थं तत्र स्थ?
8. ते एव तत्र आसन् किल।
9. यूयं तत्र किमर्थं नास्त?
10. अहं तत्रैव अस्मि।

## ಉತ್ತರ

1. ದೇವರು ಎಲ್ಲಿ ಇದ್ದಾನೆ ?
2. ಅವನು ಇಲ್ಲಿ ಇದ್ದಾನೆ.
3. ಅಣ್ಣನು ಏನು ಮಾಡುತ್ತಾನೆ ?
4. ಏನು ಮತ್ತೆ ?
5. ನೀವು ಏನು ಮಾಡುತ್ತೀರಿ?
6. ನಾವು ಇಲ್ಲಿಯೇ ಇದ್ದೆವೆ.
7. ತಾವೆಲ್ಲರೂ ಅಲ್ಲಿ ಏಕೆ ಇದ್ದೀರಿ ?
8. ಅವರೆಲ್ಲರೂ ಇಲ್ಲಿಯೇ ಇದ್ದರಲ್ಲ.
9. ತಾವೆಲ್ಲರೂ ಅಲ್ಲಿ ಏಕಿಲ್ಲ?
10. ನಾವು ಅಲ್ಲಿಯೂ ಇರುತ್ತೇವೆ.

## ಪ್ರಶ್ನೆ

1. ದೇವನು ಒಂದೇ ಕಡೆ ಇರುವನು.
2. ಅವನು ಎಲ್ಲ ಕಡೆ ಇರುವನು.
3. ಈ ದಿನಗಳಲ್ಲಿ ತಾವೆಲ್ಲರೂ ಎಲ್ಲಿ ಇರುತ್ತೀರಾ?
4. ಅವನು ಸಹ ಏನು ಮಾಡುತ್ತಾನೆ?
5. ಅವರೆಲ್ಲರೂ ಅಲ್ಲಿಯೇ ಇದ್ದಾರೆ.
6. ತಾವೆಲ್ಲರೂ ಏನು ಮಾಡುತ್ತೀರಿ?
7. ನಾವೆಲ್ಲರೂ ಇಲ್ಲಿಯೇ ಇದ್ದೆವೆ.
8. ಯಾಕೆ ನೀವೆಲ್ಲ ಇಲ್ಲಿ ಇರುವುದಿಲ್ಲಾ?
9. ನೀನು ಅಲ್ಲಿ ಏಕಿರುವುದಿಲ್ಲಾ?
10. ನಾನು ಇಲ್ಲಿಯೇ ಇರುತ್ತೇನೆ,ಅಥವಾ ಇದ್ದೇನೆ.

## ಉತ್ತರ

1. देवः एकत्र अस्ति।
2. सः अनेकत्र अस्ति।
3. युयं अधुना कुत्र स्त?
4. कः किं वा करोति?
5. ते सर्वे तत्र स्युः।
6. त्वमेव करोषि किम्?
7. वयमेव अत्र स्याम।
8. केवा अत्र न सन्ति।
9. त्वम् अत्र नासि किल।
10. अहमत्रैव अस्मि।

ಧಾರಾವಾಹಿ - 4

# ಶ್ರೀಮದ್ಭಗವದ್ಗೀತೆ

ತೆಲುಗು ಮೂಲ : ಕೆ. ವಿಶ್ವನಾಥ ಶರ್ಮ

ಅನುವಾದ : ಸೂರ್ಯವಂಶಿ



**ಕಳೆದ ಸಂಚಿಕೆಯಿಂದ**

ಮೊದಲು ಗುರುಗಳನ್ನು ಆಶ್ರಯಿಸಬೇಕು ಗುರುವನ್ನು ಆಶ್ರಯಿಸಿದರೇ ನಮಗೆ ತತ್ತ್ವಜ್ಞಾನ ಲಭ್ಯವಾಗುತ್ತದೆ ಎಂದು ಉಪನಿಷತ್ತಿನಲ್ಲಿ ಸ್ಪಷ್ಟವಾಗಿ ತಿಳಿಸಿದ್ದಾರೆ. ಆದರೆ ಗುರುವಿನ ಹತ್ತಿರ ಹೋದ ಮಾತ್ರಕ್ಕೆ ಸರಿ ಹೋಗುವುದಿಲ್ಲ. ಗುರುವಿನ ಹತ್ತಿರ ಹೋಗಿ ಏನು ಮಾಡಬೇಕು ಎಂದು ತಿಳಿದುಕೊಂಡಿರುವುದು ಮುಖ್ಯವಾದ ಅಂಶ. ಆ ವಿಷಯವನ್ನೇ ಉಪನಿಷತ್ತಿನಲ್ಲಿ, ಭಗವದ್ಗೀತೆಯಲ್ಲಿ ಪರಮಾತ್ಮ ವಿಸ್ತಾರವಾಗಿ ತಿಳಿಸಿದ್ದಾನೆ. ಆ ನಿಯಮಗಳನ್ನು ದುರ್ಯೋಧನ ಆಚರಿಸಲಿಲ್ಲವಾದ್ದರಿಂದ ಗುರುವಿನಿಂದ ಅವನಿಗೆ ದೊರೆಯಬೇಕಾದ ಪ್ರಯೋಜನ ದೊರೆಯಲಿಲ್ಲ. ದುರ್ಯೋಧನನಿಗೆ ಬೇಕಾದ ಪ್ರಯೋಜನವೇನು? ಯುದ್ಧದಲ್ಲಿ ವಿಜಯ ಬೇಕಾಗಿತ್ತು! ಆದರೆ ಅವನಿಗೆ ಅಪಜಯ ಎದುರಾಗಿತ್ತು ! ಏಕೆಂದರೆ ಅವನು ಅವನ ಗುರುವಿನ ಬಳಿ ಹೋಗಲೇ ಇಲ್ಲ. ಇನ್ನೂ ಹೇಳಬೇಕೆಂದರೆ ಅವನು ಭೀಷ್ಮಾಚಾರ್ಯನ ಬಳಿ ಹೋಗುವ ಬದಲು ದ್ರೋಣರ ಬಳಿ ಹೋಗುವುದು ನ್ಯಾಯ ಸಮ್ಮತವಾಗಿತ್ತು!ಅವನು ದ್ರೋಣರ ಬಳಿ ಹೋಗಿ,ಗುರುವರ್ಯಾ! ನಾನು ಯುದ್ದದಲ್ಲಿ ಗೆಲ್ಲಬೇಕು. ಅದಕ್ಕೆ ಒಂದು ಉಪಾಯ ಹೇಳಿ ಎಂದು ಕೇಳಿದ್ದರೆ ಅವರು ಯಾವುದಾದರೂ ಉಪಾಯ ಹೇಳುತ್ತಿದ್ದರು. ದ್ರೋಣನ ಬಳಿ ಇಲ್ಲದ ಅಸ್ತ್ರಗಳೇ? ಅವರಿಗೆ ತಿಳಿಯದ ವ್ಯೂಹಗಳೇ? ಪಾಂಡವ ಮಹಾವೀರರಲ್ಲಿ ಎಲ್ಲರೂ ಇವರ ಶಿಷ್ಯರೇ! ಆದರೇ ಅಲ್ಲಿಗೆ ಹೋಗಿ ಸರಿಯಾಗಿ ಗುರುವಿನ ಬಳಿ ವಿಜಯಕ್ಕಾಗಿ ಪ್ರಾರ್ಥಿಸಿದ್ದಾರೆ ಅಥವಾ ನನಗೆ ತತ್ತ್ವಜ್ಞಾನ ನೀಡಬೇಕೆಂದು ಕೇಳಿದ್ದರೇ! ಅದ್ಯಾವುದೂ ಕೇಳಲಿಲ್ಲ! ಆದ್ದರಿಂದ ಗುರುವನ್ನು ಆಶ್ರಯಿಸಬೇಕು. ಆಶ್ರಯಿಸಿದಾಗ ವಿನಯ ವಿಧೇಯತೆಗಳಿಂದ ನಮಗೆ ಬೇಕಾದ ಕಾರ್ಯವನ್ನು ನೆರವೇರಿಸಿಕೊಳ್ಳಬೇಕು. ಹಾಗೇ ಅವರ ಉಪದೇಶವನ್ನು ಶ್ರದ್ದೆಯಿಂದ ಮನಸ್ಸಿನಲ್ಲಿ ಮುದ್ರಿಸಿಕೊಳ್ಳಬೇಕು. ಈ ಭಾವನೆ ಎಲ್ಲರಿಗೂ ಬರಬೇಕೆಂದು 'ಆಚಾರ್ಯಮುಪಸಂಗಮ್ಯ 'ಎಂದು ಒಂದು ಉಪನಿಷದ್ವಾಕ್ಯವನ್ನು ಇಲ್ಲಿ ನೀಡಲಾಗಿದೆ.

ಈ ಶ್ರೀಮದ್ಭಗವದ್ಗೀತೆಯನ್ನು ನಾವು ಗೀತಾಮೃತ ಎಂದು ಏಕೆ ಕರೆಯುತ್ತೇವೆಂದರೇ ಇದರ ಪ್ರತಿ ಅಕ್ಷರದಲ್ಲಿ, ಪ್ರತಿ ಮಾತಿನಲ್ಲಿ, ನಮ್ಮ ಜೀವನಕ್ಕೆ ಉಪಯೋಗವಾಗುವಂತಹ ಪ್ರಧಾನವಾಗಿ ಇರುವ ವಿಷಯವನ್ನು ತಿಳಿದುಕೊಳ್ಳೋಣ. ಮಾನವಜನ್ಮಕ್ಕೆ ಸಾರ್ಥಕತೆ ತಂದು ಕೊಡುವ ಅಂಶವನ್ನು ನಾವು ಪ್ರತಿ ಶ್ಲೋಕದಲ್ಲೂ, ಪ್ರತಿವಾಕ್ಯದಲ್ಲೂ, ಪ್ರತಿಪದದಲ್ಲೂ, ಪ್ರತಿ ಅಕ್ಷರದಲ್ಲೂ ಅಡಗಿರುವುದನ್ನು ನೋಡಬಹುದು. ಅದಕ್ಕೆ ನಾವು ಇದನ್ನು ಗೀತಾಮೃತ ಎಂದು ಕರೆಯುತ್ತೇವೆ. ಅಂತಹಾ ಗೀತಾಮೃತವನ್ನು 'ಆಚಾರ್ಯೋಪಸದನಂ' ಗುರುಪದದಿಂದ ಇಲ್ಲಿ ಪ್ರಾರಂಭಿಸಿದ್ದಾರೆ. ಈ 'ಗುರುವನ್ನು ಗುರೂಪಸದನವಮ್' ಆದ್ದರಿಂದ ದುರ್ಯೋಧನ ಯಾವ ವಿಧವಾದ ಪ್ರಯೋಜನವನ್ನು ಪಡೆದ ಎಂದು ನೋಡೋಣ! ಯಾವ ರೀತಿ ಗುರುಶಿಷ್ಯರ ಸಂಭಾಷಣೆ ನಡೆದಿತ್ತು. ಅಂತಹಾ ಪ್ರಶ್ನೆಗಳಿಗೆಲ್ಲಾ ಉತ್ತರವನ್ನು ತಿಳಿದುಕೊಳ್ಳೋಣ .

## ಕೃಷ್ಣಮ್ ವಂದೇ ಜಗದ್ಗುರುಮ್

ಶ್ರೀಗುರುಭ್ಯೋ ನಮಃ ಪರಮಾತ್ಮ ಅಖಿಲಾಂಡಕೋಟಿ ಬ್ರಹ್ಮಾಂಡನಾಯಕ, ಶ್ರೀಹರಿ ಜಗತಿಗೆ ತಂದೆಯಾದರೇ, ಶ್ರೀಮದ್ಭಗವದ್ಗೀತೆ ಭಗವಂತನ ವದನದಿಂದ ಹೊರಹೊಮ್ಮಿದಂತಹ ವಾಕ್ಯಗಳು ನಮಗೆ ತಾಯಿಯ ಸಮಾನ! ಆ ತಾಯಿ ನಮ್ಮನ್ನು ಅರ್ಜುನನಂತೆ ಬದಲಾಗು ಎಂದು ಹೇಳುತ್ತಿದ್ದಾಳೆ. ಅರ್ಜುನನಂತೆ ಯೋಗ್ಯತೆಯನ್ನು ಸಂಪಾದಿಸಿಕೋ ಎಂದು ತಿಳಿಸುತ್ತಿದೆ. ಅರ್ಜುನನಂತೆ ಯೋಗ್ಯತೆ ಹೊಂದಿದ್ದರೆ ಒಳ್ಳೆಯ ಉಪದೇಶವನ್ನು ನೀನು ಹೊಂದಬಲ್ಲೆ, ಆ ಒಳ್ಳೆಯ ಉಪದೇಶವನ್ನು ಹೊಂದಿದ್ದರೆ ಒಳ್ಳೆಯ ಉಪದೇಶವನ್ನು ಆಚರಿಸಬಲ್ಲೆ ಎಂದು ಹೇಳುತ್ತಿದೆ. ಆದ್ದರಿಂದ ನಾವೆಲ್ಲರೂ ಅರ್ಜುನನಂತೆ ಬದಲಾಗುವುದಕ್ಕೆ ಪ್ರಯತ್ನಿಸಬೇಕು ಅಂದರೇ ಬೇರೆಯವರಂತೆ ಬದಲಾಗಬಾರದೇ? ಬದಲಾಗಬಾರದು ದುರ್ಯೋಧನಂತೆ ಬದಲಾಗಲೇಬಾರದು. ದುರ್ಯೋಧನಂತೆ ಬದಲಾದರೆ ತಪ್ಪೇನು ಎಂದು ಭಗದ್ಗೀತೆಯಲ್ಲೇ ಉಪದೇಶ ಮಾಡಲಾಗಿದೆ. ನಾವು ಇದಕ್ಕೂ ಮೊದಲೇ ಅಂದು ಕೊಂಡತೆ ದುರ್ಯೋಧನನು ತನ್ನ ಗುರುವಾದ ದ್ರೋಣಾಚಾರ್ಯನ ಬಳಿ ಹೋಗಿ

ಸಂಭಾಷಣೆಯನ್ನು ಪ್ರಾರಂಭಿಸಿದೆ. ಸಾಮಾನ್ಯವಾಗಿ ನಾವು ನಮ್ಮ ಬಾಲ್ಯದಲ್ಲಿ ಓದನ್ನು ಹೇಳಿಕೊಟ್ಟ ಗುರುಗಳ ಬಳಿ ಹೋದಾಗ ಮರ್ಯಾದೆಯಿಂದ ಮಾತನಾಡುತ್ತೇವೆ ಅವರಿಗೆ ನಮಸ್ಕರಿಸುತ್ತೇವೆ, ಇನ್ನೂ ನಮಗೆ ವಿದ್ಯೆಯನ್ನು ಹೇಳಿ ಕೊಟ್ಟ ಗುರುಗಳಿಗೆ ನಮಸ್ಕಾರ ಮಾಡುತ್ತೇವೆ, ಅವರನ್ನೇ ಪರಮಾತ್ಮ ಎಂದು ನಂಬುತ್ತೇವೆ ಆದರೆ ಈ ದುರ್ಯೋಧನ ಅವರ ಬಳಿ ಹೋಗಿ,

'ಪಶ್ಯೈತಾಂ ಪಾಂಡು ಪುತ್ರಾಣಾಮ್ ಆಚಾರ್ಯ ಮಹತೀಮ್

ಚಮೂಂವ್ಯೂಢಾಮ್‌ದ್ರುಪದಪುತ್ರೇಣತವಶಿಷ್ಯೇಣ ಧೀಮತಾಮ್'

ಅಂದರೆ 'ಆಚಾರ್ಯ! ನೋಡಿ ಅಲ್ಲಿ, ಪಾಂಡುಪುತ್ರಾನಾಂ ಮಹತೀ ಚಮೂಂ, ಪಾಂಡುಪುತ್ರರು ದೊಡ್ಡ ಸೇನೆಯನ್ನು ತಂದಿದ್ದಾರೆ ವ್ಯೂಹಾತ್ಮಕವಾಗಿ ನಿಂತಿದ್ದಾರೆ. ಯುದ್ಧದಲ್ಲಿ ಬೇಕಾದ ವ್ಯೂಹವನ್ನು ರಚಿಸಿ ಎದುರು ನೋಡುತ್ತಿದ್ದಾರೆ ಆ ವ್ಯೂಹಕ್ಕೆ ನಾಯಕತ್ವವನ್ನು ಯಾರು ವಹಿಸುತ್ತಿದ್ದಾರೋ ನೋಡಿ. ದ್ರುಪದ ರಾಜನ ಮಗನಾದ ದೃಷ್ಟದ್ಯುಮ್ನ! ಅಂದರೆ ಪಾಂಡವರ ಭಾವಮೈದುನ ! ಜೊತೆಗೆ ತಮ್ಮ ಶಿಷ್ಯ! ನಿಮ್ಮ ಶಿಷ್ಯ ನಿಮ್ಮ ಬಳಿ ವಿದ್ಯಾಭ್ಯಾಸ ಮಾಡಿ ನಿಮ್ಮ ಎದುರು ನಾಳೆ ವ್ಯೂಹಾತ್ಮಕವಾಗಿ ನಿಂತು ನಿಮ್ಮ ಬಳಿ ವಿದ್ಯಾಭ್ಯಾಸ ಮಾಡಿ ಪಾಂಡವರು ನಿಮ್ಮ ಎದಿರು ನಿಂತಿದ್ದಾರೆ. ದೃಷ್ಟದ್ಯುಮ್ನ 'ಧೀಮತಾ' ಬಹಳ ಬುದ್ಧಿವಂತ! ಪ್ರತಿ ದಿನವೂ ಯಾವ ರೀತಿ ವ್ಯೂಹವನ್ನು ಬೇಕೋ ಆ ರೀತಿ ವ್ಯೂಹವನ್ನು ರಚಿಸುತ್ತಿದ್ದಾನೆ.

ಅದನ್ನು ಒಮ್ಮೆ ನೋಡಿ ಇಲ್ಲಿಯವರೆಗೂ ನಮಗೆ ಸಾಮಾನ್ಯವಾಗಿ ಕಂಡು ಬರುತ್ತಿದ್ದ ಮಾತು ಇದರಲ್ಲಿ ನಾವು ದುರ್ಯೋಧನನ ಅಭಿಪ್ರಾಯ ವೇನು ಎಂದು ತಿಳಿದುಕೊಳ್ಳುವ ಮೊದಲು ಈ ಶ್ಲೋಕದಲ್ಲಿ ಉಪಯೋಗಿಸಿದ ಪ್ರಧಾನ ಪದವಾದ 'ಆಚಾರ್ಯ' ಎಂಬ ಮಾತು. ಆಚಾರ್ಯ ಎಂದರೆ ಯಾರು? ನಾವು ಸಾಮಾನ್ಯವಾಗಿ ಗುರುಗಳೆ ಎನ್ನುತ್ತೇವೆ ಎಂದು ತಿಳಿಯಬೇಕು.

ಕೆಲವು ಬಾರಿ ಗುರುಗಳು, ಉಪಾಧ್ಯಾಯರು, ಆಚಾರ್ಯ, ಗುರುವರ್ಯ ಎಂದು ವಿವಿಧ ರೀತಿಯಲ್ಲಿ ಕರೆಯುತ್ತೇವೆ . ಯಾವ ರೀತಿ ಕರೆದರೂ ಸರಿ ನಮಗೆ ಗುರು ಎಂಬ ಅರ್ಥವನ್ನೇ ನೀಡುತ್ತದೆ. ಮೊದಲ ಗುರುವೆಂದರೆ ತಾಯಿ, ತಾಯಿಯ ಪಾತ್ರ ಬಹು ಮುಖ್ಯ. ತಂದೆ ನಿಸರ್ಗ ಗುರು ಎಂದು ಕರೆಯುತ್ತಾರೆ. ಏಕೆಂದರೆ ಭಗವಂತ ನಮಗೆ ಪ್ರಸಾದಿಸಿದ ಸಹಜವಾದ ಗುರು! ಅವರು ಹುಟ್ಟಿದ್ದೇ ತಂದೆಯಾಗಿ, ಗುರುವಾಗಿ ಹುಟ್ಟಿದ್ದಾರೆ. ನಮಗೆ ನಿಸರ್ಗ ಗುರು ತಂದೆಯ ನಂತರ ವಿದ್ಯಾಬುದ್ಧಿ ಕಲಿಸಿದ ಗುರುಗಳು ಇದ್ದಾರೆ. ಇದೆ ಅಲ್ಲದೆ ನಮಗೆ ಸುಜ್ಞಾನವನ್ನು ಉಪದೇಶ ಮಾಡಿದವರು ಗುರುಗಳಿದ್ದಾರೆ, ಸದ್ಗುರುಗಳಿದ್ದಾರೆ. ಎಲ್ಲರೂ ಗುರುಗಳೇ! ಅವರೆಲ್ಲರೂ ಆಚಾರ್ಯರೆ! ಎಂಬ ಪದದಲ್ಲಿ ಒಂದು ಅರ್ಥ ಇದೆ ಎಂದು ಹೇಳುತ್ತಾರೆ.

"ಆಚಿನೋತಿ ಶಾಸ್ತ್ರಾರ್ಥಂ ಆ ಚಾರೇ ಸ್ಥಾಪಯತ್ಯಪಿ

ಸ್ವಯಮಾಚರತೇವಸ್ತು ಉತ್ತಮಾಚಾರ್ಯಮ್ ಪ್ರಚಕ್ಷತೇ'' !

ಆಚಾರ್ಯ ಎಂದರೆ ಯಾರು? ಶಾಸ್ತ್ರದಲ್ಲಿ ಇರುವ ವಿಷಯವನ್ನು ಸರಿಯಾಗಿತಿಳಿದುಕೊಂಡವರು ಒಂದು ಕಡೆ ಒಂದು ವಿಷಯವನ್ನು ಒಂದು ರೀತಿ ಹೇಳಿ ಎಲ್ಲದರಲ್ಲೂ ಇರುವ ವಿಷಯವನ್ನು ಸಂಗ್ರಹಿಸಿ ಏನು ಮಾಡಬೇಕು? ಏನು ಮಾಡಬಾರದು? ಕರ್ತವ್ಯವೇನು? ಆ ಕರ್ತವ್ಯವೇನೆಂದು ಸರಿಯಾಗಿ ತಿಳಿದುಕೊಂಡು ಅದನ್ನು ಆಚರಿಸಿ, 'ಆಚಾರೇ ಸ್ಥಪಯತ್ವಪಿಣ' ವಿದ್ಯಾರ್ಥಿಗಳನ್ನು, ಶಿಷ್ಯರನ್ನು ತನ್ನನು ಆಶ್ರಯಿಸಿದವರಿಗೆ, ಸದಾಚಾರವನ್ನು ಕಲಿಸಿ ಸನ್ಮಾರ್ಗದಲ್ಲಿ ಕರೆದೊಯ್ಯುತ್ತಾರೆ. ಅಂತಹವರನ್ನು ಆಚಾರ್ಯ ಎಂದು ಕರೆಯುತ್ತಾರೆ. ಆಚಾರ್ಯಃ ಅಂದರೆ ಗುರುಗಳು ಇವರೇ ಮೂರು ವಿಧವಾಗಿ ಇರುತ್ತಾರೆ. ಮಕ್ಕಳಲ್ಲಿ ದೋಷಗಳನ್ನು ಸರಿಮಾಡುತ್ತಾ ತಪ್ಪು ಓದುತ್ತಿದ್ದರೆ ವಿವರಿಸುತ್ತಾ ನಿರಂತರವಾಗಿ ತಿದ್ದುಕೊಳ್ಳುವ ಉಪದೇಶವನ್ನು ಮಾಡುತ್ತಾ ಅವರನ್ನು ಸರಿಯಾದ ಮಾರ್ಗದಲ್ಲಿ ಕರೆದೊಯ್ಯುತ್ತಾರೆ.

ನಾವು ಬದಲಾಗುವುದಕ್ಕೆ ನಿರಂತರವಾದ ಅವಕಾಶವನ್ನು ನೀಡುತ್ತಾರೆ. ಅಂತಹ ಗುರುಗಳು ಸಿಗುವುದು ಕೇವಲ ಒಂದು ಜನ್ಮದಲ್ಲಿ ಮಾಡಿದ ಪುಣ್ಯವಾಗಿರುವುದಿಲ್ಲ. ಎರಡನೆಯ ರೀತಿಯ ಗುರುಗಳು, ಶಿಷ್ಯರನ್ನು ಕರೆದು ವಿಷಯವನ್ನು ಹೇಗೆ ಅರ್ಥಮಾಡಿಕೊಳ್ಳಬೇಕು? ಹೇಗೆ ಓದಿದರೆ ಚೆನ್ನಾಗಿ ಅರ್ಥವಾಗುತ್ತದೆ? ಎಂದು ಪಾಠ್ಯಾಂಶವನ್ನು ಚೆನ್ನಾಗಿ ವಿವರಿಸುತ್ತಾರೆ. ಈ ರೀತಿ ಸಕ್ರಮವಾದ ದಾರಿಯಲ್ಲಿ ಕರೆದೊಯ್ಯುತ್ತಾರೆ.

ಇವರಿಗೆ ಯಾರು ಸಾಟಿಯಿರುವುದಿಲ್ಲ. ಇಂತಹಾ ಗುರುಗಳು ದೊರೆಯುವುದು ಸಾಮಾನ್ಯ ಪುಣ್ಯವಲ್ಲ ಇನ್ನೂ ಮೂರನೆಯ ವಿಧವಾದ ಗುರುಗಳು ಮಕ್ಕಳನ್ನು ತಿದ್ದಿ ವಿವರಣೆಗಳನ್ನು ನೀಡುವುದನ್ನು ಮಾಡದೆ ಸ್ವತಹಾ ಆಚರಿಸುತ್ತಾ ಅವರಲ್ಲಿನ ನೈಪುಣ್ಯತೆಯನ್ನು ಪ್ರೇರಣೆ ನೀಡುತ್ತಾರೆ. ಪ್ರೇರಣೆ ಅಂದರೆ ಗುರುಗಳು ಆಚರಿಸುತ್ತ ಅವರು ಕೂಡಾ ಭಗವದ್ಗೀತೆ, ಸುಂದರ ಕಾಂಡ, ರಾಮಾಯಣ, ಮಹಾಭಾರತ ಓದುತ್ತಾ ನಾನು ಓದುತ್ತಿದ್ದೇನೆ. ನೀವು ಓದಿ ಎಂದು ಹೇಳುತ್ತಾ ಅವರಲ್ಲಿ ಪ್ರೇರಣೆಯನ್ನು ಉಂಟುಮಾಡಿ ಓದುವುದಕ್ಕೆ ಆಸಕ್ತಿಯನ್ನೂ ಹೆಚ್ಚಿಸುತ್ತಾರೆ. ಅಂತಹ ಗುರುಗಳನ್ನು ಆಚಾರ್ಯ ಎಂದು ಕರೆಯುತ್ತಾರೆ. ಎಷ್ಟೋ ಜನ್ಮಗಳ ತಪಸ್ಸಿನ ಫಲದಿಂದ ಅಂತಹಾ ಗುರುಗಳು ದೊರೆಯುತ್ತಾರೆ. ಅಂತಹ ಗುರುಗಳು ಯಾರಿಗೆ ದೊರೆಯುತ್ತಾರೆ? ದುರ್ಯೋಧನನಿಗೆ ದೊರೆತಿದ್ದಾರೆ ಎಂದು ಅವನಿಗೂ ತಿಳಿದಿತ್ತು. ದ್ರೋಣಾಚಾರ್ಯನಂತಹ ಉತ್ತಮ ಗುರು ಎಂದು ತಿಳಿದಿತ್ತು.

ಅಂತಹ ಗುರುವಿನ ಹತ್ತಿರ ಹೇಗೆ ಮಾತನಾಡುತ್ತಿದ್ದಾನೆ? ವಿನಯದಿಂದ ಆಚಾರ್ಯ ಎನ್ನುತ್ತಿದ್ದಾನೆ. ಅಂದರೆ ಆಚಾರ್ಯ ಎಂದರೆ ನಮಗೆ ಕೇಳುವುದಕ್ಕೆ ಚೆನ್ನಾಗಿ ಇರುತ್ತದೆ. ಗುರುವನ್ನು ಶ್ರದ್ಧೆಯಿಂದಲೇ ಕರೆದಿದ್ದ. ಆದರೇ ಮಾತಿನಲ್ಲಿ ಯಾವ ರೀತಿಯ ಸ್ವಾರಸ್ಯವಿಲ್ಲ. ಯಾಕೋ ನೋಡಿ, 'ಪಶ್ಯತಾಂ ಎಂದಿದ್ದ ಇದೋ ನೋಡಿ ನಿಮ್ಮ ಎದುರಿನಲ್ಲಿ ನಿಂತಿರುವ ಸೇನೆಯನ್ನು ನೋಡಿ ಎಂದ. ಸರಿ ನೋಡಿದೆವು ಆಮೇಲೆ ಏನು ಮಾಡಬೇಕು? ಪಾಂಡು ಪುತ್ರಾಣಾ ಮಾಚಾರ್ಯ' ಎನ್ನುತ್ತಿದ್ದಾನೆ.

ಮುಂದುವರಿಯುತ್ತದೆ.

ಧಾರಾವಾಹಿ - 1

ಅಚಿತ್ಯ ವ್ಯಕ್ತ ರೂಪಾಯ ನಿರ್ಗುಣಾಯ ಗುಣಾತ್ಮನೇ।
ಸಮಸ್ತಜಗದಾಧಾರಮೂರ್ತಯೇ ಬ್ರಹ್ಮಣೇ ನಮಃ॥



# ಸನಾತನ ಧರ್ಮದಲ್ಲಿ ಜ್ಯೋತಿಷ್ಯ ಶಾಸ್ತ್ರದ ಮಹತ್ವ

ಜ್ಯೋತಿ ಎಂದರೆ ಬೆಳಕು ಜ್ಞಾನ. ನಮ್ಮ ದೈನಂದಿನ ಬದುಕಿನಲ್ಲಿ ಸಂಭವಿಸುವ ಕತ್ತಲೆ, ಅಜ್ಞಾನಗಳಿಗೆ ದಾರಿ ದೀಪವಾಗಿ ಬೆಳಕಿನ ಕಡೆಗೆ, ನಡೆಸುವ ಸಾಧನವೇ ಜ್ಯೋತಿಷ್ಯ ಶಾಸ್ತ್ರ. ಈ ಜ್ಯೋತಿಷ್ಯ ಶಾಸ್ತ್ರವನ್ನು ನಮ್ಮ ಸನಾತನ ಧರ್ಮದಲ್ಲಿ ಋಷಿಮುನಿಗಳು ಆಳವಾಗಿ ಅಧ್ಯಯನ ಮಾಡಿ ಮಾನವರ ಕಲ್ಯಾಣಕ್ಕಾಗಿ ದರ್ಪಣದಂತೆ, ದಿಕ್ಸೂಚಿಯಂತೆ ನೀಡಿದ್ದಾರೆ. ಇಂದು ನಮಗೆ ಜ್ಯೋತಿಷ್ಯ ಅರಿಯಲು ಹಲವಾರು ಗ್ರಂಥಗಳನ್ನು ಅವರು ರಚಿಸಿ ನಮಗೆ ಕೊಡುಗೆಯಾಗಿ ನೀಡಿದ್ದಾರೆ.

"ಜ್ಯೋತಿಷ ಸೂರ್ಯಾದಿ ಗ್ರಹಾಣಾಂ ಬೋಧಕಂ ಶಾಸ್ತ್ರಂ' ಎಂಬಂತೆ ಜ್ಯೋತಿಷ್ಯವು ಸೂರ್ಯ ಮತ್ತು ಅದರ ಪರಿವಾರ ಗ್ರಹಗಳ ಜ್ಞಾನವನ್ನು ತಿಳಿಸುತ್ತದೆ.

ಅಂಧಕಾರವು ಸಾಮಾನ್ಯವಾಗಿ ಎಲ್ಲರಿಗೂ ಭಯವನ್ನು ಉಂಟು ಮಾಡುತ್ತದೆ. ಒಂದು ಜ್ಯೋತಿಯ ಪ್ರಕಾಶದಿಂದ ಹೇಗೆ ಅಂಧಕಾರ ತೊಲಗಿ ಬೆಳಕು ಹರಿಯುತ್ತಿದೆಯೋ, ಆ ಬೆಳಕಿನಿಂದ ಭಯವು ತೊಲಗಿ ಧೈರ್ಯ ಉಂಟಾಗುತ್ತದೆಯೋ ಹಾಗೆಯೇ ಜ್ಯೋತಿಷ್ಯವು ಸಹ ಮಾನವರ ಅಂಧಕಾರ ಗಳಿಗೆ ಜ್ಯೋತಿಯಾಗಿ ದಾರಿತೋರುತ್ತದೆ.

ನಮ್ಮ ವೈದೀಕ ಸಂಸ್ಕೃತಿಯ ತಳಪಾಯ ವೇದಗಳು, ಈ ವೇದಗಳು ನಮ್ಮ ಒಳಿತಿಗಾಗಿ ಯಜ್ಞ ಕರ್ಮಗಳನ್ನು ಹೇಳಿದೆ. ವೇದಗಳು ಯಜ್ಞ ಮಾಡುವುದಕ್ಕೆ ಹೇಳಿದರೆ, ಆ ಯಜ್ಞ ಮಾಡಲು ನಿರ್ದಿಷ್ಟ ಕಾಲವನ್ನು ಜ್ಯೋತಿ ಷ್ಯವು ತಿಳಿಸುತ್ತದೆ.

ಇಲ್ಲಿ ಜ್ಯೋತಿಷ್ಯವೆಂದರೆ ಕೇವಲ ಫಲ ಹೇಳುವ ಭಾಗವೆಂದು ತಿಳಿಯ ಬಾರದು ಜ್ಯೋತಿಷ್ಯದಲ್ಲಿ, ಎರಡು ಭಾಗಗಳಿವೆ. ಅವುಗಳು ಗಣಿತಭಾಗ ಮತ್ತು ಫಲಿತಭಾಗ. ಗಣಿತ ಭಾಗದಿಂದ ಗ್ರಹಗಳ ಚಲನ, ಸ್ಥಿತಿ. ಅವಸ್ತಗಳನ್ನು ತಿಳಿ ಸಿದರೆ, ಫಲಿತಭಾಗವು ಗ್ರಹಗಳಿಂದ ಉಂಟಾಗುವ ಶುಭಾಶುಭ ಫಲಗಳನ್ನು ತಿಳಿಸುತ್ತದೆ. ಈ ಎರಡೂ ಭಾಗಗಳು ಸೇರಿ ಜ್ಯೋತಿಷ್ಯ ಶಾಸ್ತ್ರವಾಗಿದೆ.

ಈ ಜ್ಯೋತಿಷ್ಯ ಶಾಸ್ತ್ರವು ನಾವು ಪ್ರತ್ಯಕ್ಷವಾಗಿ ಕಾಣಬಹುದಾದ ಗ್ರಹಗಳು ಆಧಾರಿತವಾಗಿದೆ. ಹಾಗಾಗಿಯೇ,

ವಿಫಲಾನಿ ಅನ್ಯಶಾಸ್ತ್ರಾಣಿ ವಿವಾದಾಸ್ತೇಷು ಕೇವಲಮ್ ।
ಪ್ರತ್ಯಕ್ಷಂ ಜ್ಯೋತಿಷಂ ಶಾಸ್ತ್ರಂ ಚನ್ದ್ರಾರ್ಕೌ ಯತ್ರಸಾಕ್ಷಿಣೌ॥

ಗ್ರಹಗಳ ಸ್ಥಿತಿಯನ್ನು ಆದರಿಸಿರುವುದರಿಂದ ಗ್ರಹಗಳು ಪ್ರತ್ಯಕ್ಷವಾಗಿ ನಮಗೆ ದೃಕ್‌ಗೋಚರವಾಗಿರುವುದರಿಂದ ಜ್ಯೋತಿಷ್ಯ ಶಾಸ್ತ್ರವು ಅನ್ಯ




- ಆರ್. ಶ್ರೀನಿಧಿ
99705 65978

ಶಾಸ್ತ್ರಗಳಂತೆ ತಾರ್ಕಿಕ ದೃಷ್ಟಿಯಲ್ಲಿ ಪ್ರಶ್ನಾತೀತವಾಗಿ ಉಳಿದಿಲ್ಲ. ಸೂರ್ಯ-ಚಂದ್ರರೇ ಸ್ಪಷ್ಟವಾಗಿ ಕಾಣಿಸುವುದರಿಂದ, ಈ ಗ್ರಹಗಳ ಆಧಾರದಿಂದ ಉಂಟಾಗಿರುವ ಜ್ಯೋತಿಷ್ಯ ಶಾಸ್ತ್ರವು ವಿವಾದಕ್ಕೆ ಹಾದಿಯನ್ನು ಮಾಡುವುದೇ ಇಲ್ಲ ಎಂದು ಅರ್ಥ ಮಾಡಿಕೊಳ್ಳಬಹುದು.

### ಜ್ಯೋತಿಷ್ಯ ಶಾಸ್ತ್ರದ ಹಿರಿಮೆ

ಯಥಾ ಶಿಖಾ ಮಯೂರಾಣಾಂ ನಾಗಾನಾಂ
ಮಣಯೋ ಯಥಾ।
ತದ್ವತ್ ವೇದಾಙ್ಗ ಶಾಸ್ತ್ರಾಣಾಂ ಜ್ಯೋತಿಷಂ ಮೂರ್ಧಾನಿ
ಸ್ಥಿತಮ್॥

ನವಿಲಿನ ತಲೆಯ ಮೇಲಿರುವ ಶಿಖದಂತೆ, ಹಾವಿನ ಹೆಡೆಯ ಮೇಲಿರುವ ನಾಗಮಣಿಯಂತೆ ಜ್ಯೋತಿಷ್ಯ ಶಾಸ್ತ್ರವು ವೇದಾಂಗಗಳಲ್ಲಿ ಪ್ರಧಾನ್ಯತೆಯನ್ನು ಪಡೆದಿದೆ.

ಜ್ಯೋತಿಷ್ಯ ಗಣಿತವು ದೈನಂದಿನ ಕಾರ್ಯಗಳಲ್ಲಿ ಹೇಗೆ ಉಪಯೋಗವಾಗುತ್ತಿವೆ?

ಈ ಪ್ರಶ್ನೆಗೆ ಉತ್ತರವನ್ನು ಹೇಳುವುದಾದರೆ ನಮ್ಮ ವೈದೀಕ ಧರ್ಮದಲ್ಲಿ ಯಾವುದೇ ಕೆಲಸ ಮಾಡುವುದಾದರೆ, ಅದು ಸಂಕಲ್ಪ ಪೂರ್ವಕವಾಗಿ ಮಾಡಬೇಕು. ಇಲ್ಲಿ ಸಂಕಲ್ಪವೆಂದರೆ ಒಂದು ದೃಢವಾದ ನಿರ್ಧಾರವೆಂದು ಅರ್ಥವೂ ಬರುತ್ತದೆ. ದೇವತೆಗಳ ಸಾಕ್ಷಿಯಾಗಿ, ಗುರು ಹಿರಿಯರ ಸಾಕ್ಷಿಯಾಗಿ ನಾವು ಮಾಡುವ ಕಾರ್ಯದ ಮೊದಲೇ ಸಂಕ್ಷಿಪ್ತವಾಗಿ ಹೇಳವ ಪ್ರಕ್ರಿಯೆಯೇ ಸಂಕಲ್ಪ.

ಈ ಸಂಕಲ್ಪದಲ್ಲಿ ಬ್ರಹ್ಮನ ಪರಮಾಯುವಿನಿಂದ ಹೇಳಿಕೊಂಡು, ಅಭೀಷ್ಟಕಾಲದ ಕಲ್ಪ, ಮನ್ವಂತರ,ಯುಗ, ಚರಣ, ದೇಶ ಮತ್ತು ನಾವು ವ್ಯವಹರಿಸುವ ಸಂವತ್ಸರ, ಇತ್ಯಾದಿಗಳನ್ನು ಉಚ್ಚರಿಸಿ ಮಾಡುವ ಕೆಲಸ,ಎಲ್ಲವು ಸಫಲವಾಗಲೆಂದು ಸಮರ್ಪಣೆ ಮಾಡುವ ಒಂದು ಪ್ರಕ್ರಿಯೆ.

ಈ ಎಲ್ಲಾ ವಿಚಾರಗಳನ್ನು ಪಂಚಾಂಗವೆಂಬ ಸಾಧನದಿಂದ ತಿಳಿಯುತ್ತೇವೆ. ಈ ಪಂಚಾಂಗವು ಖಗೋಳದ ವಿವರಗಳನ್ನು ಗಣಿತಭಾಗವನ್ನು ಹೊಂದಿರುತ್ತದೆ. ಆದ್ದರಿಂದ ಈ ಶಾಸ್ತ್ರವು ಗಣಿತವು ಎಷ್ಟು ಮಹತ್ವವಾದದ್ದು ಎಂದು ತಿಳಿಯಬಹುದು.

ಷಡಂಗಗಳು ಆರು ಇವೇ ವೇದಾಂಗಗಳು.

ಶಿಕ್ಷಾ ವ್ಯಾಕರಣಂ ಛನ್ದೋ ನಿರುಕ್ತಂ ಜ್ಯೋತಿಷಂ ತಥಾ।
ಕಲ್ಪಶ್ಚೇತಿ ಷಡಂಗಾನಿ ವೇದಸ್ಯಾಹುರ್ಮನೀಷಿಣಃ ॥

ಶಿಕ್ಷಾ, ವ್ಯಾಕರಣ, ಛಂದಸ್ಸು, ನಿರುಕ್ತ, ಜ್ಯೋತಿಷ್ಯ, ಕಲ್ಪ, ಈ ಆರು ಸೇರಿ ಷಡಂಗಗಳಾಗಿದೆ. ಈ ಷಡಂಗಗಳೇ ವೇದಗಳ ಅಂಗವನ್ನು ಸೂಚಿಸುತ್ತದೆ.

ಛನ್ದಃ ಪಾದೌತು ವೇದಸ್ಯ ಹಸ್ತೌಕಲ್ಪೋಥ ಪಠ್ಯತೇ ॥
ಜ್ಯೋತಿಷಾಮಯನಂ ಚಕ್ಷುಃ ನಿರುಕ್ತಂ
ಶ್ರೋತ್ರಮುಚ್ಯತೇ॥
ಶಿಕ್ಷಾಘ್ರಾಣಂತು ವೇದಸ್ಯ ಮುಖಂ ವ್ಯಾಕರಣಂ
ಸ್ಮೃತಮ್॥
ತಸ್ಮಾತ್ ಸಾಙ್ಗಮಧೀತ್ಯೈವ ಬ್ರಹ್ಮಲೋಕೇ
ಮಹೀಯತೇ॥

ಛಂದಸ್ಸು ವೇದ ಪುರುಷನ ಕಾಲುಗಳು, ಕಲ್ಪವು ಅವನ ಕೈಗಳು, ಜ್ಯೋತಿಷವು ಕಣ್ಣುಗಳು, ನಿರುಕ್ತವು ಕಿವಿಗಳು, ಶಿಕ್ಷಾ ಮೂಗು, ಮತ್ತು ವ್ಯಾಕರಣವು ಆ ವೇದ ಪುರುಷನ ಮುಖವಾಗಿರುತ್ತದೆ.

ಸಾಮಾನ್ಯವಾಗಿ ಒಬ್ಬ ವ್ಯಕ್ತಿಗೆ ಕಣ್ಣುಗಳೇ ಕರುಡಾಗಿದ್ದರೆ ಹೇಗೆ ಅನುಭವವಾಗುತ್ತದೆಯೋ, ವೇದ ಪುರುಷನ ಕಣ್ಣುಗಳೆಂದು ಹೇಳುವ ಜ್ಯೋತಿಷ್ಯಶಾಸ್ತ್ರವು ಇಲ್ಲದಿದ್ದಲ್ಲಿ ವೇದ ಪುರುಷನ ಸ್ಥಿತಿ ಹೇಗಿದ್ದೀತು?

ಈ ರೀತಿಯಾಗಿ ನಮ್ಮ ಪ್ರಾಚೀನರು ಈ ಶಾಸ್ತ್ರವನ್ನು ವೇದಗಳ ಕಣ್ಣೆಂದು ತಿಳಿದು ಕ್ರಮವಾಗಿ ಪ್ರಕೃತಿಯಲ್ಲಿ ಆಗುವ ಬದಲಾವಣೆಗಳನ್ನು ತಿಳಿಯಲು ಆರಂಭಿಸಿದರು.

ಚಂದ್ರನ ಪೂರ್ಣ ಪ್ರಮಾಣದ ಬಿಂಬ,ಚಂದ್ರನ ಕಲೆಗಳಾದ ಕ್ಷೀಣತ್ವ, ವೃದ್ಧಿತ್ವ, ಚಂದ್ರನೇ ಇಲ್ಲದಿರುವ ಪ್ರಸಂಗ ಎಲ್ಲವನ್ನು ಸೂಕ್ಷ್ಮವಾಗಿ ಅರಿಯುತ್ತಾ ತನ್ನ ಸುತ್ತಮುತ್ತಲು ಆಗುವ ಬದಲಾವಣೆಗಳು, ಅದರಿಂದ, ಉಂಟಾಗುವ ಪರಿಣಾಮಗಳನ್ನು ಹಾಗೆಯೇ ಇನ್ನಿತರ ಗ್ರಹಗಳಿಂದ ಉಂಟಾಗುವ ಬದಲಾವಣೆಗಳು,ಅವುಗಳ ಚಲನಗಳು, ಆದರಿಂದ, ಭೂಮಿಯ ಮೇಲಿನ ಪ್ರಭಾವ ಸೂರ್ಯನಿಂದ ಆಗುವ ಹಗಲು ರಾತ್ರಿಗಳು, ಹವಾಮಾನದ ವ್ಯತ್ಯಾಸಗಳು ಕಾಲಗಳು ಎಲ್ಲವನ್ನು ಕುತೂಹಲವಾಗಿ ಗಮನಿಸಿ ಅಧ್ಯಯನ ಮಾಡಿ ಹಲವಾರು ಸಂಶೋಧನೆ, ಆವಿಷ್ಕರಣ, ಪರೀಕ್ಷೆಗಳನ್ನು ನಡೆಸಿ ನಕ್ಷತ್ರಗಳು ಮತ್ತು ಗ್ರಹಗಳು, ಅವುಗಳ ದೂರ, ಗಾತ್ರ, ವೇಗ, ಪರಿಣಾಮಗಳನ್ನು ಸಂಗ್ರಹಿಸಿ ಅದರಿಂದಾಗುವ ಫಲಗಳನ್ನು ತಿಳಿಸುವ ಸಾಧನವಾಗಿ ಈ ಜ್ಯೋತಿಷ್ಯ ಶಾಸ್ತ್ರವನ್ನು ರಚಿಸಿ ನಮ್ಮ ಉದ್ಧಾರಕ್ಕೆ ಕಾರಣರಾಗಿದ್ದಾರೆ.

ಕಾಲಕ್ರಮೇಣವಾಗಿ ಇದರೊಂದಿಗೆ ಹಸ್ತ ಸಾಮುದ್ರಿಕಾ, ಪ್ರಶ್ನಶಾಸ್ತ್ರ, ಶಕುನ ಶಾಸ್ತ್ರ, ಸಂಖ್ಯಾಶಾಸ್ತ್ರ, ವಾಸ್ತುಶಾಸ್ತ್ರ ಎಲ್ಲವೂ ಸೇರಿ ಒಂದು ಬೃಹದ್ಗಾತ್ರದ ಶಾಸ್ತ್ರವಾಗಿ "ಜ್ಯೋತಿಷ್ಯ" ಎಂದು ಉಪಲಬ್ದವಿದೆ. ಈ ಜ್ಯೋತಿಷ್ಯವು ಎರಡು ಭಾಗಗಳಾಗಿ ಮೊದಲನೆಯದು ಗಣಿತ ಭಾಗವಾಗಿಯೂ ಮತ್ತು ಎರಡನೆಯ ಭಾಗ ಫಲಿತ ಭಾಗವಾಗಿದೆ.

- ಮುಂದುವರಿಯುವುದು.



ಧಾರಾವಾಹಿ- 4

# ಆಳ್ವಾರುಗಳು ಕಂಡ ತಿರುವೇಂಗಡ

- ಎಂ. ಆರ್. ನರಸಿಂಹನ್


**ಹಿಂದಿನ ಸಂಚಿಕೆಯಿಂದ**

ರಾಮಾನುಜರ ಶಿಷ್ಯರು ಪಿಳ್ಳಾನ್ ಎನ್ನುವವರು. ಈ ಪಿಳ್ಳಾನ್‌ರವರ ತಂದೆ ನಾಲ್ಕು ಸಾವಿರ ದಿವ್ಯ ಪ್ರಬಂಧದ ಪ್ರಾವಿಣ್ಯತೆ ಪಡೆದಿದ್ದರು ಎಂದು ಕೆ.ಕೆ.ಎ.ವೆಂಕಟಾಚಾರಿಯವರು ಹೇಳುತ್ತಾರೆ. ರಾಮಾನುಜರ ಸಮವಯಸ್ಕರೋ ಅಥವಾ ಅವರಿಗಿಂತ ಹಿರಿಯರೋ ಆಗಿದ್ದ ಇವರಿಗೇ (ಪಿಳ್ಳಾನ್ ಅವರ ತಂದೆಯವರಿಗೆ) ಆಳ್ವಾರ್ ಪ್ರಬಂಧಗಳು ಕರಗತವಾಗಿದ್ದಾಗ, ಅವರ ಸುಪರಿಚಿತರೂ, ಆತ್ಮೀಯರೂ ಎನಿಸಿದ ರಾಮಾನುಜರಿಗೆ ಆಳ್ವಾರ್ ಪ್ರಬಂಧಗಳ ವಿಚಾರ ತಿಳಿದಿರಬಹುದಾದ ಸಾಧ್ಯತೆ ಇರುತ್ತದೆಯಲ್ಲವೆ?

ರಾಮಾನುಜರು ತಿರುವಾಯ್ಮೊಳಿಯ ರಹಸ್ಯಾರ್ಥಗಳನ್ನು ತಿಳಿದಿದ್ದರು.ಅವುಗಳನ್ನು ಶಿಷ್ಯರಿಗೆ ಸ್ವಾರಸ್ಯವಾಗಿ ಕಾಲ ಕ್ಷೇಪ (ಬೋಧನೆ - ವಿವರಣೆ) ಮಾಡುತ್ತಿದ್ದರು ಎಂದು ಮೇಲೆಯೇ ತಿಳಿಸಿದ್ದೇನೆ. ಒಂದು ಸಲ ತಿರುವಾಯ್ಮೊಳಿಯ ಎಂದ 'ತಂದೈ ತಂದೈ' ಎನ್ನುವ ಪಾಶುರದ ಅರ್ಥ ವಿವರಣೆ ಮಾಡುತ್ತಿರಬೇಕಾದರೆ ಅವರು ಭಾವಪರವಶರಾಗಿ ಅವರ ಕಣ್ಣುಗಳಿಂದ ಧಾರಾಕಾರವಾಗಿ ಕಣ್ಣೀರು ಸುರಿಯಲಾರಂಭಿಸಿತಂತೆ! ಅದರಲ್ಲಿ ವೇಂಗಡದೊಡೆಯನು ಪುಷ್ಪಗಳಿಂದ ಅಲಂಕೃತವಾಗಿ ಸುರನರರುಗಳಿಂದ ಸೇವೆಗೊಳ್ಳುತ್ತಿರುವ ದಿವ್ಯದರ್ಶನದ ವರ್ಣನೆ ಇದೆ. ಆದರೆ ಇಂದೋ ವೇಂಗಡದಲ್ಲಿ ದೇವರಿಗೆ ಪುಷ್ಪ ಕೈಂಕರ್ಯ ಮಾಡಲು ಒಬ್ಬರೂ ಇಲ್ಲದೆ, ಆ ದೇವರಿಗೆ ಪುಷ್ಪಾಲಂಕಾರವೇ ಇಲ್ಲವೆನ್ನುವ ಯೋಚನೆ ಅವರನ್ನು ಬಾಧಿಸಲು ಅವರು ಕಣ್ಣೀರು ಸುರಿಸುತ್ತಿದ್ದಾರೆ.

ಸ್ವಲ್ಪ ಯೋಚಿಸಿದ ಅವರು ಅನಂತಾರ್ಯರೆನ್ನುವ ತಮ್ಮ ಅತ್ಯಾಪ್ತಶಿಷ್ಯರನ್ನು ಆ ಕೆಲಸಕ್ಕೆ ನಿಯೋಜಿಸಿ ತಿರುಮಲೆಗೆ ಕಳುಹಿಸಿಕೊಟ್ಟರಂತೆ! ಈ ಸೊಗಸಾದ ಸಂದರ್ಭ ರಾಮಾನುಜರ ಚರಿತ್ರೆಯಲ್ಲಿ ವಿವರಣೆಗೊಂಡಿದೆ. ರಾಮಾನುಜರಿಗೆ ತಿರುವಾಯ್ಮೊಳಿಯಲ್ಲಿ ಅಸಾಧಾರಣ ಪ್ರಾವಿಣ್ಯತೆಯಿದ್ದಿತು.ಅದೇ ಮುಂದೆ ಪಿಳ್ಳಾನ್ ಅವರಿಗೆ ವ್ಯಾಖ್ಯಾನವನ್ನು ಬರೆಯಲು ವಸ್ತುವಾಯಿತು ಎಂದು ಬೇರೆಯಾಗಿ ಹೇಳಬೇಕಾಗಿಲ್ಲ.

ರಾಮಾನುಜರು ಸನ್ಯಾಸಿಗಳು, ಅವರು ಭಿಕ್ಷೆಯನ್ನು ಪರಿಗ್ರಹಿಸಿ ದೈನಂದಿನ ವ್ಯಾಪಾರ ನಡೆಸುತ್ತಿದ್ದರು. ಹೀಗೆ ಇವರು ಭಿಕ್ಷೆಗಾಗಿ ಹೋಗುವಾಗ ಅವರಿಗೆ ಅತಿ ಪ್ರಿಯವೆನಿಸಿದ್ದ 'ಆಂಡಾಳ್'ವಿರಚಿತ 'ತಿರುಪ್ಪಾವೈ' ಅನ್ನು ಅನುಸಂಧಾನ



ಮಾಡಿಕೊಂಡು ಹೋಗುತ್ತಿದ್ದ ಪದ್ಧತಿ ಇದ್ದಿತು. ಆದ್ದರಿಂದಲೇ ಜನರು ಇವರನ್ನು 'ತಿರುಪ್ಪಾವೈಜೀಯರ್' ಎಂದು ಅಭಿಮಾನದಿಂದ ಆದರಿಸುತ್ತಿದ್ದರು ಎಂದಾಗ ಆಂಡಾಳ್ ತಿರುಪ್ಪಾವೈ ಅವರಿಗೂ ತಿಳಿದಿದ್ದಿತು. ಜನರಿಗೂ ಪರಿಚಯಗೊಂಡಿದ್ದಿತು. ತಿರುಪ್ಪಾವೈ ತಿಳಿದಿದ್ದ ಇವರಿಗೆ ಆಂಡಾಳ್ ವಿಚಾರವೂ ತಿಳಿದಿದ್ದಿತು ಎಂಬುವುದು ನಿರ್ವಿವಾದ ಸಂಗತಿಯೇ!

ಆಂಡಾಳ್ ರಚನೆ ಇನ್ನೊಂದಾದ "ನಾಚ್ಚಿಯಾರ್ ತಿರುಮೊಳಿ"ಯಲ್ಲಿ ಅವಳು "ನೂರುತಡಾ ಅಕ್ಕಾರವಡಿಶಲ್" (ಒಂದು ಪ್ರಮಾಣದ ಕ್ಷೀರಾನ್ನ) ಅನ್ನು ತಿರುಮಾಲಿರುಂಶೋಲೈ ಕ್ಷೇತ್ರದ ಸುಂದರ ಬಾಹು ಸ್ವಾಮಿಗೆ ಅರ್ಪಿಸುವುದಾಗಿ ಹಂಬಲು ತೋಡಿಕೊಂಡಿದ್ದಾಳೆ. ಆದರೆ ಅವಳಿಗೆ ಇದು ಸಾಧ್ಯವಾಗಲಿಲ್ಲ ಎಂಬುದನ್ನು ಅರಿತ ರಾಮಾನುಜರು ಅವಳ ಅಭೀಷ್ಟವನ್ನು ಪೂರೈಸಲು ತಾವೇ "ನೂರು ತಡಾ ಅಕ್ಕಾರವಡಿಶಲ್" ಅನ್ನು ಅವಳ ಪರವಾಗಿ ಸುಂದರ ಬಾಹು ಸ್ವಾಮಿಗೆ ನಿವೇದಿಸಿದರೆಂಬುದಾಗಿ ರಾಮಾನುಜರ ಚರಿತ್ರೆಯಲ್ಲಿ ವರ್ಣಿತವಾಗಿದೆ.

ಆಂಡಾಳ್ ಕಾಲವೇ ಬೇರೆ, ರಾಮಾನುಜರ ಕಾಲವೇ ಬೇರೆ. ಸಹೋದರಿಯ ಮನೋ ಭೀಷ್ಟವನ್ನು ನೆರವೇರಿಸಿದ ಸೋದರ ನಂತಾದ ರಾಮಾನುಜರನ್ನು 'ಗೋದಾಗ್ರಜ' ರೆಂಬುದಾಗಿ ಜನ ಆದರಿಸಿದರು ರಾಮಾನುಜರ ಅಷ್ಟೋತ್ತರ ನಾಮಾವಳಿಯಲ್ಲಿ 'ಗೋದಾಗ್ರಜ'ರೆಂದು ಬರುವ ನಾಮಕ್ಕೆ ಈ ಅರ್ಥವನ್ನು ಎಲ್ಲರೂ ವಿವರಿಸುತ್ತಾರೆ. ಇದರಿಂದ ರಾಮಾನುಜರಿಗೆ ಆಂಡಾಳ್ ಮತ್ತು ಅವಳ ಪ್ರಬಂಧಗಳ ಅರಿವು ಅವಳ ಬಗ್ಗೆ ಗೌರವ ಇದ್ದಿತೆನ್ನಲು ಇದಕ್ಕಿಂತ ಹೆಚ್ಚಿನ ಪ್ರಮಾಣ ಬೇಕೆ?

ಆಂಡಾಳ್ ಸಾಕುತಂದೆ ಪೆರಿಯಾಳ್ವಾರ್, ಆಂಡಾಳ್ ಚರಿತ್ರೆಯನ್ನು ಆಮೂಲಾಗ್ರವಾಗಿ ಅರಿತಿದ್ದ ರಾಮಾನುಜರಿಗೆ ಪೆರಿಯಾಳ್ವಾರ್ ವಿಚಾರವೂ, ಅವರು ಪ್ರಬಂಧಗಳ ಬಗ್ಗೆ ತಿಳುವಳಿಕೆಯೂ ಇರಲೇ ಬೇಕಲ್ಲವೆ? ಆಚಾರ್ಯರು ಆಳ್ವಾರುಗಳ ದಿವ್ಯ ಪ್ರಬಂಧಗಳನ್ನು ಅನುಸಂಧಾನ ಮಾಡುವ ಕ್ರಮವನ್ನು ಶ್ರೀರಂಗದಲ್ಲಿಯೂ,ತಿರುಪತಿಯಲ್ಲಿಯೂ ಅನುಷ್ಠಾನಕ್ಕೆ ತಂದರೆಂದು ಆಚಾರ್ಯರ ಚರಿತ್ರೆಯಿಂದ ತಿಳಿಯುತ್ತದೆ. ಇದನ್ನು ಕೆ.ಕೆ.ಎ.ವೆಂಕಟಾಚಾರಿಯವರು ತಮ್ಮ ಪುಸ್ತಕದಲ್ಲಿ ವಿವರಿಸಿರು ವುದನ್ನು ಈ ಮೇಲೆ ತಿಳಿಸಿದ್ದೇನೆ.

ಇನ್ನೂ ಹೇಳಬೇಕೆಂದರೆ ದೇವಸ್ಥಾನಗಳಲ್ಲಿ ಆಳ್ವಾರ್ ಪಾಶುರಗಳನ್ನು ಅನುಸಂಧಾನ ಮಾಡುವ ಕ್ರಮವನ್ನು ತಿರುಮಂಗೈಆಳ್ವಾರ್ ಶ್ರೀರಂಗದಲ್ಲಿ ಮೊದಲಿಗೆ ಜಾರಿಗೆ ತಂದರಂತೆ! ನಂತರ ಈ ಕ್ರಮ ನಿಂತು ಹೋಗಿರಲು ಆಚಾರ್ಯ ನಾಥಮುನಿಗಳು 'ದೇವಗಾನ' ಎನ್ನುವ ಸಂಗೀತ ವಿಶೇಷದ ಮೂಲಕ ಈ ಪಾಶುರಗಳನ್ನು ಹಾಡಿಸುವ ಏರ್ಪಾಡನ್ನು ಜಾರಿಗೆ ತಂದು ಅದು ಸರಿಯಾಗಿ ಬೆಳೆದು ಬರದೇ ಇರಲು ದೇವಸ್ಥಾನಗಳಲ್ಲಿ ಸೇವಾ ಕಾಲ ಪದ್ಧತಿಯ ಮೂಲಕ ಅನುಸಂಧಾನ ಕ್ರಮವನ್ನು ನೇರ್ಪುಗೊಳಿಸಿದರೆಂದು ಇತಿಹಾಸ ಸಾರುತ್ತದೆ. ಇದನ್ನು ರಾಮಾನುಜರು ಶ್ರೀವೈಷ್ಣವ ಪ್ರಮುಖ ದೇವಸ್ಥಾನಗಳಲ್ಲಿ ರೂಢಿಗೆ ತಂದರೆಂಬುದಾಗಿ ಪ್ರತೀತಿ.

ಆಚಾರ್ಯ ರಾಮಾನುಜರು ತಮಿಳಿನಲ್ಲಿ ಮೊಟ್ಟ ಮೊದಲಿಗೆ ವೈಷ್ಣವ ಸ್ತುತಿರೂಪವಾದ ಸಾಹಿತ್ಯ ರಚನೆ ಮಾಡಿದ ಮೊದಲಾಳ್ವಾರ್‌ಗಳ ಪಾಶುರಗಳ ಸೊಬಗಿಗೆ ಮನಸೋತು ಮೂಗಿನ ಮೇಲೆ ಬೆರಳಿಟ್ಟುಕೊಂಡರಂತೆ! ತಮಿಳಿನಲ್ಲೂ ಇಷ್ಟು ಸೊಗಸಾದ ಪಾಶುರಗಳನ್ನು ರಚಿಸಲು ಸಾಧ್ಯವೇ ಎಂದು ಆಶ್ಚರ್ಯಗೊಂಡ ಅವರು ಈ ಪಾಶುರಗಳನ್ನು ವೇಂಗಡ ಮೊಡೆಯನಿಗೇ ಅಂಕಿತಗೊಳಿಸಿ ತಿರುಮಲೆಯ ಅಧ್ಯಯನೋತ್ಸವ ಕಾಲದಲ್ಲಿ ಮೊದಲಿಗೇ ಈ ಮೂರು ತಿರುವಂದಾದಿಗಳನ್ನು ಅನುಸಂಧಾನ ನಡೆಸುವ ಕ್ರಮವನ್ನು ಜಾರಿಗೆ ತಂದರೆಂಬುದಾಗಿ 'ತಿರುಮಲೆಯ ಕೋಯಿಲೊಳುಗು' ಎನ್ನುವ ದಾಖಲೆ ಪುಸ್ತಕ ತಿಳಿಸುತ್ತದೆ.

ತಿರುವೇಂಗಡಮೊಡೆಯನನ್ನು "ಶೆಂದಮಿಳ್‌ಪಾಡು ವಾರ್‌ತಾಂ ವಣಂಗುಂದ್ದೈವಂ" ಎಂದು ಭಾವ ಪರವಶರಾಗಿ ಆಚಾರ್ಯರು ಮಂಗಳಾಶಾಸನ ಮಾಡಿದರೆಂದು ತಿಳಿಯುತ್ತದೆ.ಈ ರೀತಿ ರಾಮಾನುಜರಿಗೆ ಮೊದಲಾಳ್ವಾರ್ ಮೂವರ ವಿಚಾರ ತಿಳಿದಿತ್ತೆಂಬ ಅಂಶ ಈ ವಿವರದಿಂದ ಅರಿಕೆಯಾಗುತ್ತದೆ.

(ಸಶೇಷ)

(ಹಿಂದಿನ ಸಂಚಿಕೆಯಿಂದ)

ಎಂದು ವೈಷ್ಣವಾಗಮ ಶಾಸ್ತ್ರಗಳಲ್ಲಿ ಹೇಳಿದ ಪ್ರಕಾರ "ವೆಂಗಡತ್ತುಡೈ ವಾರ್"ಎಂಬ ಹಿಂದಿನ ವೇಂಕಟೇಶ್ವರ ಉತ್ಸವಮೂರ್ತಿ ಬ್ರಹ್ಮೋತ್ಸ ವಾರಂಭದ ದಿನದಂದು ಧ್ವಜಾರೋಹಣದ ನಂತರ ತಿರುಮಲೆಯಿಂದ ಕೆಳಗಿಳಿದು ಮಹಾನಗರವೂ ರಾಜಸ್ಥಾನವೂ ಆದ ಶ್ರೀಶುಕಪುರಿಯಲ್ಲಿ ತಿರುಚಾನೂರಲ್ಲಿ ವಿಜೃಂಭಿಸಿದಲ್ಲಿ ಪ್ರತಿದಿನವೂ ಪ್ರಾತಃಸಾಯಂಕಾಲದಲ್ಲಿ ವಾಹನಗಳೊಡನೆ ಬೀದಿ ಬೀದಿಗಳಲ್ಲಿ ಮೆರವಣಿಗೆಗೈದು ಸಮಸ್ತ ರಾಜೋಪ ಚಾರಗಳಿಂದ ಸೇವಾಕರ್ತರನ್ನು ಧನ್ಯರನ್ನಾಗಿ ಮಾಡಿ ಒಂಭತ್ತನೇ ದಿನ ಸಾಯಂಕಾಲದಲ್ಲಿ ತಿರುಮಲೆಯನ್ನೇರಿ ಧ್ವಜಾರೋಹಣವನ್ನು ಸ್ವೀಕರಿಸಿ ಮಾಡುವ ಎಲ್ಲಾ ನೇಮಗಳನ್ನು ಶ್ರೀಭಗವದ್ರಾಮಾನುಜಾಚಾರ್ಯರು ಚಿಂತಿಸಿ, ದಿವ್ಯದೇಶದಲ್ಲೇ (ತಿರುಮಲಯಲ್ಲೇ) ಪ್ರತಿ ವರ್ಷವೂ ಸ್ವಾಮಿಗೆ ಬ್ರಹ್ಮೋತ್ಸವವನ್ನು ಜರುಗಿಸಬೇಕೆಂದು ಸಂಕಲ್ಪಿಸಿದರು. ಸ್ವಾಮಿ ಪುಷ್ಕರಿ ಣಿಗೆ ಪೂರ್ವದಿಕ್ಕಿಗೆ ದಕ್ಷಿಣಾಭಿಮುಖವಾಗಿ ಒಂದು ರಾಜಬೀದಿಯನ್ನು ನಿರ್ಮಿಸಿ, ಅಲ್ಲಿ ಹಲವಾರು ವಾಸಿಸಲು ಆಶ್ರಯಗಳನ್ನು ಕಟ್ಟಿಸಿ ಉತ್ಸವ ಕಾಲ ಆರಂಭವಾಗುತ್ತಲೇ ಆ ರಾಜಬೀದಿಗೆ ಉತ್ತರಾಭಿಮುಖವಾಗಿ ತೆರಳಿ ಮತ್ತೆ ಮರಳಿ ದಕ್ಷಿಣಾಭಿಮುಖವಾಗಿ ವಿಜಂಭೃಣೆಯಿಂದ ವಿಹರಿಸುವಂತೆ ನಿಯಮವನ್ನು ವಿಧಿಸಿದ್ದಾರೆ.

# ತಿರುಮಲೆ ಕಾಲಮಾನಾಚರಣೆಗಳು

- ಮೂಲ . ಡಾ|| ಎನ್. ನರಸಿಂಹಾಚಾರ್ಯ
- ಅನುವಾದ : ಶ್ರೀಮತಿ



ವೇಂಗಡತ್ತೈವಾನ್ (ಉತ್ಸವಮೂರ್ತಿ) ತನ್ನ ಅವತಾರವಾದ ಅದನ್ನು ವೈಭವೋಪೇತವಾಗಿ ಆಚರಿ ಸಿದರೂ, ಈ ದಿವ್ಯ ನಗರದ ಅಭಿವೃದ್ಧಿಗೆ ಅನುಕೂಲ ಕರವಾಗಿಲ್ಲವೆಂಬ ಸತ್ಯವರಿತು, ಈ ಸ್ಥಳ ಶುದ್ಧವಾಗಿರುವ ಐತಿಹ್ಯವನ್ನು ಹೊಂದಿರುವುದರಿಂದ, ನಗರಾಭಿವೃದ್ಧಿಗಾಗಿ ಶ್ರೀವೇಂಕಟಾಚಲಪತಿ (ಮೂಲವಿರಾಟ್ಟು) ಕನಕಲತಾ ಯೋಗದಲ್ಲಿ ಅವತರಿಸಿದನು. ಈ ಸನ್ನಿಧಿಯಲ್ಲಿ ದಿವ್ಯೈಶ್ವರ್ಯವು ಉತ್ತರೋತ್ತರವಾಗಿ ಗುಣಿಸಲು ಉತ್ಸವಮೂರ್ತಿ ಯಾದ ವೇಂಗಡ ಚೈವಾನ್‌ನನ್ನು ಕೌತುಕಮೂರ್ತಿ ಯಾಗಿಯೂ, ಕೌತುಕಮೂರ್ತಿಯಾದ 'ಮಲೈಕುನಿ ಪೆರುಮಾಳ್‌ನ್ನು (ವಿಗ್ರಹವನ್ನು) ಉತ್ಸವಮೂರ್ತಿ ಯಾಗಿಯೂ ಆರಾಧಿಸುವಂತೆ-ಯಂತ್ರೋದ್ಧರಣದ ಪೂರ್ವದಲ್ಲಿ ಆವಾಹನೆಯನ್ನು,ಮಾಡಿ ಆರಾಧನೆ ಗಳನ್ನು ಪೂರೈಸುವಂತೆ ಸಂಕಲ್ಪ ಮಾಡಿದ್ದಾರೆ. ಬಿಂಬಾಧರನ (ಶೆಂಗನಿವಾಯನ್) ವಂಶದಲ್ಲಿ ಹುಟ್ಟಿದ ಪರಮಭಾಗವತರಾದ ಶ್ರೀಹಸ್ತಗಳಿಂದಲೇ ಶ್ರೀ ವೇಂಕಟೇಶ್ವರನ ನಿತ್ಯಾರಾಧನೆ ಜರುಗಿಸುವಂತೆ -

ಧಾರಾವಾಹಿ - 4

## ಶ್ರೀ ವೆಂಕಟೇಶ್ವರ ನಿತ್ಯ ಅನ್ನದಾನ ಟ್ರಸ್ಟ್

- ಅನ್ನದಾನ ಸಮಂ ದಾನಂ ತ್ರಿಲೋಕೇಷು ನ ವಿದ್ಯತೇ - ಎಂದರೆ ಅನ್ನದಾನದ ಸಮನಾದ ಮತ್ತೊಂದು ದಾನ ಮೂರು ಲೋಕಗಳಲ್ಲಿಯೂ ಇಲ್ಲ. ಎಲ್ಲ ದಾನಗಳಲ್ಲಿ ಅನ್ನದಾನ ಅತಿಶ್ರೇಷ್ಠ.
- 1984ರಲ್ಲಿ ತಿ.ತಿ.ದೇವಸ್ಥಾನಗಳಿಂದ ಆರಂಭವಾದ ಈ ಟ್ರಸ್ಟ್ ಪ್ರಸ್ತುತ 75 ಸಾವಿರ ಮಂದಿ ಯಾತ್ರಿಕರಿಗೆ ಭೋಜನ ಸದುಪಾಯವನ್ನು ಪ್ರತಿದಿನವೂ ತಿರುಮಲೆಯ ಅತಿದೊಡ್ಡ ಅನ್ನದಾನ ಭವನವಾದ ಮಾತೃಶ್ರೀ ತರಿಗೊಂಡ ವೆಂಗಮಾಂಬ ಅನ್ನದಾನ ಸಮುದಾಯದಲ್ಲಿ ಒದಗಿಸುತ್ತಿದೆ.
- ಇಲ್ಲಿಯೇ ಅಲ್ಲದೆ, ದೇವರ ದರ್ಶನದ ಸರದಿಯಸಾಲು, ಕಾಯುವ ಕೋಣೆಗಳು, ತಿ.ತಿ.ದೇ. ಆಸ್ಪತ್ರೆಗಳ ರೋಗಿಗಳು, ತಿ.ತಿ.ದೇ. ವಿದ್ಯಾಸಂಸ್ಥೆಯ ವಿದ್ಯಾರ್ಥಿಗಳಿಗೂ ಸಹ ಉಚಿತ ಭೋಜನ ಸೌಲಭ್ಯ ದೊರೆಯುತ್ತಿದೆ.
- ಈ ಟ್ರಸ್ಟ್‌ಗೆ ಉದಾರವಾಗಿ ವಂತಿಗೆಯನ್ನು ನೀಡುತ್ತ ಈ ಧರ್ಮಕಾರ್ಯದಲ್ಲಿ ಭಾಗಿಗಳಾಗಿರಿ. ಅಧಿಕ ಪ್ರಮಾಣದ ತರಕಾರಿಗಳನ್ನು ಸಹ ಈ ಟ್ರಸ್ಟ್‌ಗೆ ವಂತಿಗೆ ನೀಡಬಹುದು.

ಇತರ ವಿವರಗಳಿಗೆ 0877 - 2264376 ಅಥವಾ 226 4237 ಗೆ ಕರೆ ಮಾಡಿರಿ.

**website - www.tirumala.org**
**e-mail - svannadanamtrust@tt devasthanams.org.**

"ಗೋಕ್ಷೀರೈರ್ವೇ ಕುಂಭಸ್ತೇರ್ವಲ್ಮೀಕವಿವರೋದರಮ್,
ಅನುಸ್ಯೂತಾಚ್ಛಿನ್ನಧಾರೈ ರಭಿಷೇಕಂ ಪ್ರಚಕ್ರಮೇ
ಕ್ರಿಯಮಾಣಾಭಿಷೇಕೇಣ ವಲ್ಮೀಕವಿವರಾಂತರಾತ್,
ಆವಿರ್ಭೂವ ಭಗವಾನ್ ವರಾಹವಪುರೀಶ್ವರಃ"

(ಬಂಗಾರದ ಕಳಸದಂತೆ ಹಸುವಿನ ಹಾಲಿನ ನಿರಂತರ ಧಾರೆಯೆರೆದು ಪುಟ್ಟರಂಧ್ರದಲ್ಲಿ ಅಭಿಷೇಕ ವಾರಂಭವಾಯಿತು ಹಾಗೆ ಉಂಟಾದ ಅಭಿಷೇಕದ ರಂಧ್ರದ ಒಳಗಿಂದ ವರಾಹ ರೂಪಿಯಾದ ಸರ್ವ ನಿಯಂತ್ರಕವಾದ ಭಗವಂತನು ಆವಿರ್ಭ ವಿಸಿದನು)

ಅಂದರಂತೆಯೇ ಭೂಗೋಳವರಾಹ (ಪುರಾಣ)ದ ಆರನೇ ಅಧ್ಯಾಯದಲ್ಲಿರುವ ವರಾಹ, ಪದ್ಮಪುರಾಣದಲ್ಲಿ ಪ್ರಸಿದ್ಧ ನಾಗಿರುವ ಸ್ವಯಂವ್ಯಕ್ತನಾಗಿ ಆವಿರ್ಭವಿಸಿದ ಜ್ಞಾನಮೂರ್ತಿ (ವರಾಹಸ್ವಾಮಿ) ವೇಂಕಟಾಧೀಶ್ವರನಿಗೆ ಪೂರ್ವಸಿದ್ಧತೆ ಮಾಡ ಲೆಂದೇ ದಿವ್ಯಾವತಾರವನೆತ್ತಿ ನೆಲೆನಿಂತಿದ್ದಾನೆ.

"ರಥ್ಯಾಬಲ್ಯಂತರೇ ದೇವಂ ಬಲಿಹೋಮ ವಿವರ್ಜಿತಂ
ಆರಾಧಯೇ ದಪ್ರಧಾನಂ ನ ಕರ್ಯಾ ದುತ್ಸವಾದಿಕಂ"


(ಬೀದಿ - ಬಲಿಸ್ಥಾನಗಳಿಗೆ ಮಧ್ಯವಿರುವ ದೇವರ ಬಲಿ ಹೋಮಗಳಿರದೇ ಅಪ್ರಧಾನಗತಿಯಿಂದಲೇ ಆರಾಧಿಸಬೇಕು. ಉತ್ಸವಾದಿಗಳನ್ನು ಮಾಡಬಾರದು.)

ಎಂದು ವೈಖಾಸನಶಾಸ್ತ್ರದಲ್ಲಿರುವ ಆನಂದ ಸಂಹಿತೆ ಯಲ್ಲಿರುವಂತೆ ಒಂದೇ ಕ್ಷೇತ್ರದ ಎರಡು ವಿಗ್ರಹಗಳಿಗೆ ಸಮ ಪ್ರಾಧಾನ್ಯತೆಯಿಂದಲೇ ಪೂಜೆ-ಮಹೋತ್ಸವಾದಿಗಳನ್ನು ಮಾಡುವುದು.ನಿಷಿದ್ಧವೆಂದು ಜ್ಞಾನಮೂರ್ತಿಗೆ ಬಲಿಪೀಠಾರ್ಚನೆ ನಿತ್ಯಮಹೋತ್ಸವಾದಿಗಳು ಯಾವುವೂ ಇಲ್ಲದೇ,

"ಮತ್ಸ್ಥಾಪಿತವರಾಹಸ್ಯ ಪೂರ್ವಂ ಸ್ಯಾತ್ಪೂಜನಂ ಹರೇ,
ದರ್ಶನಂ ಸ್ನಾನದಾನಾಗ್ರೈ ರಿತ್ಯುಕ್ತ್ವೋಯಂ ಶ್ರಿಯಃ ಪತಿಃ
ತಥ್ಯಾ ತಸ್ಮೈತಿ ವರಂ ದತ್ವಾಕಾರಯಾಮಾಸತತ್ತಥಾಃ"

(ಹರಿ ನನ್ನ ಕೈಯಿಂದ ಸ್ಥಾಪಿಸಲ್ಪಟ್ಟಿರುವ ವರಾಹ ಸ್ವಾಮಿಗೆ ಸ್ನಾನಾದಿಗಳೊಡನೆ ಪೂಜೆ-ದರ್ಶನಗಳನ್ನು ಮೊದಲು ಜರುಗಿಸಬೇಕು ಎಂದು ಬ್ರಹ್ಮ ಹೇಳಲು ಶ್ರೀಯಃಪತಿ ಹಾಗೇ ಆಗ ಲೆಂದು ವರವನಿತ್ತು. ಹಾಗೆಯೇ ನಡೆದುಕೊಳ್ಳಲಾಯಿತು.)





# ನೀತಿ ಕಥೆ

# ಕಣ್ಣು ತೆರೆಸಿದ ನೇಕಾರ

-ಶ್ರೀಮತಿ. ಸುಧಾ ಮಧುಸೂದನ್



ಒಂದು ಊರಿನಲ್ಲಿ ಒಬ್ಬ ನೇಕಾರನಿದ್ದನು. ಅವನು ಒಬ್ಬ ಶಾಂತ ಸ್ವಭಾವದ ಮನುಷ್ಯ, ತುಂಬಾ ಪ್ರಾಮಾಣಿಕ ಹಾಗು ನಿಗರ್ವಿಯಾಗಿದ್ದನು. ಆತ ಕೋಪಗೊಂಡಿದ್ದನು ಆ ಊರಿನಲ್ಲಿ ಯಾರು ನೋಡಿರಲಿಲ್ಲ.

ಆ ಊರಿನ ಕಿಡಿಗೇಡಿ ಯುವಕರು ನೇಕಾರನಿಗೆ ಹೇಗಾದರೂ ಸಿಟ್ಟು ಬರಿಸಬೇಕೆಂದು ತೀರ್ಮಾನಿಸಿ ಒಮ್ಮೆ ಅವನ ಜವಳಿ ಅಂಗಡಿಗೆ ಹೋದರು. ಅವರು ನೇಕಾರನಲ್ಲಿ ಬೆಲೆ ಬಾಳುವ ಸೀರೆಯನ್ನು ಆಯ್ಕೆ ಮಾಡಿ ಅದರ ಬೆಲೆ ಕೇಳಿದರು.ನೇಕಾರನು ಅದಕ್ಕೆ 10 ನಾಣ್ಯಗಳು ಎಂದು ಹೇಳಿದನು.

ನೇಕಾರನನ್ನು ಛೇದಿಸುವ ಸಲುವಾಗಿ ಆ ಶ್ರೀಮಂತ ಯುವಕನು ನನಗೆ ಪೂರ್ತಿ ಸೀರೆ ಬೇಡ ಅರ್ಧಸಾಕು ಎಂದು ಆ ಬೆಲೆ ಬಾಳುವ ಸೀರೆಯು ಎರಡು ಭಾಗ ಮಾಡಿ ಒಂದು ಭಾಗದ ಬೆಲೆಯನ್ನು ವಿಚಾರಿಸಿದನು.ನೇಕಾರನು ಶಾಂತ ಚಿತ್ತದಿಂದ ಅದರ ಬೆಲೆ 5 ರೂಗಳು ಎಂದನು. ಆ ಯುವಕನು ಮತ್ತೆ ಆ ಸೀರೆಯನ್ನು ಎರಡು ಭಾಗ ಮಾಡಿ ಒಂದರ ಬೆಲೆಯನ್ನು ಕೇಳಿದನು.ನೇಕಾರನು ಸ್ವಲ್ಪವೂ ವಿಚಲಿತನಾಗದೆ ಬೆಲೆ ಹೇಳಿದನು, ಮತ್ತೆ ಆ ಯುವಕನು ಸೀರೆಯನ್ನು 2 ಭಾಗ ಮಾಡಿ ಬೆಲೆ ಕೇಳಿದನು.

ಹೀಗೆಯೇ ಆ ಸೀರೆಯ ಭಾಗವನ್ನು ತುಂಡರಿಸುತ್ತಾ ಹೋದನು. ಕೊನೆಗೆ “ಈ ಸೀರೆ ನನಗೀಗ ಯಾವ ಉಪಯೋಗಕ್ಕಿಲ್ಲ ನೇಕಾರರೆ ನನಗೆ ಇದು ಬೇಡ'' ಎಂದನು.

ನೇಕಾರರು ಕೋಪಗೊಳ್ಳದೆ “ಅಯ್ಯಾ ಈ ಸೀರೆ ನಿಮಗಷ್ಟೇ ಅಲ್ಲ ಯಾರಿಗೂ ಉಪಯೋಗಕ್ಕೆ ಬರುವುದಿಲ್ಲ” ಎಂದನು. ನೇಕಾರನ ಶಾಂತ ಚಿತ್ತತೆಯನ್ನು ನೋಡಿ ಯುವಕನಿಗೆ ತಾನು ಮಾಡಿದ ಕೆಲಸದಿಂದ ನಾಚಿಕೆಯಾಯಿತು.

“ಕ್ಷಮಿಸಿ ನೇಕಾರರೇ ನಾನು ಮಾಡಿದ ಕೆಲಸದಿಂದ ನಿಮಗೆ ನಷ್ಟವಾಯಿತು, ನಾನು ಇದರ ಪೂರ್ತಿ ಹಣವನ್ನು ಕೊಡುವೆ”ಎಂದು 10 ರೂಗಳನ್ನು ಕೊಡಲು ಹೋದನು.ಆದರೆ ನೇಕಾರನು ಹಣವನ್ನು ಸ್ವೀಕರಿಸಲಿಲ್ಲ.

ಶ್ರೀಮಂತ ಯುವಕನ ಅಹಂಗೆ ಪೆಟ್ಟು ಬಿದ್ದಿತು.“ ನಾನು ಶ್ರೀಮಂತ, ಹಣ ಕೊಟ್ಟರೆ ನನಗೆ ನಷ್ಟವಿಲ್ಲ,ವ್ಯತ್ಯಾಸವೂ ಇಲ್ಲ,ಆದರೆ ನೇಕಾರರೇ ನೀವೋ ಬಡವರು ಅದಕ್ಕೆ ತೆಗೆದುಕೊಳ್ಳಿ ಹಣ” ಎಂದನು.

ನೇಕಾರನು ನಗುತ್ತಾ ಹೀಗೆಂದು ನುಡಿದನು “ಅಯ್ಯಾ ಹುಡುಗಾ ನೀನು ನನಗಾದ ನಷ್ಟವನ್ನು ಭರಿಸಲಾರೆ, ಸ್ವಲ್ಪ ಯೋಚಿಸು ಹತ್ತಿ ಬೆಳೆಯಲು, ಹತ್ತಿಯಿಂದ ನೂಲು ತೆಗೆಯಲು, ನೂಲಿನಿಂದ ಸೀರೆ ನೇಯಲು,ನೇಯ್ದ ಸೀರೆಗೆ ವಿಧವಿಧವಾದ ಬಣ್ಣ ಹಾಕಲು ರೈತನು, ಹಾಗೂ ನನ್ನ ಹೆಂಡತಿ ನಾನು ನನ್ನ ಮಕ್ಕಳು ಎಷ್ಟು ಶ್ರಮ ಪಟ್ಟಿದ್ದೆವು. ಇಷ್ಟು ಶ್ರಮ ಸಾರ್ಥಕವಾಗುವುದು.ಯಾವಾಗ ಅಂದರೆ ಆ ನೇಯ್ದ ಸೀರೆಯನ್ನು ಯಾರಾದರೂ ಉಟ್ಟು ಸಂತೋಷಿಸಿದಾಗ ಮಾತ್ರ. ಆದರೆ ನೀನೋ ಆ ಸೀರೆಯನ್ನು ತುಂಡು ಮಾಡಿ ಬಿಟ್ಟೆ ಕೇವಲ ಹಣ ಕೊಡುವುದರಿಂದ ನೀನು ಆ ನಷ್ಟ ತುಂಬಲಾರೆ” ಎಂದರು.

ನೇಕಾರನ ದನಿಯಲ್ಲಿ ಆಕ್ರೋಶಕ್ಕೆ ಬದಲಾಗಿ ಸೌಮ್ಯತೆ ಮತ್ತು ಅಂತಃಕರಣವಿತ್ತು, ಇದನ್ನು ಕಂಡು ಯುವಕನಿಗೆ ತನ್ನ ತಪ್ಪಿನ ಅರಿವಾಗಿ ನೇಕಾರನ ಕಾಲು ಹಿಡಿದು ಕ್ಷಮಿಸೆಂದು ಕೇಳಿಕೊಂಡನು. ಯುವಕನ ಪಶ್ಚಾತಾಪವೇ ಈ ಸೀರೆಗೆ ಬೆಲೆ ಎಂದು ನೇಕಾರನು ನಗುತ್ತಾ ಯುವಕನ ಕಣ್ಣು ತೆರೆಸಿದನು.

ಚಿತ್ರಕಥೆ

# ವೇದವ್ಯಾಸನು

ಕಥೆ: ತೆಲುಗು ಮೂಲ: ಡಿ. ಶ್ರೀನಿವಾಸದೀಕ್ಷಿತರು
ಅನುವಾದ: ಶ್ರೀಮತಿ
ಚಿತ್ರಗಳು: ಕೆ.ತುಲಸೀ ಪ್ರಸಾದ್

ಬೇಟೆಗಾರರ ರಾಜ ದಾಸರಾಜ. ಆತನ ಸಾಕು ಮಗಳೇ ಮತ್ಸ್ಯಗಂಧಾ. ಯಮುನಾ ನದಿಯಲ್ಲಿ ನಾವೆಯನ್ನು ನಡೆಯುತ್ತಾ ಜನಗಳನ್ನು ನದಿ ದಾಟಿಸುವುದು ಆತನ ವೃತ್ತಿ ಒಂದು ದಿನ.......






ಲೋಕಾಃ ಸಮಸ್ತಾಃ ಸುಖಿನೋ ಭವಂತು!

ಸಮಾಪ್ತಿ

## ರಸಪ್ರಶ್ನೆಗಳು :

ಅ) ಐದು ಜನ ಪಾಂಡವರಲ್ಲಿ ಗಾಂಡೀವಿ ಎಂದು ಹೆಸರು ಪಡೆದ ಪಾಂಡವ ಯಾರು?

1. ಧರ್ಮರಾಜ 2. ಭೀಮ
3. ಅರ್ಜುನ 4. ಸಹದೇವ

ಆ) ಅರ್ಜುನನಿಗೆ ಗಾಂಡೀವವನ್ನು ನೀಡಿದ ದೇವತೆ ಯಾರು?

1. ಅಗ್ನಿ 2. ವರುಣ
3. ವಾಯು 4. ಇಂದ್ರ

ಇ) ಅರ್ಜುನನಿಗೆ ಪಾಶುಪತಾಸ್ತ್ರವನ್ನು ನೀಡಿದವರು ಯಾರು?

1. ಶಿವ 2. ವಿಷ್ಣು
3. ಬ್ರಹ್ಮ 4. ಇಂದ್ರ

ಈ) ಜರಾಸಂಧಾನ ಅಳಿಯ ಯಾರು?

1. ಕಂಸ 2. ಜಯದ್ರಥ
3. ದುಯೋ೯ಧನ 4. ಭೀಮ

# ಕ್ವಿಜ್

ಉ) ಜರಾಸಂಧಾನ ಇಬ್ಬರು ಹೆಣ್ಣುಮಕ್ಕಳ ಹೆಸರೇನು?

1. ಅಂಬಾ-ಅಂಬಾಲಿಕೆ 2. ದ್ರೌಪದಿ-ಶಿಖಂಡಿ
3. ಅಸ್ತಿ-ಪ್ರಾಪ್ತಿ 4. ಕುಂತಿ-ಮಾದ್ರಿ

ಊ) ಕಂಸನ ತಂದೆ ಯಾರು?

1. ಉಗ್ರಸೇನ 2. ಶೂರಸೇನ
3. ವೀರಸೇನ 4. ವೃಷಸೇನ


ಋ) ಬಭ್ರುವಾಹನ ನ ತಂದೆ ಯಾರು?

1. ಧರ್ಮರಾಜ 2. ಭೀಮ
3. ಅರ್ಜುನ 4. ನಕುಲ

ಉತ್ತರಗಳು:
ಅ) 3 ಆ) 1 ಇ) 1 ಈ) 1 ಉ) 3 ಊ) 1 ಋ) 3

# ಚಿತ್ರಲೇಖನ

ಈ ಗೊಂಬೆಗೆ ಬಣ್ಣವನ್ನು ತುಂಬಿರಿ.......




ಪಕ್ಕದಲ್ಲಿರುವ ಗೊಂಬೆಯನ್ನು ಕೆಳಗಿನ ಬಾಕ್ಸ್‌ನಲ್ಲಿ ಬರಿಯೋಣ...



Edited and Published on behalf of T.T.Devasthanams by **Prof. K.Rajagopalan**, Phd.,
Chief Editor, T.T.D. and Printed at T.T.D. Press by **Sri P. Ramaraju,** M.A., Special Officer (Press & Publications), T.T.D. Press, Tirupati - 517 507.



ತಿರುಮಲೆ ಆಕಾಶಗಂಗತೀರ್ಥದ ಬಳಿ ಮೊಟ್ಟ ಮೊದಲ ಬಾರಿ
ನಡೆಸಿದ ಹನುಮಜಯಂತಿಯ ದೃಶ್ಯಮಾಲಿಕೆ



ತಿರುಮಲೆ ವಸಂತಮಂಟಪದಲ್ಲಿ ವೈಭವವಾಗಿ ನಡೆದ ವಿಷ್ಣು ಅರ್ಚನೆಯಲ್ಲಿ ಪಾಲ್ಗೊಂಡ
ಅಡಿಷನಲ್ ಕಾರ್ಯನಿರ್ವಹಣಾಧಿಕಾರಿ ಶ್ರೀ ಎ.ವಿ.ಧರ್ಮಾರೆಡ್ಡಿ,ಐ.ಡಿ.ಈ.ಎಸ್., ಯವರು

# ಶ್ರೀನಿವಾಸಮಂಗಾಪುರಂ
## ಶ್ರೀ ಕಲ್ಯಾಣ ವೆಂಕಟೇಶ್ವರ ಸ್ವಾಮಿಯವರ ಸಾಕ್ಷಾತ್ಕಾರ ವೈಭವೋತ್ಸವ
## 2021 ಜುಲೈ 13 ರಿಂದ 15 ರ ವರೆಗೆ

